ಚಿತ್ರದುರ್ಗ.	ಚಿತ್ರದುರ್ಗ ...	...	...	1	24	3	95	5	91	— 1	96	ಅಕ್ಕಿ ದುಯಂ	8·00	8·00	10·20
	ಚಳ್ಳಕೆರೆ ...	3	74	...	76	5	98	4	19	+ 1	79	ತರಹ			
	ಹಿರಿಯೂರು ...	...	10	...	92	6	94	5	63	+ 1	31	ರಾಗಿ	21·00	20·00	24·10
	ಹೊಳಲ್ಕೆರೆ ...	...	15	1	5	7	35	6	50	+ 0	85	ಹುರುಳಿ	14·00	14·00	...
	ದಾವಣಗೆರೆ ...	1	25	1	7	3	45	7	3	— 3	58	ಜೋಳ	18·00	18·00	21·30
	ಮೊಳಕಾಲ್ಮುರು ...	...	38	...	78	4	7	5	53	— 1	46	ಕಡಲೆ	10·00	10·00	10·00
	ಜಗಳೂರು ...	...	...	1	4	2	78	6	63	— 3	85				
	ಹೊಸದುರ್ಗ ...	...	14	1	6	5	7	5	63	+ 0	61				
	ಹರಿಹರ ...	...	85	...	50	3	78	5	80	— 2	2				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	73	...	94	4	81	5	88	— 1	7				
	ಸಂಸ್ಥಾನದಲ್ಲಿ ಸರಾಸರಿ ...	...	66	1	58	8	5	8	9	— 0	4				

ಡಿಸ್ಟ್ರಿಕ್ಟು ರಿಪೋರ್ಟುಗಳು.

8. ಬಜಾರಿನಲ್ಲಿ ಸರಬರಾಯಿ ಹ್ಯಾಗಿದೆ.
9. ವ್ಯವಸಾಯ ಕಾರ್ಯದ ಅಭಿವೃದ್ಧಿ, ನಿಂತಿರುವ ಪೈರುಗಳ ಸ್ಥಿತಿ, ಬೆಳೆಗಳು ಎಷ್ಟಾಗಬಹುದೆಂಬ ನಿರೀಕ್ಷೆ, ಮತ್ತು ಸುಗ್ಗಿಯ ಕಾಲದಲ್ಲಿ ಉಂಟಾಗಬಹುದಾದ ಹುಟ್ಟುವಳಿ, ಹುಳುಗಳು ಅಥವಾ ಸ್ವಾಭಾವಿಕವಾದ ಇತರ ವಿಪತ್ತುಗಳಿಂದ ಪೈರುಗಳಿಗೆ ಉಂಟಾದ ನಷ್ಟ.
10. ಕಾಲದ ಆಯತಿ, ಮಳೆಯು ಸಾಲದೆ ಇರುವ ಪ್ರದೇಶಗಳು, ದುರ್ಭಿಕ್ಷ ಉಂಟಾಗಿರುವ ಸ್ಥಳಗಳು, ರಿಲೀಫ್ ಯಾ ಸಹಾಯವನ್ನು ಪಡೆಯುತ್ತಿರುವ ಜನರ ಸಂಖ್ಯೆ, ಮತ್ತು ಆಹಾರ ಸಾಮಗ್ರಿಯ ಸ್ಥಿತಿ.
11. ಜನಗಳ ಆರೋಗ್ಯ.
12. ವ್ಯವಸಾಯಕ್ಕೆ ಸಂಬಂಧಿಸುವ ಪಶುಗಳು, ದನಗಳಿಗೆ ಮೇಯುವುದಕ್ಕೆ ಹುಲ್ಲುಕಾವಲು ಇಲ್ಲದೇ ಹೋಗುವುದು, ಮೇವು ಮುಂತಾದುವುಗಳ ವಿಷಯವಾಗಿ ವರದಿಗಳು.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಅದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜಾ.	ಚಾಲ್ತಿ.	
ಅಕ್ಕಿ ರೂಪಾಯಿ 1ಕ್ಕೆ ...	7	6 ರಿಂದ 6¾ರ ವರಿಗೆ	ಸೇರುಗಳು.
ರಾಗಿ ,, ...	20	14 ರಿಂದ 15ರ ವರಿಗೆ	ಸೇರುಗಳು.

ವ್ಯವಸಾಯ ಕೆಲಸಗಳು—ಹೊಲ, ಗದ್ದೆಗಳನ್ನು ಉಳುವದು.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕಳೆದವಾರದಲ್ಲಿ ಬಿತ್ತುವದಾಗಲಿ ಅಥವಾ ಕುಯ್ಯುವದಾಗಲೀ ಯಾವದೂ ಇಲ್ಲ. ಡಿಸ್ಟ್ರಿಕ್ಟಿನಲ್ಲಿ ಕೆಲವು ಭಾಗಗಳಲ್ಲಿ ಉಳುವದು ನಡಿಯುತ್ತಾ ಇತ್ತು.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕು.

11. ಆನೆಕಲ್ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಮತ್ತು ಕ್ಲೋಸಪೇಟೆ ಊರಿನಲ್ಲಿಯೂ ಕಾಲರಾ ಇದೆಯೆಂದು ರಿಪೋರ್ಟಾಗಿರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಉಳುವದು ಇನ್ನೂ ನಡಿಯುತ್ತಾ ಇದೆ.

ನಿಂತಿರುವ ಪೈರುಗಳ ಸ್ಥಿತಿ—ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಚಿಂತಾಮಣಿಯ ಕೆಲವು ಭಾಗಗಳಲ್ಲಿ ಸಾಮೆ. ಮುಳಬಾಗಲಿನಲ್ಲಿ ಸಜ್ಜೆ ಮತ್ತು ಹಾರಕ. ಮುಳಬಾಗಲು ಮತ್ತು ಚಿಕ್ಕಬಳ್ಳಾಪುರ, ಈ ತಾಲ್ಲೂಕುಗಳಲ್ಲಿ ಕಾರ್ತೀಕ ಭತ್ತ. ಚಿಕ್ಕಬಳ್ಳಾಪುರದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿ.

ಕುಯ್ಯಲಾದ ಪೈರುಗಳು—ಬೌರಿಂಗ್‌ಪೇಟೆ, ಚಿಂತಾಮಣಿ ಮತ್ತು ಗೋರಿಬಿದನೂರು, ಈ ತಾಲ್ಲೂಕುಗಳು ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿ ವೈಶಾಖಿ ಭತ್ತ. ಕೋಲಾರದ ತಾಲ್ಲೂಕಿನಲ್ಲಿ ಕಬ್ಬು.

ಉಂಟಾಗಬಹುದಾದ ಉತ್ಪತ್ತಿ:—ವೈಶಾಖಿ ಭತ್ತ 6 ರಿಂದ 12 ಆಣೆ ವರಿಗೆ, ಕಬ್ಬು 12 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಬೌರಿಂಗ್‌ಪೇಟೆ ತಾಲ್ಲೂಕು ರಾಬರ್ಟ್ಸನ್ ಮತ್ತು ಉರಿಗಂ ಇವುಗಳಲ್ಲಿ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು, ಮಾಲೂರು ತಾಲ್ಲೂಕಿನ ಮಾಸ್ತಿಯಲ್ಲಿ ಕಾಲರಾ, ಮತ್ತು ಕೋಲಾರದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಶಿಡುಬು, ಇವುಗಳು ಇರುವುದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಚಿಕ್ಕಬಳ್ಳಾಪುರದ ತಾಲ್ಲೂಕಿನ ಮಂಡಿಕಲ್ಲು ಹೋಬಳಿಯ ಕೆಲವು ಭಾಗಗಳಲ್ಲಿ ದನಗಳು "ಚಪ್ಪೆ ರೋಗ" ದಿಂದ ನರಳುತ್ತಾ ಇವೆಯೆಂದು ರಿಪೋರ್ಟಾಗಿರುವದು ಹೊರ್ತು, ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು—ಡಿಸ್ಟ್ರಿಕ್ಟಿನಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಉಳುವದೂ ಮತ್ತು ಬಿತ್ತುವದೂ ನಡಿಯುತ್ತಾ ಇವೆ.

ನಿಂತಿರುವ ಪೈರುಗಳ ಸ್ಥಿತಿ—ಚೆನ್ನಾಗಿದೆ.

ಬಿತ್ತನೆಯಾದ ಪೈರುಗಳು—ಶೀರ್‍ಯದಲ್ಲಿ ಭತ್ತ, ಪಾವಗಡದಲ್ಲಿ ರಾಗಿ; ಕುಣಿಗಲು ಮತ್ತು ಕೊರ್ಟಗೆರೆ ಇವುಗಳಲ್ಲಿ ಕಬ್ಬು; ತಿಪಟೂರಿನಲ್ಲಿ ಉದ್ದು ಮತ್ತು ಹೆಸರೂ; ಮತ್ತು ಶೀರ್‍ಯ, ತಿಪಟೂರು, ಇವುಗಳಲ್ಲಿ ಎಳ್ಳು.

ಕುಯ್ಯಲಾದ ಪೈರುಗಳು—ತುಮಕೂರು, ಮಧುಗಿರಿ, ಚಿಕ್ಕನಾಯಕನಹಳ್ಳಿ, ತಿಪಟೂರು, ಪಾವಗಡ, ಕೊರ್ಟಗೆರೆ, ಇವುಗಳಲ್ಲಿ ಭತ್ತ; ಮತ್ತು ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ಕಬ್ಬು.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಚನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

708

ಮೈಸೂರು.

...ಚೆನ್ನಾಗಿದೆ.

...ಗುಂಡ್ಲುಪೇಟೆ, ನಂಜನಗೂಡು, ಮಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳಲ್ಲಿ ...ರ್ ಪೈರುಗಳನ್ನು ಬಿತ್ತುವದಕ್ಕೆ ತಯಾರ್ಮಾಡುತ್ತಾ ಇದ್ದಾರೆ.

...ವೆಂಬರ ಜೋಳ, ಕಬ್ಬು, ಕಾರ ಭತ್ತ, ಹರಳು, ತೊಗರಿ, ಎಳ್ಳು, ಮುಂತಾದವುಗಳು ...ಲ್ಲಿಯೂ ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

...ರುಗಳು—ಶ್ರೀರಂಗಪಟ್ಟಣ, ಎಡತೊರೆ, ನಂಜನಗೂಡು, ಈ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತ.

...ವ್ಯಯಾದ ಪೈರುಗಳು—ಶ್ರೀರಂಗಪಟ್ಟಣದ ಕೆಲವು ಭಾಗಗಳಲ್ಲಿ ತರೀ ಭೂಮಿಯಲ್ಲಿ ಬಿತ್ತನೆಯಾದ ಉದ್ದು ಮತ್ತು ಹೆಸರು. ಎಡತೊರೆಯ ಕೆಲವು ಭಾಗಗಳಲ್ಲಿ ರಾಗಿ. ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬನ್ನು ಅರೆಯಾಡಿ, ಬೆಲ್ಲವನ್ನು ಮಾಡುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ನಂಜನಗೂಡು, ಮಂಡ್ಯ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ. ರೈತರಲ್ಲೂ ಮತ್ತು ವರ್ತಕರಲ್ಲಿಯೂ ಸಾಕಾದಷ್ಟು ಆಹಾರ ಜಿನಸಿ ಇವೆ ಎಂದು ರಿಪೋರ್ಟಾಗಿದೆ.

11. ಗುಂಡ್ಲುಪೇಟೆ, ನಂಜನಗೂಡು, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ ಇನ್ನೂ ಇದ್ದುಕೊಂಡು ಇರುವದು ಹೊರ್ತು, ಜನಾರೋಗ್ಯವು ಚೆನ್ನಾಗಿದೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ, ದನಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಹಾಸನ, ಹೊಳೇನರಸೀಪುರ, ಈ ತಾಲ್ಲೂಕುಗಳಲ್ಲಿ ಕಬ್ಬು, ರಾಗಿ, ತೊಗರಿ, ಹುಚ್ಚೆಳ್ಳು ಮತ್ತು ಜೋಳ; ಮಂಜರಾಬಾದು, ಅರಕಲಗೂಡು, ಬೇಲೂರು, ಚೆನ್ನರಾಯಪಟ್ಟಣ, ಅರಸೀಕೆರೆ, ಈ ತಾಲ್ಲೂಕುಗಳಲ್ಲಿಯೂ, ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ, ಭತ್ತ, ಮತ್ತು ರಾಗಿ; ಇವುಗಳು ಒಳ್ಳೇ ಸ್ಥಿತಿಯಲ್ಲಿವೆ ಎಂದು ರಿಪೋರ್ಟಾಗಿದೆ. ಚೆನ್ನರಾಯಪಟ್ಟಣ, ಅರಸೀಕೆರೆ, ಈ ತಾಲ್ಲೂಕುಗಳಲ್ಲಿ ಹುಚ್ಚೆಳ್ಳು, ಜೋಳ ಮತ್ತು ಕೊತ್ತಂಬರಿ, ಇವುಗಳಿಗೂ, ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿ ಭತ್ತಕ್ಕೂ, ಮಳೆ ಹೆಚ್ಚಾಗಿ ಬೇಕಾಗಿದೆ.

ಬಿತ್ತನೆಯಾದ ಪೈರುಗಳು—ಅರಸೀಕೆರೆ ತಾಲ್ಲೂಕಿನಲ್ಲಿ ಮೆಣಸಿನಕಾಯಿ; ಚೆನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಕಬ್ಬು.

~~ವ್ಯಯವಾದ ಪೈರು... ಚೆನ್ನರಾಯಪಟ್ಟಣ... ...ಲ್ಲಿ ... ...ತ್ತಿದ್ದಾರೆ.~~

10. ಕಾಲದ ಆಯತಿಯು ಸುಮಾರಾಗಿದೆ. ಚೆನ್ನರಾಯಪಟ್ಟಣ, ಅರಸೀಕೆರೆ, ಈ ತಾಲ್ಲೂಕುಗಳಲ್ಲಿ ಮಳೆ ಹೆಚ್ಚಾಗಿ ಬೇಕಾಗಿದೆ. ಆಹಾರ ಜಿನಸಿ ಸಾಕು.

11. ಹಾಸನ, ಹೊಳೇನರಸೀಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ, ಮಂಜರಾಬಾದ್ ತಾಲ್ಲೂಕಿನಲ್ಲಿ ಛಳಿಜ್ವರಾ ಮತ್ತು ಆಮಶಂಕೆ, ಚೆನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ಆಮಶಂಕೆ ಮತ್ತು ಛಳಿಜ್ವರ, ಇವುಗಳು ಇವೆ ಎಂದು ರಿಪೋರ್ಟಾಗಿರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು—ಸಾಗರದ ಮತ್ತು ನಗರದ ತಾಲ್ಲೂಕುಗಳಲ್ಲಿ ಉಳುವ ಕೆಲಸಗಳು ನಡಿಯುತ್ತಿವೆ.

ನಿಂತಿರುವ ಪೈರುಗಳು—ಶಿವಮೊಗ್ಗ, ಚೆನ್ನಗಿರಿ, ಶಿಕಾರಿಪುರ, ಸಾಗರ, ಈ ತಾಲ್ಲೂಕುಗಳಲ್ಲಿಯೂ, ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ, ಕಬ್ಬು; ಸೊರಬದ ತಾಲ್ಲೂಕಿನಲ್ಲಿಯೂ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಭತ್ತ; ಸಾಗರದ ತಾಲ್ಲೂಕಿನ ಕರೂರು ಮತ್ತು ಭಾರಂಗಿ ಹೋಬಳಿಗಳಲ್ಲಿ ಕಾರ್ ಭತ್ತ; ಇವುಗಳು ಒಳ್ಳೇ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಹೊನ್ನಾಳಿ ತಾಲ್ಲೂಕಿನಲ್ಲಿ ಹುಚ್ಚೆಳ್ಳನ್ನು ಬಿತ್ತುತ್ತಾ ಇದ್ದಾರೆ. ಚೆನ್ನಗಿರಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತವನ್ನೂ ಮತ್ತು ಜೋಳವನ್ನೂ, ಶಿಕಾರಿಪುರ, ಸಾಗರ, ತೀರ್ಥಹಳ್ಳಿ, ಈ ತಾಲ್ಲೂಕುಗಳಲ್ಲಿ ಭತ್ತವನ್ನೂ, ಬಿತ್ತಿ ಇದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಚೆನ್ನಗಿರಿ, ಹೊನ್ನಾಳಿ, ಶಿಕಾರಿಪುರ, ನಗರ, ಈ ತಾಲ್ಲೂಕುಗಳಲ್ಲಿ ಸಿಡುಬು ಇದ್ದುಕೊಂಡು ಇದೆ.

12. ದನಗಳು ಆರೋಗ್ಯವಾಗಿವೆ. ಸಾಗರದ ತಾಲ್ಲೂಕಿನಲ್ಲಿ ಪ್ರಾಣಭಯವಿಲ್ಲದ ಗೋಮಾರೀ ರೋಗವು ಇದೆ. ಹುಲ್ಲೂ ಮೇವೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಕಡೂರು ಮತ್ತು ಶೃಂಗೇರಿಯಲ್ಲಿ ಉಳುತ್ತಿದ್ದಾರೆ.

ನಿಂತಿರುವ ಪೈರುಗಳು—ಕೊಪ್ಪದಲ್ಲಿ ಭತ್ತ ; ಚಿಕ್ಕಮಗಳೂರಿನಲ್ಲಿ ಕಬ್ಬು, ಭತ್ತ ; ... ಭತ್ತ ಮತ್ತು ಕಬ್ಬು ; ಮೂಡಿಗೆರೆಯಲ್ಲಿ ಕೋಡೇ ಭತ್ತ ಮತ್ತು ರಾಗಿ ; ಇವು... ಡಗೆರೆ ತಾಲ್ಲೂಕು ಕಲಶಾ ಹೋಬಳಿ ತವುಡಿ ಗ್ರಾಮದಲ್ಲಿ ಕಾಫಿ ಸಸಿಗಳಿಗೆ ಹಸರು ...ಳು ಹಿಡಿದು, ನಷ್ಟವನ್ನು ಉಂಟುಮಾಡುತ್ತಾ ಇವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಕಡೂರು ತಾಲ್ಲೂಕಿನಲ್ಲಿ ಜೋಳ, ಹುಚ್ಚೆಳ್ಳು, ಹೆಸರು, ಕೊತ್ತುಂಬರಿ, ಉದ್ದು, ಇವುಗ...ಳನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು ಮತ್ತು ಉತ್ಪತ್ತಿ :—

ಕಡೂರಿನಲ್ಲಿ ಕೋಡೇ ಭತ್ತ ಮತ್ತು ಕಬ್ಬು—ಉತ್ಪತ್ತಿ 12 ಆಣೆ.

10. ಕಾಲದ ಆಯುತಿಯು ಚೆನ್ನಾಗಿದೆ.

11. ಕೊಪ್ಪದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬು, ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ ಮತ್ತು ಚಿಕ್ಕಮಗಳೂರು ಪಟ್ಟಣದಲ್ಲಿಯೂ ಪ್ಲೇಗು, ಇವುಗಳು ಇರುವವು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಇವುಗಳು ಹರಡದ ಹಾಗೆ ಇರಲು, ತಕ್ಕ ಏರ್ಪಾಡುಗಳನ್ನು ಮಾಡುತ್ತಾ ಇದ್ದಾರೆ.

12. ದನಗಳು ಆರೋಗ್ಯವಾಗಿವೆ. ಚಿಕ್ಕಮಗಳೂರು ತಾಲ್ಲೂಕಿನಲ್ಲಿ "ದೊಡ್ಡ ರೋಗವು" ಕಮ್ಮಿಯಾಗಿ ಬರುತ್ತಾ ಇದೆಯೆಂದು ರಿಪೋರ್ಟಾಗಿದೆ. ತರೀಕೆರೆ ತಾಲ್ಲೂಕಿನಲ್ಲಿ ಪ್ರಾಣಭಯವಿಲ್ಲದ "ದೊಡ್ಡ ರೋಗವು" ಶುರೂ ಆಗಿದೆ. ರೋಗ ತಾಕಿದ ದನಗಳನ್ನು ಪ್ರತ್ಯೇಕವಾಗಿ ಇಟ್ಟಿದ್ದಾರೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳ ಸ್ಥಿತಿ—ಚಿತ್ರದುರ್ಗ ಮತ್ತು ದೇವನಗರೆ ತಾಲ್ಲೂಕುಗಳಲ್ಲಿ ಕಬ್ಬೂ ಮತ್ತು ಭತ್ತವೂ ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಹಿರಿಯೂರು, ಹೊಳಲ್ಕೆರೆ ಮತ್ತು ಜಗಲೂರು ಈ ತಾಲ್ಲೂಕುಗಳಲ್ಲಿ ಜೋಳ ಮತ್ತು ಹರಳು ಬೀಜಗಳು ; ಮತ್ತು ಹಿರಿಯೂರು, ಜಗಲೂರು, ಈ ತಾಲ್ಲೂಕುಗಳಲ್ಲಿಯೂ ಮತ್ತು ಹರಿಹರದ ಸಬ್ ತಾಲ್ಲೂಕಿನಲ್ಲಿಯೂ [illegible]

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಜೂನ್ 2?ನೆಯ ತಾರೀಖು

ಎ. ರಂಗಸ್ವಾಮಿ ಐಯ್ಯಂಗಾರ್,
ರವಿನ್ಯೂ ಕಮಿಷನರ್.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು. [ಸಂ. 27.

ಬೆಂಗಳೂರು, ಗುರುವಾರ, ಜುಲೈ ತಾ|| 4, ಸನ್ 1907.

IVನೆ ಭಾಗ.

ಸರ್ಕಾರಿ ಕಾಗದ ಪತ್ರಗಳು.

1907ನೆಯ ವರ್ಷದ 25ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ (1907ನೆಯ ವರ್ಷದ ಜೂನ್ 22ನೆಯ ತಾರೀಖು).

	ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ.										ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯ... ಧಾರಣೆಯಿತ್ತು ಎಂಬುದು ಮತ್ತು ಬಜಾರಿನ... ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
		ಈ ವಾರ.		ಆದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ.									
						ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—) ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.					
	1	2		3		4		5		6		7			
		I.	c.	I.	c.	I.	c.	I.	c.	I.	c.	...	ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂ... ಕ್ಕೆ ಹಿಂದಿ... ಹತ್ತು ... ರ್ಷಗಳ ... ರಾಸರಿ; ... ಸೇರುಗಳ...
ಬೆಂಗಳೂರು.	ಬೆಂಗಳೂರು ದಂಡು ...	...	42	...	...	4	98	...	...	...	...				
	ಸಿಟಿ ಮತ್ತು ತಾಲ್ಲೂಕು ...	...	8	...	53	11	18	8	86	+ 2	32				
	ಹೊಸಕೋಟೆ ...	...	23	...	42	10	27	7	70	+ 2	57				
	ದೊಡ್ಡಬಳ್ಳಾಪುರ ...	...	53	...	40	7	21	8	32	— 1	11				
	ನೆಲಮಂಗಲ ...	...	10	...	26	8	88	7	34	+ 1	54				
	ಕಾನಕಾನಹಳ್ಳಿ ...	...	16	...	27	10	33	9	26	+ 1	7				
	ಮಾಗಡಿ ...	...	10	...	30	18	18	6	42	+ 11	76	ಅಕ್ಕಿ ದುಯಂ ತರಹ	7·00	7·00	9·3
	ಚೆನ್ನಪಟ್ಣ ...	...	3	...	16	13	85	8	8	+ 5	77				
	ಆನೇಕಲ್ಲು ...	...	14	...	29	12	77	10	35	+ 2	42	ರಾಗಿ	15·00	15·00	19·8
	ದೇವನಹಳ್ಳಿ ...	...	90	...	21	10	65	7	52	+ 3	13	ಹುರುಳಿ	12·00	12·00	...
	ಕ್ಲೋಸ್‌ಪೇಟೆ ...	...	35	...	29	15	76	8	60	+ 7	16	ಕಡಲೆ	9·00	9·00	10·1
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	26	...	31	11	91	8	24	+ 3	67				
ಕೋಲಾರ.	ಕೋಲಾರ ...	...	35	...	25	11	64	6	38	+ 5	26	ಅಕ್ಕಿ ದುಯಂ ತರಹ	7·00	7·00	9·0
	ಬೌರಿಂಗಪೇಟೆ ...	...	59	...	40	8	2	7	15	+ 0	87				
	ಚಿಂತಾಮಣಿ ...	1	42	...	33	10	67	6	...	+ 4	67	ರಾಗಿ	17·00	17·00	22·00
	ಮುಳಬಾಗಲು ...	...	75	...	57	12	92	6	80	+ 6	12	ಹುರುಳಿ	15·00	15·00	...
	ಶಿಡ್ಲಘಟ್ಟ ...	..	52	...	29	10	35	6	73	+ 3	62	ಕಡಲೆ	9·00	8·00	8·7
	ಚಿಕ್ಕಬಳ್ಳಾಪುರ ...	...	92	1	9	9	61	9	45	+ 0	16				
	ಬಾಗೆಪಲ್ಲಿ ...	...	32	...	49	7	99	4	62	+ 3	37				
	ಗೋರಿಬಿದನೂರು ...	...	6	...	22	5	91	5	62	+ 0	29				
	ಮಾಲೂರು ...	...	26	...	43	10	5	7	85	+ 2	20				
	ಶ್ರೀನಿವಾಸಪುರ ...	..	85	...	37	8	81	7	12	+ 1	69				
	ಗುಡಿಬಂಡೆ ...	...	34	...	76	8	36	5	57	+ 2	79				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	58	...	48	9	48	6	66	+ 2	82				

ಡಿಸ್ಟ್ರಿಕ್ಟು ಮತ್ತು ಸ್ಥಳ.		ಶನಿವಾರ ಬೆಳಿಗ್ಯೆ 8 ಘಂಟೆಯ ವರೆಗೆ ಬಿದ್ದ ಮಳೆ.											ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
		ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ವರ್ಗದ ಹೆಚ್ಚು (+) ಕಡಮೆ (—)ಯನ್ನು 5ನೆಯ ವರ್ಗದೊಂದಿಗೆ ಹೋಲಿಸಿದ ಲೆಕ್ಕ.						
1		2		3		4		5		6			7			
		I.	c.	I.	c.	I.	c.	I.	c.		I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ತುಮಕೂರು.	ತುಮಕೂರು ...	1	8	...	42	9	29	8	16	+	1	13				
	ಮದ್ದಗಿರಿ ...	...	35	...	23	4	98	5	10	—	0	12				
	ಚಿಕ್ಕನಾಯಕನಹಳ್ಳಿ ...	1	74	...	59	7	79	8	51	—	0	72				
	ಸೀರ ...	...	56	...	22	4	50	5	52	—	1	2				
	ಗುಬ್ಬಿ ...	...	20	...	28	8	7	6	51	+	1	56				
	ತಿಪಟೂರು ...	...	...	...	20	6	84	7	54	—	0	70				
	ಪಾವಗಡ ...	...	89	...	28	3	85	5	7	—	1	22	ಅಕ್ಕಿ ದುಯಂ ತರಹ	8·50	8·50	9·15
	ಕುಣಿಗಲು ...	...	7	...	38	10	54	7	3	+	3	51				
	ಕೊರಟಗೆರೆ ...	...	39	...	22	7	60	5	85	+	1	75	ರಾಗಿ	18·00	18·00	22·00
	ತುರುವೆಕೆರೆ ...	...	10	...	28	5	55	6	79	—	1	24	ಹುರುಳಿ	16·00	16·00	...
													ಕಡಲೆ	9·00	9·00	9·16
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	54	...	31	6	90	6	61	+	0	29				
ಮೈಸೂರು.	ಮೈಸೂರು ...	...	39	...	43	10	25	10	55	—	0	30	ಅಕ್ಕಿ ದುಯಂ ತರಹ	7·50	7·50	9·94
	ಚಾಮರಾಜನಗರ ...	...	...	...	33	9	23	11	9	—	1	86				
	ಶ್ರೀರಂಗಪಟ್ಟಣ ...	...	...	...	26	12	8	8	12	+	3	96	ರಾಗಿ	15·75	15·75	19·39
	ಹುಣಸೂರು ...	...	60	1	1	10	36	11	19	—	0	83	ಹುರುಳಿ	15·50	15·50	...
	ಯಡತೊರೆ ...	...	...	...	58	9	41	8	84	+	0	57	ಕಡಲೆ	9·25	9·25	10·35
	ಹೆಗ್ಗಡದೇವನಕೋಟೆ ...	...	52	2	...	9	66	11	26	—	1	60				
	ಗುಂಡ್ಲು ಪೇಟೆ ...	...	...	...	48	13	32	8	83	+	4	49				
	ನಂಜನಗೂಡು ...	1	15	...	77	11	95	9	43	+	2	52				
	ತಿ. ನರಸೀಪುರ ...	...	17	...	40	8	38	9	78	—	1	40				
	ಮಳವಳ್ಳಿ ...	...	56	...	18	8	18	7	54	+	0	64				
	ಮಂಡ್ಯ ...	...	...	...	27	13	86	7	90	+	5	96				
	ಕೃಷ್ಣರಾಜಪೇಟೆ ...	...	15	...	41	9	15	9	...	+	0	15				
	ನಾಗಮಂಗಲ ...	...	...	...	23	8	79	5	46	+	3	33				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	27	...	57	10	36	9	15	+	1	21				
ಹಾಸನ.	ಹಾಸನ ...	1	69	...	69	11	79	9	77	+	2	2	ಅಕ್ಕಿ ದುಯಂ ತರಹ	9·00	9·50	9·95
	ಮಂಜರಾಬಾದು(ಸಕಲೇಶಪುರ)	9	26	4	79	19	1	19	...	+	0	1				
	ಅರಕಲಗೂಡು ...	1	34	1	46	6	55	10	39	—	3	84	ರಾಗಿ	20·00	20·00	22·89
	ಬೇಲೂರು ...	2	72	1	20	10	31	11	49	—	1	18	ಹುರುಳಿ	15·00	14·00	...
	ಚನ್ನರಾಯಪಟ್ಟಣ ...	...	...	...	38	5	49	8	50	—	3	1	ಕಡಲೆ	8·50	8·50	8·65
	ಅರಸೀಕೆರೆ ...	...	12	...	21	5	35	7	70	—	2	35				
	ಹೊಳೆನರಸೀಪುರ ...	...	32	...	67	8	80	8	80		...	...				
	ಆಲೂರು ...	4	16	1	61	15	71	11	10	+	4	61				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	2	45	1	38	10	38	10	84	—	0	46				

7/0 116

ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಯೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮೊತ್ತದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮೊತ್ತದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
1	2		3		4		5		6		7			
	I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಬಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ಶಿವಮೊಗ್ಗ ...	2	1	1	4	10	36	9	39	+ 0	97				
ಚನ್ನಗಿರಿ ...	2	31	...	70	6	71	7	35	— 0	64				
ಹೊನ್ನಾಳಿ ...	...	49	...	75	3	53	8	22	— 4	69				
ಶಿಕಾರಿಪುರ ...	1	64	1	49	9	52	8	67	+ 0	85				
ಸೊರಬ ...	6	17	3	35	11	93	11	63	+ 0	30				
ಸಾಗರ ...	7	45	5	23	15	30	15	80	— 0	50				
ನಗರ (ಕಲ್ಲೂರುಕಟ್ಟೆ) ...	12	50	8	34	21	99	19	62	+ 2	37	ಅಕ್ಕಿ ದೊಡ್ಡಯಂ	8·50	9·00	11·18
ತೀರ್ಥಹಳ್ಳಿ ...	9	14	8	35	15	42	20	86	— 5	44	ತರಹ			
ಕುಂಸಿ ...	3	61	1	95	10	61	10	66	— 0	5	ರಾಗಿ	20·00	18·00	25·19
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	5	4	3	47	11	71	12	47	— 0	76	ಹುರುಳಿ	13·50	13·10	...
ಚಿಕ್ಕಮಗಳೂರು ...	1	64	1	40	8	67	11	67	— 3	...	ಅಕ್ಕಿ ದೊಡ್ಡಯಂ	9·00	8·50	10·10
ಕಡೂರು ...	...	45	...	42	7	11	6	94	+ 0	17	ತರಹ			
ತರೀಕೆರೆ ...	1	70	1	23	5	1	9	47	— 4	46	ರಾಗಿ	20·00	20·00	22·50
ಕೊಪ್ಪ ...	9	66	8	38	18	57	22	46	— 3	89	ಹುರುಳಿ	11·00	12·00	...
ಮೂಡಿಗೆರೆ ...	10	63	6	38	24	91	21	...	+ 3	91	ಕಡಲೆ	8·50	9·00	9·20
ಯಡೆಹಳ್ಳಿ ...	6	70	4	9	14	53	13	68	+ 0	85				
ಶೃಂಗೇರಿ ...	15	75	11	63	26	99	28	29	— 1	30				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	6	65	4	80	15	11	16	21	— 1	10				
ಚಿತ್ರದುರ್ಗ ...	...	87	...	78	4	82	6	69	— 1	87	ಅಕ್ಕಿ ದೊಡ್ಡಯಂ	8·00	8·00	10·10
ಚಳ್ಳಕೆರೆ ...	...	30	...	23	6	28	4	42	+ 1	86	ತರಹ			
ಹಿರಿಯೂರು ...	...	59	...	7	7	53	5	70	+ 1	83	ರಾಗಿ	20·00	21·00	21·80
ಹೊಳಲ್ಕೆರೆ ...	1	40	...	36	8	75	6	86	+ 1	89	ಹುರುಳಿ	12·00	14·00	...
ದಾವಣಗೆರೆ ...	...	57	...	68	4	2	7	71	— 3	69	ಜೋಳ	18·00	18·00	19·50
ಮೊಳಕಾಲ್ಮುರು ...	...	7	...	54	4	14	6	7	— 1	93	ಕಡಲೆ	10·00	10·00	10·20
ಜಗಳೂರು ...	...	45	...	89	3	23	7	52	— 4	29				
ಹೊಸದುರ್ಗ ...	...	37	...	26	5	44	5	94	— 0	50				
ಹರಿಹರ ...	...	91	...	35	4	69	6	15	— 1	46				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	61	...	46	5	43	6	34	— 0	91				
ಸಂಸ್ಥಾನದಲ್ಲಿ ಸರಾಸರಿ ...	2	5	...	47	10	16	9	57	+ 0	59				

ಡಿಸ್ಟ್ರಿಕ್ಟು ರಿಪೋರ್ಟುಗಳು.

8. ಬಜಾರಿನಲ್ಲಿ ಸರಬರಾಯಿ ಹ್ಯಾಗಿದೆ.
9. ವ್ಯವಸಾಯ ಕಾರ್ಯದ ಅಭಿವೃದ್ಧಿ, ನಿಂತಿರುವ ಪೈರುಗಳ ಸ್ಥಿತಿ, ಬೆಳೆಗಳು ಎಷ್ಟಾಗಬಹುದೆಂಬ ನಿರೀಕ್ಷೆ, ಮತ್ತು ಸುಗ್ಗಿಯ ಕಾಲದಲ್ಲಿ ಉಂಟಾಗಬಹುದಾದ ಹುಟ್ಟುವಳಿ, ಹುಳುಗಳು ಅಥವಾ ಸ್ವಾಭಾವಿಕವಾದ ಇತರ ವಿಪತ್ತುಗಳಿಂದ ಪೈರುಗಳಿಗೆ ಉಂಟಾದ ನಷ್ಟ.
10. ಕಾಲದ ಆಯತಿ, ಮಳೆಯು ಸಾಲದೆ ಇರುವ ಪ್ರದೇಶಗಳು, ದುರ್ಭಿಕ್ಷ ವುಂಟಾಗಿರುವ ಸ್ಥಳಗಳು, ರಿಲೀಫ್ ಯಾ ಸಹಾಯವನ್ನು ಪಡೆಯುತ್ತಿರುವ ಜನರ ಸಂಖ್ಯೆ, ಮತ್ತು ಆಹಾರ ಸಾಮಗ್ರಿಯ ಸ್ಥಿತಿ.
11. ಜನಗಳ ಆರೋಗ್ಯ.
12. ವ್ಯವಸಾಯಕ್ಕೆ ಸಂಬಂಧಿಸುವ ಮೂಲಗಳು, ದನಗಳಿಗೆ ಮೇಯುವುದಕ್ಕೆ ಹುಲ್ಲುಕಾವಲು ಇಲ್ಲದೇ ಹೋಗುವುದು, ಮೇವು ಮುಂತಾದುವುಗಳ ವಿಷಯವಾಗಿ ಷರಾಗಳು.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜಾ.	ಚಾಲ್ತಿ.	
ಅಕ್ಕಿ ರೂಪಾಯಿ 1ಕ್ಕೆ	7	6 ರಿಂದ 6½ರ ವರಿಗೆ	ಸೇರುಗಳು.
ರಾಗಿ ,, ...	20	14 ರಿಂದ 15ರ ವರಿಗೆ	

ವ್ಯವಸಾಯ ಕೆಲಸಗಳು—ಹೊಲ, ಗದ್ದೆಗಳನ್ನು ಉಳುವದು.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಡಿಸ್ಟ್ರಿಕ್ಟಿನಲ್ಲಿ ಎಲ್ಲಾ ರೈತರುಗಳು ಉಳುವ ಕೆಲಸದಲ್ಲಿದ್ದಾರೆ.

ಬಿತ್ತನೆಯಾದ ಪೈರು—ಬೆಂಗಳೂರು ಮತ್ತು ಆನೇಕಲ್ಲು ಈ ತಾಲ್ಲೂಕುಗಳಲ್ಲಿ ಎಳ್ಳನ್ನು ಬಿತ್ತುತ್ತಾ ಇದ್ದಾರೆ.

ಕುಯ್ಯಲಾದ ಪೈರುಗಳು—ಹೊಸಕೋಟೆ, ಆನೇಕಲ್ಲು ಮತ್ತು ಚೆನ್ನಪಟ್ಟಣ, ಈ ತಾಲ್ಲೂಕುಗಳಲ್ಲಿ ವೈಶಾಖಿ ಭತ್ತವನ್ನು ಕುಯ್ಯುತ್ತಿದ್ದಾರೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆ. ಆದರೆ, ಆನೇಕಲ್ಲು ತಾಲ್ಲೂಕಿನಲ್ಲಿ, ಎಳ್ಳು ಪೈರಿಗೆ ಹುಳು ಹಿಡಿದು ನಷ್ಟವಾಗಿದೆಯೆಂದು ರಿಪೋರ್ಟಾಗಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕು.

11. ಬೆಂಗಳೂರು, ಕ್ಲೋಸ್‌ಪೇಟೆ, ಈ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿಯೂ ಮತ್ತು ಕ್ಲೋಸ್‌ಪೇಟೆ ಊರಿನಲ್ಲಿಯೂ ಕಾಲರಾ ಇದೆಯೆಂದು ರಿಪೋರ್ಟಾಗಿರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಉಳುತ್ತಾ ಇದ್ದಾರೆ.

ನಿಂತಿರುವ ಪೈರುಗಳ ಸ್ಥಿತಿ—ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಬಾರಿಂಗ್‌ಪೇಟೆ, ಮುಳಬಾಗಲು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾರ್ತೀಕ ಭತ್ತ ; ಬಾರಿಂಗ್‌ಪೇಟೆ ಮತ್ತು ಚಿಂತಾಮಣೀ ತಾಲ್ಲೂಕುಗಳಲ್ಲಿ ಸಾಮೆ ; ಚಿಂತಾಮಣಿ, ಚಿಕ್ಕಬಳ್ಳಾಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ; ಮುಳಭಾಗಲ್ ತಾಲ್ಲೂಕಿನಲ್ಲಿ ಸಜ್ಜೆ ಮತ್ತು ಹಾರಕ ; ಚಿಕ್ಕಬಳ್ಳಾಪುರದ ತಾಲ್ಲೂಕಿನಲ್ಲಿ ಅವರೆ ಮತ್ತು ತೊಗರಿ.

ಕುಯ್ಯಲಾದ ಪೈರುಗಳು—ಬಾರಿಂಗ್‌ಪೇಟೆ, ಬಾಗೇಪಳ್ಳಿ ವಿನಹಾ, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ವೈಶಾಖಿ ಭತ್ತ ; ಮತ್ತು ಕೋಲಾರದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬು.

ಆಗಬಹುದಾದ ಉತ್ಪತ್ತಿ—ವೈಶಾಖಿ ಭತ್ತ 4 ರಿಂದ 12 ಆಣೆ ವರಿಗೆ. ಕಬ್ಬು 12 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಬಾರಿಂಗ್‌ಪೇಟೆ ತಾಲ್ಲೂಕಿನ ರಾಬರ್ಟ್ಸನ್ ಮತ್ತು ಉರಿಗಂ ಇವುಗಳಲ್ಲಿ ಕೆಲವು ಪ್ಲೇಗ್ ಕೇಸುಗಳು, ಮಾಲೂರು ತಾಲ್ಲೂಕಿನ ಮಾಸ್ತಿಯಲ್ಲಿ ಕಾಲರಾ ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಚಿಕ್ಕಬಳ್ಳಾಪುರದ ತಾಲ್ಲೂಕಿನ ಮಂಡಿಕಲ್ಲು ಹೋಬಳಿಯಲ್ಲಿ ಕೆಲವು ಭಾಗಗಳಲ್ಲಿ "ಚಪ್ಪೆ ರೋಗ" ವು ಇನ್ನೂ ಇದ್ದುಕೊಂಡು ಇದೆಯೆಂದೂ, ಮತ್ತು ಇದರ ನಿವಾರಣೆಗಾಗಿ ಪ್ರಯತ್ನಗಳನ್ನು ಮಾಡುತ್ತಾ ಇದ್ದಾರೆಯೆಂದೂ ರಿಪೋರ್ಟಾಗಿರುವದು ಹೊರ್ತು, ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಉಳುವದೂ ಮತ್ತು ಬಿತ್ತುವದೂ ನಡಿಯುತ್ತಿವೆ.

ನಿಂತಿರುವ ಪೈರುಗಳ ಸ್ಥಿತಿಯು—ಚೆನ್ನಾಗಿದೆ.

ಬಿತ್ತನೆಯಾದ ಪೈರುಗಳು :—

ಶಿರಾ ಮತ್ತು ತಿಪಟೂರು, ಇವುಗಳಲ್ಲಿ ಭತ್ತ,

ಪಾವಗಡ, ,, ರಾಗಿ,

ಕುಣಿಗಲು, ಕೊರಟಗೆರೆ, ,, ಕಬ್ಬು,

ಚಿಕ್ಕನಾಯಕನಹಳ್ಳಿ, ಶಿರ್‍ಯ, ಪಾವಗಡ, ಇವುಗಳ ಕೆಲವು ಭಾಗಗಳಲ್ಲಿ ಉದ್ದು, ಹೆಸರು. ಮತ್ತು ಹುಚ್ಚೆಳ್ಳು.
ಚಿಕ್ಕನಾಯಕನಹಳ್ಳಿ, ಶಿರ್‍ಯ, ತುರುವೇಕೆರೆ, ಇವುಗಳ ಕೆಲವು ಭಾಗಗಳಲ್ಲಿ ಹಾರಕ, ಜೋಳ ಮತ್ತು ತಡಗಣಿ.
ಕುಬ್ಯಲಾದ ಪೈರುಗಳು—ತುಮಕೂರು, ಮದ್ದಗಿರಿ, ಚಿಕನಾಯಕನಹಳ್ಳಿ, ಗುಬ್ಬಿ, ತಿಪಟೂರು, ಕೊರಟಗೆರೆ, ತುರುವೇಕೆರೆ, ಇವುಗಳಲ್ಲಿ ಭತ್ತ; ಮತ್ತು ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ಕಬ್ಬು.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಶ್ರೀರಂಗಪಟ್ಣ, ನಂಜನಗೂಡು, ಮಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ "ಏರ್" ಬೆಳೆಗಾಗಿ ಭೂಮಿಯನ್ನು ಉತ್ತುತ್ತಿದ್ದಾರೆ.
ನಿಂತಿರುವ ಪೈರುಗಳು—ಯಾವವೆಂದರೆ, ಜೋಳ, ರಾಗಿ, ಎಳ್ಳು, ಕಬ್ಬು, ಹುರುಳಿ, ಮುಂತಾದವುಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.
ಬಿತ್ತನೆಯಾದ ಪೈರುಗಳು—ಎಡತೊರೆ ತಾಲ್ಲೂಕಿನಲ್ಲಿ ರಾಗಿ ಮತ್ತು ಭತ್ತ.
ಬಿತ್ತನೆಯಾದ ಪೈರುಗಳು ಮತ್ತು ಅಂದಾಜಾ:—
ಹುಣಸೂರಿನಲ್ಲಿ ಉದ್ದು ಮತ್ತು ಹೆಸರು—8 ಆಣೆ. ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಬ್ಬನ್ನು ಅಲೆಯಾಡಿ, ಬೆಲ್ಲವನ್ನು ಮಾಡುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ನಂಜನಗೂಡು, ನಾಗಮಂಗಲ, ಮೈಸೂರು, ಮಳವಳ್ಳಿ, ಮಂಡ್ಯ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಹೆಚ್ಚಾಗಿ ಬೇಕಾಗಿದೆ. ರೈತರಲ್ಲೂ ಮತ್ತು ವರ್ತಕರಲ್ಲಿಯೂ ಸಾಕಾದಷ್ಟು ಆಹಾರ ಜಿನಸಿ ಇವೆ.

11. ಚಾಮರಾಜನಗರ, ಹೆಗ್ಗಡದೇವನಕೋಟೆ, ನಂಜನಗೂಡು, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ ಇದ್ದುಕೊಂಡು ಇರುವದು ಹೊರ್ತು, ಜನಾರೋಗ್ಯವು ಚೆನ್ನಾಗಿದೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ, ದನಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಹುಲ್ಲೂ, ನೀರೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಹಾಸನದ ತಾಲ್ಲೂಕಿನಲ್ಲಿ ಪುಕ್ಕೆ ಹೊಡಿಯುವದೂ ಮತ್ತು ಗಿಡ್ಡರಾಗಿಯು ಕಳೆ ಕೀಳುವದೂ ಇವುಗಳು ನಡಿಯುತ್ತಿವೆ. ಮಂಜರಾಬಾದ್ ತಾಲ್ಲೂಕಿನಲ್ಲಿ ಭತ್ತದ ಸಸಿಯನ್ನೂ ಕಿತ್ತು ನಾಟುತ್ತಿದ್ದಾರೆ.
ನಿಂತಿರುವ ಪೈರುಗಳು—ಯಾವವೆಂದರೆ, ಗಿಡ್ಡರಾಗಿ, ಭತ್ತ, ಕಬ್ಬು, ತೊಗರಿ, ಹುಚ್ಚೆಳ್ಳು, ಹರಳು, ಜೋಳ, ಅವರೆ, ಇವುಗಳು ಒಳ್ಳೇ ಸ್ಥಿತಿಯಲ್ಲಿವೆ. ಅರಕಲಗೂಡು, ಚನ್ನರಾಯಪಟ್ಣ, ಈ ತಾಲ್ಲೂಕುಗಳಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ.

10. ಕಾಲದ ಆಯತಿಯು ಸುಮಾರಾಗಿದೆ. ಬೇಲೂರು, ಮಂಜರಾಬಾದು, ಈ ತಾಲ್ಲೂಕುಗಳಲ್ಲಿ ಒಣಗುತ್ತಿದ್ದ ಪೈರುಗಳು ಕಳೆದ ವಾರದಲ್ಲಿ ಬಿದ್ದ ಮಳೆಯಿಂದ ಚಿಗುರಿಕೊಂಡಿವೆ. ಆಹಾರ ಜಿನಸಿ ಸರಬರಾಯಿ ಸಾಕು.

11. ಅರಕಲಗೂಡು, ಹೊಳೇನರಸೀಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ, ಚೆನ್ನರಾಯಪಟ್ಣ, ಮಂಜರಾಬಾದ್, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಛಳಿಜ್ವರವೂ ಮತ್ತು ಆಮಶಂಕೆಯೂ, ಇವುಗಳು ಇರುವದು ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಸಾಗರ, ನಗರ, ತೀರ್ಥಹಳ್ಳಿ, ಈ ತಾಲ್ಲೂಕುಗಳಲ್ಲಿ ಉಳುವ ಕೆಲಸಗಳು ನಡಿಯುತ್ತಿವೆ.
ನಿಂತಿರುವ ಪೈರುಗಳು—ಶಿವಮೊಗ್ಗ, ಚನ್ನಗಿರಿ, ಶಿಕಾರಿಪುರ, ಸೊರಬ, ಸಾಗರ, ನಗರ, ಈ ತಾಲ್ಲೂಕುಗಳಲ್ಲಿಯೂ, ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ, ಕಬ್ಬು; ಸೊರಬ ಮತ್ತು ನಗರದ ತಾಲ್ಲೂಕುಗಳಲ್ಲಿಯೂ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಭತ್ತ; ಸಾಗರದ ತಾಲ್ಲೂಕಿನ ಕರೂರು ಮತ್ತು ಭಾರಂಗಿ ಈ ಹೋಬಳಿಗಳಲ್ಲಿ ಕಾರ್ ಭತ್ತ; ಇವುಗಳೆಲ್ಲಾ ಒಳ್ಳೆ ಸ್ಥಿತಿಯಲ್ಲಿವೆ.
ಬಿತ್ತನೆಯಾದ ಪೈರುಗಳು—ಚೆನ್ನಗಿರಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತ ಮತ್ತು ಜೋಳ; ಹೊನ್ನಾಳಿ ತಾಲ್ಲೂಕಿನಲ್ಲಿ ಹುಚ್ಚೆಳ್ಳು, ಮತ್ತು ಹೆಸರು; ಶಿಕಾರಿಪುರ, ನಗರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತ; ಇವುಗಳು ಬಿತ್ತಲ್ಪಡುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸಿ ಸಿಕ್ಕುತ್ತವೆ.

11. ಶಿಕಾರಿಪುರ, ಸಾಗರ, ಈ ತಾಲ್ಲೂಕುಗಳಲ್ಲಿ ಸಿಡುಬು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಹುಲ್ಲೂ, ಮೇವೂ ಸಿಕ್ಕುತ್ತವೆ. ದನಗಳು ಆರೋಗ್ಯವಾಗಿವೆ. ಆದರೆ ಶಿಕಾರಿಪುರದ ಊರಿನಲ್ಲಿಯೂ ಮತ್ತು ಸೊರಬ, ನಗರ, ಈ ತಾಲ್ಲೂಕುಗಳಲ್ಲಿಯೂ, ಪ್ರಾಣಭಯವಿಲ್ಲದ ಗೋಮಾರೀ ರೋಗವು ಇದ್ದುಕೊಂಡು ಇದೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ತರೀಕೆರೆ, ಕೊಪ್ಪ, ಶೃಂಗೇರಿ, ಇವುಗಳ ಕೆಲವು ಭಾಗಗಳಲ್ಲಿ ಉಳುತ್ತಾ ಇದ್ದಾರೆ.

ನಿಂತಿರುವ ಪೈರುಗಳು—

ಮೂಡಿಗೆರೆಯಲ್ಲಿ ರಾಗಿ ಮತ್ತು ಭತ್ತ.

ಕೊಪ್ಪದಲ್ಲಿ ಅಡಿಕೆ, ಕಾಫಿ ಮತ್ತು ಕಬ್ಬು.

ಚಿಕ್ಕಮಗಳೂರಿನಲ್ಲಿ ಕಬ್ಬು, ರಾಗಿ ಮತ್ತು ಭತ್ತ.

ಎಡೇಹಳ್ಳಿಯಲ್ಲಿ ಕಬ್ಬು.

ಕಡೂರಿನಲ್ಲಿ ಕೋಡೆಭತ್ತ ಮತ್ತು ಕಬ್ಬು.

ಇವುಗಳೆಲ್ಲವು ಒಳ್ಳೇಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—

ತರೀಕೆರೆ, ಚಿಕ್ಕಮಗಳೂರು, ಎಡೇಹಳ್ಳಿ, ಇವುಗಳಲ್ಲಿ ಭತ್ತ.

ಕಡೂರಿನಲ್ಲಿ ಜೋಳ, ಹುಚ್ಚೆಳ್ಳು, ಹೆಸರು, ಉದ್ದು, ಹುರುಳಿ ಮತ್ತು ಕೊತ್ತುಂಬರಿ ಇವುಗಳೆಲ್ಲಾ ಬಿತ್ತಲ್ಪಡುತ್ತಿವೆ.

ಕೊಪ್ಪದಲ್ಲಿ ಕಾಫಿಯನ್ನು ನೆಡುತ್ತಿದ್ದಾರೆ.

ಕುಯ್ಯಲಾದ ಪೈರುಗಳು ಮತ್ತು ಉತ್ಪತ್ತಿ :—

ಕಡೂರಿನಲ್ಲಿ ಕಬ್ಬು ಮತ್ತು ಕೋಡೇ ಭತ್ತ—ಉತ್ಪತ್ತಿ 12 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ.

11. ಮೂಡಗೆರೆ, ಕೊಪ್ಪ, ಇವುಗಳ ಕೆಲವು ಭಾಗಗಳಲ್ಲಿ ಸಿಡುಬು, ಮತ್ತು ಚಿಕ್ಕಮಗಳೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ ಮತ್ತು ಊರಿನಲ್ಲಿಯೂ ಪ್ಲೇಗು, ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ರೋಗಗಳು ಹರಡದಹಾಗೆ ಇರಲು, ಬೇಕಾದ ಏರ್ಪಾಡುಗಳನ್ನು ಮಾಡುತ್ತಾ ಇದ್ದಾರೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಆದರೆ, ಶೃಂಗೇರಿಯಲ್ಲಿಯೂ ಮತ್ತು ತರೀಕೆರೆಯಲ್ಲಿಯೂ, ಪ್ರಾಣಭಯವಿಲ್ಲದ "ದೊಡ್ಡ ರೋಗವು" ತಲೆದೋರಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳ ಸ್ಥಿತಿಯು ಚೆನ್ನಾಗಿದೆ.

ಬಿತ್ತನೆಯಾದ ಪೈರುಗಳು—ಹೊಳಲ್ಕೆರೆ, ದಾವನಗೆರೆ, ಜಗಲೂರು, ಮೊಳಕಾಲ್ಮುರು, ಹೊಸದುರ್ಗ, ಈ ತಾಲ್ಲೂಕುಗಳಲ್ಲಿಯೂ ಮತ್ತು ಹರಿಹರದ ಸಬ್ ತಾಲ್ಲೂಕಿನಲ್ಲಿಯೂ ಎಳ್ಳು, ಜೋಳ, ಸಾವೆ ಭತ್ತ, ಹೆಸರು ಮತ್ತು ಉದ್ದು; ಮೊಳಕಾಲ್ಮುರು ತಾಲ್ಲೂಕಿನಲ್ಲಿಯೂ ಮತ್ತು ಹರಿಹರದ ಸಬ್ ತಾಲ್ಲೂಕಿನಲ್ಲಿಯೂ ಹರಳೆ; ಮತ್ತು ದಾವನಗೆರೆ, ಜಗಲೂರು, ಹೊಸದುರ್ಗ, ಈ ತಾಲ್ಲೂಕುಗಳಲ್ಲಿ ಹರಳು.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

ಡಿಸ್ಟ್ರಿಕ್ಟಿನಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು, 1907ನೆಯ ವರ್ಷದ ಜುಲೈ 2ನೆಯ ತಾರೀಖು. } ಎ. ರಂಗಸ್ವಾಮಿ ಐಯ್ಯಂಗಾರ್, ರೆವಿನ್ಯೂ ಕಮಿಷನರ್.

Government Press, Bangalore—1907.

ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಛಾಪಿಸಿ ಆದ್ದು. [ನಂ. 28.

ಬೆಂಗಳೂರು, ಗುರುವಾರ, ಜುಲೈ ತಾ॥ 11, ಸನ್ 1907.

IV ನ ಭಾಗ.

ಸರ್ಕಾರಿ ಕಾಗದ ಪತ್ರಗಳು.

1907ನೆಯ ವರ್ಷದ 26ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ (1907ನೆಯ ವರ್ಷದ ಜೂನ್ 29ನೆಯ ತಾರೀಖು).

ಡಿಸ್ಟ್ರಿಕ್ಟು ಮತ್ತು ಸ್ಥಳ.		ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—) ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
1		2		3		4		5		6		7			
		I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ಬೆಂಗಳೂರು.	ಬೆಂಗಳೂರು ದಂಡು ...	1	24	...	...	6	22	...	...	...	...				
	ಸಿಟಿ ಮತ್ತು ತಾಲ್ಲೂಕು ...	...	80	...	23	11	98	9	9	+ 2	89				
	ಹೊಸಕೋಟೆ ...	...	28	...	28	10	55	7	98	+ 2	57				
	ದೊಡ್ಡಬಳ್ಳಾಪುರ ...	...	12	...	35	7	*33	8	67	— 1	34				
	ನೆಲಮಂಗಲ ...	..	82	...	47	10	72	7	81	+ 2	91				
	ಕಾನಕಾನಹಳ್ಳಿ ...	...	...	...	59	10	33	9	85	+ 0	48				
	ಮಾಗಡಿ ...	...	...	...	20	18	18	6	62	+ 11	56	ಅಕ್ಕಿ ದುಯಂ ತರಹ	7·00	7·00	9·31
	ಚನ್ನಪಟ್ಣ ...	...	...	...	36	13	85	8	44	+ 5	41				
	ಆನೆಕಲ್ಲು ...	...	...	...	33	12	†79	10	68	+ 2	11	ರಾಗಿ	15·00	15·00	19·89
	ದೇವನಹಳ್ಳಿ ...	...	...	...	84	10	‡46	8	36	+ 2	10	ಹುರುಳಿ	12·00	12·00	...
	ಕ್ಲೋಸ್‌ಪೇಟೆ ...	...	22	...	52	15	98	9	12	+ 6	86	ಕಡಲೆ	9·00	9·00	10·13
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ. ...	...	22	...	42	12	22	8	66	+ 3	56				
ಕೋಲಾರ.	ಕೋಲಾರ ...	...	...	...	7	11	64	6	45	+ 5	19	ಅಕ್ಕಿ ದುಯಂ ತರಹ	7·00	7·00	9·05
	ಬೌರಿಂಗ್‌ಪೇಟೆ ...	...	4	...	29	8	6	7	44	+ 0	62				
	ಚಿಂತಾಮಣಿ ...	...	5	...	24	10	72	6	24	+ 4	48	ರಾಗಿ	17·00	17·00	22·00
	ಮುಳಬಾಗಲು ...	...	...	...	29	12	92	7	9	+ 5	83	ಹುರುಳಿ	15·00	15·00	...
	ಶಿಡ್ಲಘಟ್ಟ ...	..	...	...	26	10	35	6	99	+ 3	36	ಕಡಲೆ	9·00	9·00	8·70
	ಚಿಕ್ಕಬಳ್ಳಾಪುರ ...	...	...	...	29	9	61	9	74	— 0	13				
	ಬಾಗೆಪಲ್ಲಿ ...	...	14	...	32	8	13	4	94	+ 3	19				
	ಗೋರಿಬಿದನೂರು ...	1	...	...	34	6	91	5	96	+ 0	95				
	ಮಾಲೂರು ...	...	14	...	29	10	19	8	14	+ 2	5				
	ಶ್ರೀನಿವಾಸಪುರ ...	...	...	...	13	8	81	7	25	+ 1	56				
	ಗುಡಿಬಂಡೆ ...	1	76	...	69	10	12	6	26	+ 3	86				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	28	...	29	9	77	6	95	+ 2	82				

* 1907ನೆಯ ವರ್ಷದ ಏಪ್ರೈಲ್ 27ನೆ ತಾರೀಖಿಗೆ ಮುಗಿದ ವಾರದಲ್ಲಿ ರಿಪೋರ್ಟು ಮಾಡಲು ಬಿಟ್ಟುಹೋದ 1 ಇಂಚು 2 ಸೆಂಟುಗಳು ಇದರಲ್ಲಿ ಅಡಗಿ ಇವೆ.

† ಕಳೆದ ವಾರದ ಜುವಾಬ್ದಲ್ಲಿ ಬಿಟ್ಟು ಹೋದ 2 ಸೆಂಟುಗಳು ಸೇರಿವೆ.

‡ ಕಳೆದ ವಾರಗಳಲ್ಲಿ ಹೆಚ್ಚಾಗಿ ಸೇರಿದ 19 ಸೆಂಟುಗಳನ್ನು ತಳ್ಳಿ ಇವೆ.

	ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
	1	2		3		4		5		6		7			
		I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ತುಮಕೂರು	ತುಮಕೂರು ...	...	28	...	44	9	57	8	60	+ 0	97				
	ಮದ್ದುಗಿರಿ ...	...	35	...	46	5	33	5	56	— 0	23				
	ಚಿಕ್ಕನಾಯುಕನಹಳ್ಳಿ ...	...	28	...	17	8	7	8	68	— 0	61				
	ಸೀರ ...	...	7	...	10	4	57	5	62	— 1	5				
	ಗುಬ್ಬಿ ...	...	17	...	33	8	24	6	84	+ 1	40				
	ತಿಪಟೂರು ...	...	...	...	10	6	84	7	64	— 0	80				
	ಪಾವಗಡ ...	...	...	...	27	3	85	5	34	— 1	49	ಅಕ್ಕಿ ದುಯಂ ತರಹ	8·50	8·50	9·15
	ಕುಣಿಗಲು ...	...	...	...	10	10	54	7	13	+ 3	41	ರಾಗಿ	18·00	18·00	22·00
	ಕೊರಟಗೆರೆ ...	...	69	...	42	8	29	6	27	+ 2	2	ಹುರುಳಿ	16·00	16·00	...
	ತುರುವೇಕೆರೆ ...	...	...	...	9	5	55	6	88	— 1	33	ಕಡಲೆ	9·00	9·00	9·16
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	18	...	25	7	9	6	86	+ 0	23				
ಮೈಸೂರು	ಮೈಸೂರು ...	...	9	...	33	10	34	10	88	— 0	54	ಅಕ್ಕಿ ದುಯಂ ತರಹ	7·50	7·50	9·9
	ಚಾಮರಾಜನಗರ ...	...	...	...	6	9	23	11	15	— 1	92	ರಾಗಿ	15·75	15·75	19·3
	ಶ್ರೀರಂಗಪಟ್ಟಣ ...	...	11	...	14	12	19	8	26	+ 3	93	ಹುರುಳಿ	15·50	15·50	...
	ಹುಣಸೂರು ...	...	18	...	49	10	54	11	68	— 1	14	ಕಡಲೆ	9·25	9·25	10·3
	ಯಡತೊರೆ ...	...	...	...	30	9	41	9	14	+ 0	27				
	ಹೆಗ್ಗಡದೇವನಕೋಟೆ ...	...	...	...	61	9	66	11	87	— 2	21				
	ಗುಂಡ್ಲುಪೇಟೆ ...	...	...	...	20	13	32	9	3	+ 4	29				
	ನಂಜನಗೂಡು ...	...	25	...	23	12	20	9	66	+ 2	54				
	ತಿ. ನರಸೀಪುರ ...	...	...	...	12	8	38	9	90	— 1	52				
	ಮಳವಳ್ಳಿ ...	...	...	...	31	8	18	7	85	+ 0	33				
	ಮಂಡ್ಯ ...	...	...	...	47	13	86	8	37	+ 5	49				
	ಕೃಷ್ಣರಾಜಪೇಟೆ ...	...	...	...	17	9	15	9	17	— 0	2				
	ನಾಗಮಂಗಲ ...	...	...	...	7	8	79	5	53	+ 3	26				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	5	...	27	10	40	9	42	+ 0	93				
ಹಾಸನ	ಹಾಸನ	...	21	...	79	12	...	10	56	+ 1	44	ಅಕ್ಕಿ ದುಯಂ ತರಹ	9·50	9·00	9·9
	ಮಂಜರಾಬಾದು(ಸಕಲೇಶಪುರ)	2	53	5	2	21	54	24	2	— 2	48	ರಾಗಿ	20·00	20·00	22
	ಅರಕಲಗೂಡು ...	...	40	1	6	6	95	11	45	— 4	50	ಹುರುಳಿ	15·00	15·00	...
	ಬೇಲೂರು ...	...	12	1	37	10	43	12	86	— 2	43	ಕಡಲೆ	8·50	8·50	8·
	ಚನ್ನರಾಯಪಟ್ಟಣ ...	...	...	...	17	5	49	8	67	— 3	18				
	ಅರಸೀಕೆರೆ ...	...	11		13	5	46	7	83	— 2	37				
	ಹೊಳೆನರಸೀಪುರ ...	...	...	...	40	8	80	9	20	— 0	40				
	ಆಲೂರು ...	...	44	1	34	16	15	12	43	+ 3	72				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	48	1	28	10	85	12	13	— 1	27				

ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಯೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907 ನೆಯ ವರ್ಷದ ಜನವರಿ 1 ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ವದ್ದದ ಹೆಚ್ಚು (+) ಕಡಮೆ (—) ಯನ್ನು 5ನೆಯ ವದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
1	2		3		4		5		6		7			
	I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಬಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ಶಿವಮೊಗ್ಗ ...	1	4	1	40	11	40	10	79	+ 0	61				
ಚನ್ನಗಿರಿ ...	1	22	...	54	7	93	7	89	+ 0	4				
ಹೊನ್ನಾಳಿ ...	...	39	...	65	3	92	8	87	— 4	95				
ಶಿಕಾರಿಪುರ ...	...	75	1	80	10	27	10	47	— 0	20				
ಸೊರಬ ...	3	9	3	90	15	12	15	62	— 0	60				
ಸಾಗರ ...	4	5	4	81	19	35	20	61	— 1	26				
ನಗರ (ಕಲ್ಲೂರುಕಟ್ಟೆ) ...	4	86	6	22	26	85	25	84	+ 1	1	ಅಕ್ಕಿ ದುಯ್ಯಂ	8·50	8·50	11·18
ತೀರ್ಥಹಳ್ಳಿ ...	3	76	8	9	19	18	28	95	— 9	77	ತರಹ			
ಕುಂಸಿ ...	1	28	1	61	11	89	12	27	+ 0	38	ರಾಗಿ	20·00	20·00	25·19
											ಹುರುಳಿ	13·50	13·50	...
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	2	27	3	23	13	98	15	70	— 1	72				
ಚಿಕ್ಕಮಗಳೂರು ...	...	...	...	54	8	67	12	21	— 3	54	ಅಕ್ಕಿ ದುಯ್ಯಂ	8·50	9·00	10·10
ಕಡೂರು ...	...	...	...	17	7	11	7	12	— 0	1	ತರಹ			
ತರೀಕೆರೆ ...	...	35	...	60	5	36	10	8	— 4	72	ರಾಗಿ	20·00	20·00	22·50
ಕೊಪ್ಪ ...	5	16	4	96	23	73	27	42	— 3	69	ಹುರುಳಿ	12·00	11·00	...
ಮೂಡಿಗೆರೆ ...	2	35	3	89	27	26	24	89	+ 2	37	ಕಡಲೆ	8·00	8·50	9·20
ಯಡೆಹಳ್ಳಿ ...	2	9	2	30	16	62	15	98	+ 0	64				
ಶೃಂಗೇರಿ ...	9	68	6	74	36	67	35	4	+ 1	63				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	2	80	2	74	17	92	18	96	— 1	4				
ಚಿತ್ರದುರ್ಗ ...	...	64	...	37	5	46	7	6	— 1	60	ಅಕ್ಕಿ ದುಯ್ಯಂ	8·75	8·00	10·10
ಚೆಳ್ಳಕೆರೆ ...	...	...	...	7	6	28	4	49	+ 1	79	ತರಹ			
ಹಿರಿಯೂರು ...	...	...	...	5	7	53	5	75	+ 1	78	ರಾಗಿ	20·00	20·00	21·80
ಹೊಳಲ್ಕೆರೆ ...	...	35	...	37	9	10	7	23	+ 1	87	ಹುರುಳಿ	14·00	12·00	...
ದಾವಣಗೆರೆ ...	...	21	...	60	4	23	8	31	— 4	8	ಜೋಳ	18·00	18·00	19·50
ಮೊಳಕಾಲ್ಮುರು ...	...	42	...	11	4	56	6	18	— 1	62	ಕಡಲೆ	10·00	10·00	10·20
ಜಗಳೂರು ...	...	18	...	40	3	41	7	92	— 4	51				
ಹೊಸದುರ್ಗ ...	...	47	...	19	5	91	6	13	— 0	22				
ಹರಿಹರ ...	...	...	...	42	4	69	6	57	— 1	88				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	25	...	29	5	68	6	63	— 0	94				
ಸಂಸ್ಥಾನದಲ್ಲಿ ಸರಾಸರಿ ...	...	82	1	10	10	99	10	66	+ 0	33				

ಡಿಸ್ಟ್ರಿಕ್ಟು ರಿಪೋರ್ಟುಗಳು.

8. ಬಜಾರಿನಲ್ಲಿ ಸರಬರಾಯಿ ಹ್ಯಾಗಿದೆ.
9. ವ್ಯವಸಾಯ ಕಾರ್ಯದ ಅಭಿವೃದ್ಧಿ, ನಿಂತಿರುವ ಪೈರುಗಳ ಸ್ಥಿತಿ, ಬೆಳೆಗಳು ಎಷ್ಟಾಗಬಹುದೆಂಬ ನಿರೀಕ್ಷೆ, ಮತ್ತು ಸುಗ್ಗಿಯ ಕಾಲದಲ್ಲಿ ಉಂಟಾಗಬಹುದಾದ ಹುಟ್ಟುವಳಿ, ಹುಳುಗಳು ಅಥವಾ ಸ್ವಾಭಾವಿಕವಾದ ಇತರ ವಿಪತ್ತುಗಳಿಂದ ಪೈರುಗಳಿಗೆ ಉಂಟಾದ ನಷ್ಟ.
10. ಕಾಲದ ಆಯತಿ, ಮಳೆಯು ಸಾಲದೆ ಇರುವ ಪ್ರದೇಶಗಳು, ದುರ್ಭಿಕ್ಷ ವುಂಟಾಗಿರುವ ಸ್ಥಳಗಳು, 'ರಿಲೀಫ್' ಯಾ ಸಹಾಯವನ್ನು ಪಡೆಯುತ್ತಿರುವ ಜನರ ಸಂಖ್ಯೆ, ಮತ್ತು ಆಹಾರ ಸಾಮಗ್ರಿಯ ಸ್ಥಿತಿ.
11. ಜನಗಳ ಆರೋಗ್ಯ.
12. ವ್ಯವಸಾಯಕ್ಕೆ ಸಂಬಂಧಿಸುವ ಮಾಲುಗಳು, ದನಗಳಿಗೆ ಮೇಯುವುದಕ್ಕೆ ಹುಲ್ಲುಕಾವಲು ಇಲ್ಲದೇ ಹೋಗುವುದು, ಮೇವು ಮುಂತಾದುವುಗಳ ವಿಷಯವಾಗಿ ಷರಾಗಳು.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜು.	ಚಾಲ್ತಿ.	
ಅಕ್ಕಿ ರೂಪಾಯಿ ಕ್ಕೆ ...	7	6 ರಿಂದ 6½ರ ವರಿಗೆ	ಸೇರುಗಳು.
ರಾಗಿ ,, ...	19	14 ರಿಂದ 15ರ ವರಿಗೆ	

ವ್ಯವಸಾಯ ಕೆಲಸಗಳು—ರಾಗಿ, ಜೋಳ, ಅವರೆ, ಇವುಗಳ ಬಿತ್ತನೆ.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ, ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯದ ಅಭಿವೃದ್ಧಿ—ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ವುಳುವ ಕಾರ್ಯವು ನಡಿಯಿತು. ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಾಕಾಗಿದೆ.

11. ಕ್ಲೋಸ್‌ಪೇಟೆ ಊರಿನಲ್ಲಿ ಕಾಲರಾ ಇದೆಯೆಂದು ರಿಪೋರ್ಟಾಗಿರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಹುಲ್ಲೂ, ನೀರೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಉಳುವ ಕೆಲಸವು ಇನ್ನೂ ನಡಿಯುತ್ತಿದೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಕೋಲಾರದ ತಾಲ್ಲೂಕಿನಲ್ಲಿ ಎಳ್ಳು; ಕೋಲಾರ ಬೌರಿಂಗ್‌ಪೇಟೆ, ಮುಳಬಾಗಲು, ಗೋರೀಬಿದನೂರು, ಈ ತಾಲ್ಲೂಕುಗಳಲ್ಲಿ ಕಾರ್ತೀಕ ಭತ್ತ; ಬೌರಿಂಗ್‌ಪೇಟೆ ಮತ್ತು ಬಾಗೇಪಲ್ಲಿ ಇವುಗಳಲ್ಲಿ ಹಾರಕ; ಬೌರಿಂಗ್‌ಪೇಟೆ, ಮುಳಬಾಗಲು, ಬಾಗೇಪಲ್ಲಿ ಇವುಗಳಲ್ಲಿ ಸಾವೆ; ಬೌರಿಂಗ್‌ಪೇಟೆ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗೋರೀಬಿದನೂರು, ಶ್ರೀನಿವಾಸಪುರ, ಇವುಗಳಲ್ಲಿ ರಾಗಿ; ಚಿಂತಾಮಣಿ ತಾಲ್ಲೂಕಿನಲ್ಲಿ ಬಲ್ಲರ್; ಮತ್ತು ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ಅವರೆ.

ಕುಯ್ಯಲಾದ ಪೈರುಗಳು—ಶಿಡ್ಲಘಟ್ಟ, ಗೋರೀಬಿದನೂರು, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ವೈಶಾಖಿ ಭತ್ತ.

ಆಗಬಹುದಾದ ಉತ್ಪತ್ತಿಯು—ವೈಶಾಖಿ ಭತ್ತ 8 ರಿಂದ 12 ಆಣೆ ವರಿಗೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಬೌರಿಂಗ್‌ಪೇಟೆ ತಾಲ್ಲೂಕಿನ ರಾಬರ್ಟ್ಸನ್ ಪೇಟೆ, ಸ್ವರ್ಣಕೊಪ್ಪಂ, ಉರಿಗಂ ಎಂಬ ಗ್ರಾಮಗಳಲ್ಲಿ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು, ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ಹುಲ್ಲೂ, ನೀರೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಉಳುವದು ಮತ್ತು ಬಿತ್ತುವದು.

ನಿಂತಿರುವ ಪೈರುಗಳ ಸ್ಥಿತಿಯು ಚೆನ್ನಾಗಿದೆ. ಆದರೆ, ಮದ್ದಗಿರಿ, ಶಿರ್ಯ, ಪಾವಗಡ, ಇವುಗಳ ಕೆಲವು ಭಾಗಗಳಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ.

ಬಿತ್ತನೆಯಾದ ಪೈರುಗಳು—ಗುಬ್ಬಿ, ತಿಪಟೂರು, ಕೊರಟಗೆರೆ, ಇವುಗಳ ಕೆಲವು ಭಾಗಗಳಲ್ಲಿ ಭತ್ತ; ಚಿಕ್ಕನಾಯಕನಹಳ್ಳಿ, ಗುಬ್ಬಿ, ಪಾವಗಡ, ಕೊರಟಗೆರೆ, ಇವುಗಳಲ್ಲಿ ಹರಳು; ಕುಣಿಗಲ್ಲು, ಮತ್ತು ಕೊರಟಗೆರೆಯಲ್ಲಿ ಕಬ್ಬು; ಗುಬ್ಬಿ ಮತ್ತು ಪಾವಗಡದಲ್ಲಿ ರಾಗಿ; ಗುಬ್ಬಿಯಲ್ಲಿ ಜೋಳ, ಅವರೆ, ಹುಚ್ಚೆಳ್ಳು, ನೆಲಗಡಲೇಕಾಯಿ; ಮತ್ತು ಪಾವಗಡದಲ್ಲಿ ತೊಗರಿ, ಹಾರಕ ಮತ್ತು ಪುಂಡಿ (ಕಣಬು).

ಕುಯ್ಯಲಾದ ಪೈರುಗಳು—ತುಮಕೂರು, ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು, ಕುಣಿಗಲ್ಲು, ಕೊರಟಗೆರೆ, ಇವುಗಳಲ್ಲಿ ಭತ್ತ; ಮತ್ತು ಕುಣಿಗಲ್ಲಿನಲ್ಲಿ ಕಬ್ಬು.

10. ಕಾಲದ ಆಯತಿಯು ಚೆನ್ನಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

124
7/4

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಗುಂಡ್ಲುಪೇಟೆ, ನಂಜನಗೂಡು, ಮಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭೂಮಿಯನ್ನು ಉತ್ತು, ಬಿತ್ತುವುದಕ್ಕೆ ತಯಾರ್‌ಮಾಡುತ್ತಿದ್ದಾರೆ.

ನಿಂತಿರುವ ಪೈರುಗಳು—ಯಾವವೆಂದರೆ, ರಾಗಿ, ಜೋಳ, ಎಳ್ಳು, ಕಬ್ಬು, ಹರಳು, ತೊಗರಿ, ಕಾರಿಭತ್ತ, ಮುಂತಾದವುಗಳು, ನಂಜನಗೂಡು ತಾಲ್ಲೂಕು ಕೌಲಂದಿ ಹೋಬಳಿಯ ಕೆಲವು ಭಾಗಗಳು ವಿನಹಾ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಎಡತೊರೆ, ನಂಜನಗೂಡು, ಇವುಗಳ ಕೆಲವು ಭಾಗಗಳಲ್ಲಿ ಭತ್ತ, ಮತ್ತು ನಂಜನಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿ.

ಬಿತ್ತನೆಯಾದ ಪೈರುಗಳು ಮತ್ತು ಉತ್ಪತ್ತಿ :—

ಶ್ರೀರಂಗಪಟ್ಟಣದಲ್ಲಿ—ಕುಯ್ಯಲಾದ ಉದ್ದು ಮತ್ತು ಹೆಸರು—8 ಆಣೆ. ಕೃಷ್ಣರಾಜಪೇಟೆ ಕಬ್ಬು.

ಎಡತೊರೆ, ಮಳವಳ್ಳಿ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಬ್ಬನ್ನು ಆಲೆಯಾಡಿ, ಬೆಲ್ಲವನ್ನು ಮಾಡುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಹುಣಸೂರು, ನಂಜನಗೂಡು, ಮಳವಳ್ಳಿ, ಮಂಡ್ಯ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಅತ್ಯವಶ್ಯಕವಾಗಿ ಬೇಕಾಗಿ ಇದೆ. ನಂಜನಗೂಡು ತಾಲ್ಲೂಕಿನ ಕೌಲಂದಿ ಹೋಬಳಿಯ ಕೆಲವು ಭಾಗಗಳಲ್ಲಿ ಹೊರ್ತು ಮಿಕ್ಕ ಎಲ್ಲಾ ಕಡೆಯಲ್ಲಿ ರೈತರಲ್ಲೂ ಮತ್ತು ವರ್ತಕರಲ್ಲೂ ಸಾಕಾದಷ್ಟು ಆಹಾರ ಜಿನಸಿ ಇವೆ.

11. ನಾಗಮಂಗಲ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಾಲರಾ ಇನ್ನೂ ಇರುವದು ಹೊರ್ತು, ಜನಾರೋಗ್ಯವು ಚೆನ್ನಾಗಿದೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ. ನಂಜನಗೂಡು ತಾಲ್ಲೂಕಿನ ಕೌಲಂದಿ ಹೋಬಳಿಯ ಕೆಲವು ಭಾಗಗಳಲ್ಲಿ ಬಿತ್ತನೆಯಾದ ಪೈರುಗಳಿಗೆ ಮಳೆಯು ಸಕಾಲದಲ್ಲಿ ಆಗದ್ದರಿಂದ, ಅವುಗಳು ನಷ್ಟವನ್ನು ಹೊಂದಿದವೆಂದೂ, ಆದ್ದರಿಂದ ಬೆಳೆಯು ಸಮರ್ಪಕವಾಗಿಲ್ಲವೆಂದೂ, ಮತ್ತು ಆ ಭಾಗಗಳಲ್ಲಿ ಮೇವು ಕಡಮೆಯಾಗಿ ಬರುತ್ತಾ ಇದೆಯೆಂದೂ, ರಿಪೋರ್ಟಾಗಿದೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಬೇಲೂರು ತಾಲ್ಲೂಕಿನಲ್ಲಿ ಭತ್ತದ ಸಸಿಯನ್ನೂ ಕಿತ್ತು ನಾಟುವದಕ್ಕೂ ಮತ್ತು ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ದೊಡ್ಡ ರಾಗಿಯನ್ನೂ ಬಿತ್ತುವುದಕ್ಕೂ ಭೂಮಿಯನ್ನು ತಯಾರ್‌ಮಾಡುತ್ತಿದ್ದಾರೆ. ಮಂಜರಾಬಾದ್ ತಾಲ್ಲೂಕಿನಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಹಾಸನ, ಅರಕಲಗೂಡು, ಈ ತಾಲ್ಲೂಕುಗಳಲ್ಲಿ ಗಿಡ್ಡರಾಗಿ, ತೊಗರಿ, ಹರಳು, ಕಬ್ಬು, ಭತ್ತ, ಇವುಗಳು ಒಳ್ಳೇ ಸ್ಥಿತಿಯಲ್ಲಿವೆ. ಆದರೆ, ಚನ್ನರಾಯಪಟ್ಟಣ, ಹೊಳೇನರಸೀಪುರ, ಈ ತಾಲ್ಲೂಕುಗಳಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ, ಮಳೆ ಇಲ್ಲದ್ದರಿಂದ ಇವುಗಳು ಬಣವಿ ಹೋಗುತ್ತಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಹಾಸನದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ದೊಡ್ಡ ರಾಗಿಯನ್ನು ಬಿತ್ತುತ್ತಾ ಇದ್ದಾರೆ.

ಕುಯ್ಯಲಾದ ಪೈರುಗಳು—ಮತ್ತು ಉತ್ಪತ್ತಿ :—ಹೊಳೇ ನರಸೀಪುರದ ತಾಲ್ಲೂಕಿನಲ್ಲಿ ಉದ್ದು, ಹೆಸರು ಮತ್ತು ತಡಗಣಿ. ಉತ್ಪತ್ತಿ 6 ಆಣೆ.

10. ಕಾಲದ ಆಯತಿಯು ಸುಮಾರಾಗಿದೆ ಡಿಸ್ಟ್ರಿಕ್ಟಿನ ಎಲ್ಲಾ ಕಡೆಗಳಲ್ಲಿಯೂ ಮಳೆಯು ಶೀಘ್ರದಲ್ಲಿಯೇ ಬರಬೇಕಾಗಿದೆ. ಆಹಾರ ಜಿನಸಿ ಸಾಕು.

11. ಜನಾರೋಗ್ಯವು ಸಮರ್ಪಕವಾಗಿಲ್ಲ. ಅರಕಲಗೂಡು, ಹೊಳೇನರಸೀಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ, ಬೇಲೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಪ್ಲೇಗು, ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬು ಮತ್ತು ಛಳಿ ಜ್ವರ, ಮತ್ತು ಚೆನ್ನರಾಯಪಟ್ಟಣದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಛಳೀ ಜ್ವರವೂ ಮತ್ತು ಆಮಶಂಕೆಯೂ, ಇವುಗಳು ಇದ್ದುಕೊಂಡು ಇವೆ.

12. ದನಗಳು ಸಾಧಾರಣವಾಗಿ ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಡಿಸ್ಟ್ರಿಕ್ಟಿನಲ್ಲೆಲ್ಲಾ ಉಳುವ ಮತ್ತು ಬಿತ್ತುವ ಕೆಲಸಗಳು ನಡೆಯುತ್ತಿವೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿಯೂ ಮತ್ತು ನಗರದ, ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ ಭತ್ತದ ಸಸಿಯನ್ನೂ ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು ಯಾವವೆಂದರೆ, ಕಬ್ಬು, ಭತ್ತ, ಹುಚ್ಚೆಳ್ಳು, ಹೆಸರು, ಜೋಳ, ಇವುಗಳು ಒಳ್ಳೆ ಸ್ಥಿತಿಯಲ್ಲಿವೆ

10. ಕಾಲದ ಆಯತಿಯು ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸಿ ಸಿಕ್ಕುತ್ತವೆ.

11. ಚೆನ್ನಗಿರಿ, ಶಿಕಾರಿಪುರ, ಸೊರಬ, ನಗರ, ಈ ತಾಲ್ಲೂಕುಗಳಲ್ಲಿ ಸಿಡುಬು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಹುಲ್ಲೂ, ಮೇವೂ ಸಿಕ್ಕುತ್ತವೆ. ದನಗಳು ಆರೋಗ್ಯವಾಗಿವೆ. ಆದರೆ ಸೊರಬ ತಾಲ್ಲೂಕಿನ ಜಡೇ ಹೋಬಳಿಯಲ್ಲಿಯೂ ಮತ್ತು ನಗರ ತಾಲ್ಲೂಕಿನ ಕಿರಿಹಳ್ಳಿ ಮತ್ತು ಕಲ್ಲೂರುಕಟ್ಟೆ ಹೋಬಳಿಗಳಲ್ಲಿಯೂ ಗೋಮಾರೀ ರೋಗವು ಇರುತಿದೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—

ತರೀಕೆರೆ ಮತ್ತು ಕಡೂರಿನಲ್ಲಿ—ಕಬ್ಬು; ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗಿಡ್ಡ ರಾಗಿ, ಹೆಸರು, ಕಡಲೆ ಮತ್ತು ಹುರುಳಿ; ಕಡೂರಿನಲ್ಲಿ ಭತ್ತ, ಪೈರು ಮುಂತಾದುವುಗಳು; ಮೂಡಿಗೆರೆಯಲ್ಲಿ ಭತ್ತ ಮತ್ತು ರಾಗಿ; ಮತ್ತು ಎಡೇಹಳ್ಳಿಯಲ್ಲಿ ಭತ್ತ; ಇವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—

ತರೀಕೆರೆಯಲ್ಲಿ—ಭತ್ತ, ರಾಗಿ, ಜೋಳ, ಹುರುಳಿ, ಮುಂತಾದುವುಗಳು ಚಿಕ್ಕಮಗಳೂರಿನಲ್ಲಿ ಭತ್ತ; ಕಡೂರಿನಲ್ಲಿ ಜೋಳ, ಎಳ್ಳು, ಹೆಸರು, ಉದ್ದು, ಹುರುಳಿ, ಕೊತ್ತುಂಬರಿ, ಹರಳು; ಎಡೇಹಳ್ಳಿ, ಮತ್ತು ಶ್ರಿಂಗೇರಿ ಇವುಗಳಲ್ಲಿ ಭತ್ತ; ಇವುಗಳು ಬಿತ್ತಲ್ಪಟ್ಟವು.

ಕುಯ್ಯಲಾದ ಪೈರುಗಳು ಮತ್ತು ಅಂದಾಜು—

ಕಡೂರಿನಲ್ಲಿ—ಕಬ್ಬು ಮತ್ತು ಕಾರ್ ಭತ್ತ—ಉತ್ಪತ್ತಿ 14 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಕಡೂರು ತರೀಕೆರೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ ಮೂಡಗೆರೆ ತಾಲ್ಲೂಕಿನ ಗೋಣೀಬೀಡು ಹೋಬಳಿಯ ಕೆಲವು ಗ್ರಾಮಗಳಲ್ಲಿ ಸಿಡುಬೂ, ಮತ್ತು ಚಿಕ್ಕಮಗಳೂರಿನ ಕೆಲವು ಆಜೂಬಾಜೂ ಗ್ರಾಮಗಳಲ್ಲಿ ಪ್ಲೇಗೂ ಪ್ರಾಣಭಯವಿಲ್ಲದ ಹಾಗೆ ಇದ್ದುಕೊಂಡು ಇವೆ.

12. ದನಗಳು ಆರೋಗ್ಯವಾಗಿವೆ. ತರೀಕೆರೆ, ಕಡೂರು, ಚಿಕ್ಕಮಗಳೂರು, ಈ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಇದ್ದುಕೊಂಡು ಇದ್ದ "ದೊಡ್ಡ ರೋಗವು" ಯೀಗ ಶಮನವಾಗಿದೆಯೆಂದು ರಿಪೋರ್ಟಾಗಿದೆ; ಆದರೆ, ಅದು ಶ್ರಿಂಗೇರಿಯಲ್ಲಿ ಪ್ರಾಣಭಯವಿಲ್ಲದಹಾಗೆ ಇನ್ನೂ ಇದ್ದುಕೊಂಡು ಇದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳ ಸ್ಥಿತಿಯು ಚೆನ್ನಾಗಿದೆ.

ಬಿತ್ತನೆಯಾದ ಪೈರುಗಳು—ಡಿಸ್ಟ್ರಿಕ್ಟಿನಲ್ಲಿ ಸುಮಾರು ಎಲ್ಲಾ ತಾಲ್ಲೂಕುಗಳಲ್ಲಿಯೂ ಎಳ್ಳು, ಜೋಳ, ಉದ್ದು, ಸಾಲೆ ಭತ್ತ, ಹರಳು, ತೊಗರಿ, ಹುರುಳಿ, ಹೆಸರು, ಇವುಗಳು ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಜುಲೈ 9ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.

1907ನೆಯ ವರ್ಷದ 24ನೆಯ ಶನಿವಾರಕ್ಕೆ ಮುಗಿದ (1907ನೆಯ ವರ್ಷದ ಜೂನ್ 15ನೆಯ ತಾರೀಖಿನ) ಕಡೂರು ಡಿಸ್ಟ್ರಿಕ್ಟಿನ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ.

ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ.					ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆ ಇತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಿಮೆಗಳು.			
	ಈ ವಾರ	ಇದೇ ವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ	1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರ ಕೊನೆಯ ವರೆಗೆ. ಈ ವರ್ಷ.	ಹಿಂದಿನ ವರ್ಷಗಳ ಸರಾಸರಿ.	4ನೆಯ ಮದ್ದದ ಹೆಚ್ಚು (+) ಕಡಮೆ (—) ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.				
1	2	3	4	5	6	7	8	9	10
	In. c.	In. c.	In. c.	In. c.	In. c.		ಈ ವಾರ ಸೇರುಗಳು.	ಕಳೆದ ವಾರ ಸೇರುಗಳು.	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ ಸೇರುಗಳು.
ಚಿಕ್ಕಮಗಳೂರು ...	1 0	1 71	7 3	10 27	—3 23				
ಕಡೂರು	0 15	0 54	6 66	6 52	+0 14				
ತರೀಕೆರೆ ...	..	1 18	3 31	8 24	—4 93	ಅಕ್ಕಿ ಮಧ್ಯಮತರಹ	8·50	8·50	9·97
ಕೊಪ್ಪ ...	1 35	7 73	8 91	14 8	—5 17	ರಾಗಿ ..	20·00	20·00	22·20
ಮೂಡಿಗೆರೆ ..	3 21	6 59	14 28	14 62	—0 34	ಹುರುಳಿ ..	12·00	12·00	...
ಎಡಹಳ್ಳಿ	0 73	3 5	7 83	9 59	—1 76	ಕಡಲೆ ..	9·00	9·00	9·50
ಶೃಂಗೇರಿ ...	2 99	10 19	11 24	16 16	—5 42				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ..	1 35	4 43	8 47	11 43	—2 93				
ಸಂಸ್ಥಾನದಲ್ಲಿ ಸರಾಸರಿ ..	0 66	1 58	8 5	8 9	—0 4				

ಬೆಂಗಳೂರು,
1907ನೆಯ ವರ್ಷದ ಜುಲೈ 26ನೆಯ ತಾರೀಖು. }

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್,

126
7/5

ನಂಬರ್ 3580-3600-5.

ಇಂಡಿಯಾ ಸರ್ಕಾರ

ವ್ಯಾಪಾರ ಮತ್ತು ಕೈಗಾರಿಕೆಯ ಇಲಾಖಾ.

ವ್ಯಾಪಾರ ಸಂಬಂಧವಾದ ಪ್ರದರ್ಶನ,

ತಾರೀಖು 25ನೆ ಏಪ್ರೆಲ್ 1907, ಮೊಕ್ಕಾಂ ಸಿಂಲಾ.

ತೀರ್ಮಾನ.

ಸರ್ 1908ನೆ ಇಸವಿಯಲ್ಲಿ ಲಂಡರ್ ಪಟ್ಟಣದಲ್ಲಿ ನಡೆಯುವ ಫ್ರ್ಯಾಂಕೊ ಬ್ರಿಟಿಷ್ ಪ್ರದರ್ಶನಕ್ಕೆ ಸಂಬಂಧಪಟ್ಟ ಇದರಡಿ ಕಂಡ ಕಾಗದ ಪತ್ರಗಳನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿ ಇದೆ. ಸದರಿ ಪ್ರದರ್ಶನವಲ್ಲಿ ಇಂಡಿಯಾ ಸರ್ಕಾರದವರು ತಾವು ಭಾಗಿಗಳಾಗುವದಿಲ್ಲವೆಂದು ನಿಷ್ಕರ್ಷೆ ಮಾಡಿದ್ದಾರೆ.

ಫ್ರ್ಯಾಂಕೊಬ್ರಿಟಿಷ್ ಪ್ರದರ್ಶನ, ಲಂಡರ್, 1908.

ನಮ್ಮ ನೆರೆ ಹೊರೆ ಭೂಖಂಡದ ಜನರಿಗೂ ನಮಗೂ ಸ್ನೇಹವು ಹೆಚ್ಚಿದುದೂ, ಮತ್ತು ಅವರಿಗೂ ನಮಗೂ-ತತ್ರಾಪಿ ನಮ್ಮ ಕೈಗಾರಿಕೆಯ ಮೇಲೆ ಪೋಟಾಪೋಟಿ ಮಾಡದೆ ಅದಕ್ಕೆ ಸಹಾಯಕವಾದ ಕೈಗಾರಿಕೆಗಳನ್ನು ಮಾಡುವ ಜನರಿಗೂ-ವ್ಯಾಪಾರ ವಿಷಯದಲ್ಲಿ ಇರುವ ಸಂಬಂಧಗಳನ್ನು ಹೆಚ್ಚಿಸುವುದಕ್ಕೆ ಮಾಡಿದ ಪ್ರಯತ್ನಗಳೂ, ಜನಾಂಗಗಳಲ್ಲಿ ಪರಸ್ಪರ ಸ್ನೇಹವನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಈಚೆಗೆ ನಡೆದ ಮಿಕ್ಕ ಎಲ್ಲಾ ಕಾರ್ಯಗಳಿಗಿಂತಲೂ ಅದಕ್ಕೆ ಸಂಬಂಧಪಟ್ಟ ಜನರಿಗೆ ಹೆಚ್ಚಾಗಿ ತೃಪ್ತಿಯನ್ನುಂಟುಮಾಡಿವೆ. ಬ್ರಿಟಿಷ್ ಸಂಯುಕ್ತರಾಜ್ಯದೊಡನೆ ಹಾಗೆ ತೃಪ್ತಿಕರವಾಗಿ ವ್ಯಾಪಾರ ನಡೆಸುವ ಜನಾಂಗಗಳಲ್ಲೆಲ್ಲಾ ಫ್ರಾನ್ಸ್ ದೇಶದವರೇ ಮುಖಂಡರಾಗಿರುತ್ತಾರೆ. ಈ ಎರಡು ದೇಶಗಳಿಗೂ ವ್ಯಾಪಾರ ಸಂಬಂಧವಾದ ಹೊಕ್ಕು ಬಳಕೆಯನ್ನು ಹೆಚ್ಚಿಸುವ ಮತ್ತು ಅವುಗಳ ಸ್ನೇಹವನ್ನು ವಾಸ್ತವಿಕ ವಾದದ್ದನ್ನಾಗಿಮಾಡುವ ಅಭಿಪ್ರಾಯವನ್ನು ಲಂಡರ್ ಪಟ್ಟಣದಲ್ಲಿರುವ ಫ್ರೆಂಚ್ ಚೇಂಬರ್ ಆಫ್ ಕಾಮರ್ಸ್ ಯಾ ಫ್ರಾನ್ಸ್ ದೇಶದ ವ್ಯಾಪಾರ ಸಂಘದವರು 1905ನೆ ಇಸವಿಯ ಅಕ್ಟೋಬರಿನಲ್ಲಿ ಸೂಚಿಸಲಾಗಿ ಈ ಅಭಿಪ್ರಾಯವನ್ನು ಉಭಯ ದೇಶದವರೂ ಅತ್ಯಾತ್ಯುತ್ಸುಕ್ಯದಿಂದ ಅನುಮೋದಿಸಿದರು. ತರುವಾಯ, ಈ ಆಲೋಚನೆಯನ್ನು ಲಂಡರ್ ಪಟ್ಟಣದಲ್ಲಿ ಆಗೈ ರಾಯಭಾರಿಯಾಗಿದ್ದ ಎಂ. ಕ್ಯಾಂಬರ್ ಎಂಬವರ ಮೂಲಕ ಫ್ರೆಂಚ್ ಸರ್ಕಾರದವರಿಗೆ ತಿಳಿಸಲಾಗಿ ಫ್ರೆಂಚ್ ವ್ಯಾಪಾರ ಇಲಾಖೆಯ ಮಂತ್ರಿಗಳಾದ ಎಂ. ಡೂಮರ್ಗ್ (?) ಎಂಬುವರು, ಫ್ರೆಂಚ್ ಸರ್ಕಾರದವರಿಗೂ ಅನ್ಯ ದೇಶಗಳಲ್ಲಿ ನಡೆಯುವ ಸರ್ವ ವಸ್ತು ಪ್ರದರ್ಶನಗಳಲ್ಲಿ ಸೇರುವ ಫ್ರಾನ್ಸ್ ದೇಶದವರಿಗೂ ಪ್ರತಿನಿಧಿಯಾಗಿ ಕೆಲಸ ಮಾಡುವ "ಕಮಿಟೆ ಫ್ರಾಂಕ್ವಾಡೆ ಎಕ್ಸ್‌ಪೊಸಿಷನ್ಸ್ ಆಲೆಟ್ರೇಂಜರ" ಎಂಬ ಸಭೆಯ ಅಭಿಪ್ರಾಯವನ್ನು ತೆಗೆದುಕೊಂಡು ಈ ವಿಷಯದಲ್ಲಿ ಮನಃಪೂರ್ವಕವಾಗಿ ಸಹಾಯಮಾಡಿದರು. ಈ ಸಭೆಯವರು ಸದರಿ ಆಲೋಚನೆಯನ್ನು ಬಹಳ ಉಲ್ಲಾಸದಿಂದ ಕೈಗೊಂಡರು.

1906ನೆ ಇಸವಿಯ ಜುಲೈ 11ನೆ ತಾರೀಖಿನ ದಿವಸ "ಮ್ಯಾನ್ಷನ್ ಹೌಸ್" ಎಂಬ ಮನೆಯಲ್ಲಿ ಪ್ರತಿನಿಧಿಗಳಾಗಿ ಬಂದಅನೇಕ ಜನರ ಸಭೆ ಸೇರಿತು. ಲಾರ್ಡ್ ಮೇಯರ್ ಎಂಬ ಅಧಿಕಾರಿಗಳು ಅಗ್ರಾಸನವನ್ನು ವಹಿಸಿದರು. ಆನರೆರಿ ಪ್ರೆಸಿಡೆಂಟರಾದ ಡ್ಯೂಕ್ ಆಫ್ ಆರ್ಗೈಲ್ ರವರು ಸಭೆಯ ಉದ್ದೇಶವನ್ನು ವಿವರಿಸಿದ ತರುವಾಯ, ಆ ಮೊದಲೇ ನಡೆಸಿದ್ದ ಏರ್ಪಾಡುಗಳನ್ನು ಒಪ್ಪಿಕೊಂಡು ಸರ್ವಸಮ್ಮತಿಯಿಂದ ಒಂದು ತೀರ್ಮಾನವು ಮಾಡಲ್ಪಟ್ಟಿತು. ಬಂದ ಸಭೆಯನ್ನೆಲ್ಲಾ ಯಾವುದಾದರೂ ಒಂದು ಸಾರ್ವಜನಿಕೋದ್ದೇಶಕ್ಕಾಗಿ ಖರ್ಚು ಮಾಡಬೇಕೆಂದು ಕೂಡ ತೀರ್ಮಾನವಾಯಿತು, ಮತ್ತು ಅವಶ್ಯವಾದ ಸಮಾಜಗಳನ್ನು ಮೊಕರರ್ಮಾಡುವುದಕ್ಕೂ 'ಗಾರಂಟಿ ಫಂಡ್' ಎಂಬ ಮೂಲ ಧನವನ್ನು ಏರ್ಪಡಿಸುವುದಕ್ಕೂ ಅಧಿಕಾರವೂ ಕೊಡಲ್ಪಟ್ಟಿತು.

ಸಭೆಯ ಕಾರ್ಯವು ಸಫಲವಾಗಿ ನೆರವೇರಿದುದನ್ನು ಕುರಿತು ಫ್ರೆಂಚ್ ರಿಪಬ್ಲಿಕ್ ಸರ್ಕಾರದ ಪ್ರೆಸಿಡೆಂಟರಿಗೆ ಲಾರ್ಡ್ ಮೇಯರವರು ತಂತಿಮೂಲಕ ವರ್ತಮಾನ ಕೊಟ್ಟಿದ್ದಕ್ಕೆ, ಪ್ರಕೃತ ಪ್ರದರ್ಶನಕ್ಕೆ ಫ್ರೆಂಚ್ ಸರ್ಕಾರದವರು ತಮ್ಮ ಮನಃಪೂರ್ವಕವಾದ ಸಹಾಯ ಕೊಡಲು ತಪ್ಪುವುದಿಲ್ಲವೆಂದು ಭರವಸೆಕೊಟ್ಟು ರಾಯಭಾರಿಗಳ ಮೂಲಕ ಜವಾಬು ಬಂತು. ಆ ತರುವಾಯ, ಫ್ರೆಂಚ್ ಸಭೆಯವರಿಂದ ನೇಮಿಸಲ್ಪಟ್ಟ ಪ್ರತಿನಿಧಿಗಳು ಲಂಡರ್ ಪಟ್ಟಣಕ್ಕೆ ಬಂದು, ಷಫರ್ಡ್ಸಬುಷ್ ಎಂಬ ಸ್ಥಳದಲ್ಲಿ ಚುನಾಯಿಸಲ್ಪಟ್ಟ ಜಾಗವನ್ನು ನೋಡಿ, ಸದರೀ ಸ್ಥಳವು ಸರಿಯಾದದ್ದೆನುತಲೂ ಆ ಪಟ್ಟಣದ ಎಲ್ಲಾ ಭಾಗಗಳಿಂದಲೂ ಆಜೂಬಾಜೂ ಪ್ರದೇಶಗಳಿಂದಲೂ ಜನರು ಅಲ್ಲಿಗೆ ಸುಲಭವಾಗಿ ಬರಬಹುದೆನುತಲೂ ಬಹಳವಾಗಿ ಅನುಮೋದಿಸಿದರು.

ಫ್ರಾನ್ಸ್ ದೇಶದ ವ್ಯಾಪಾರದ ಇಲಾಖೆಯ ಮಂತ್ರಿಗಳು, ಫ್ರೆಂಚ್ ಸಭೆಯವರಿಂದ ಲಾರ್ಡ್ ಮೇಯರಿಗೆ 1906ನೆ ಇಸವಿಯ ಅಕ್ಟೋಬರ್ ತಿಂಗಳಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ಕೊಡಲ್ಪಟ್ಟ ಔತಣದಲ್ಲಿ ಅಗ್ರಾಸನವನ್ನು ವಹಿಸಿದ್ದಾಗ್ಯೆ, ಫ್ರೆಂಚ್ ಸರ್ಕಾರದವರು ಈ ಕಾರ್ಯದಲ್ಲಿ ಮೊದಲಿನಿಂದಲೂ ಸೇರಿ ಇರುತ್ತಾರೆಯಾಗಿ ಈ ಕಾರ್ಯವು ಖಂಡಿತವಾಗಿಯೂ ಚೆನ್ನಾಗಿ ನೆರವೇರುವುದೆನುತ ಮುಂಚೆಯೇ ಸಹಾಯ ಮಾಡುವುದಾಗಿ ಕೊಟ್ಟ ಭರವಸೆಯನ್ನೇ ಪುನಃ ಹೇಳಿದರು. ಪ್ರದರ್ಶನದ ಗೌರವಾರ್ಥವಾಗಿ ಫಿಷಮೆಂಗರ್ ಕಂಪೆನಿಯವರು ಮಾಡಿದ ಔತಣದ ಸಮಯದಲ್ಲಿ ಪ್ರೈಮವಾರ್ಡೆನ್ ಎಂಬ ಅಧೀಸರಾದ ಸರ್ ರಿಚ್ಚರ್ಡ್ ಬಿ. ಮಾರ್ಟಿನ್ ಬಾರ್ಟ್ ಎಂಬುವರು ಈ ಪ್ರದರ್ಶನವು ಈ ಎರಡು ಜನಾಂಗಗಳ ಸಂಬಂಧವನ್ನು ಇನ್ನೂ ಹೆಚ್ಚಿಸುವುದರಲ್ಲಿ ಬಹಳ ಮುಖ್ಯವಾದದ್ದೆಂದು ಅಭಿಪ್ರಾಯಪಟ್ಟರು. ಅದೇ ದಿವಸ ಬ್ರಿಟಿಷ್ ಎಂಪೈರ್ ಲೀಗ್ ಎಂಬ ಸಂಘದವರು ಹೌಸ್ ಆಫ್ ಕಾಮನ್ಸ್ ಎಂಬ ಸಭಾ ಮಂದಿರದಲ್ಲಿ ಕೂಟ ಸೇರಿದ್ದಾಗ್ಯೆ, ಆ ಸಭೆಗೆ ಪೂರ್ವದಲ್ಲಿ ಸಭಾನಾಯಕರಾದ ವೈಕೌಂಟ್ ಸೆಲ್ಬಿ ಯವರು ಒಂದು ತೀರ್ಮಾನವನ್ನು ಮಾಡ

ಬೇಕೆನುತ ಪ್ರಸ್ತಾಪಿಸಲಾಗಿ, ಅದಕ್ಕೆ ಸರ್ವರೂ ಸಮ್ಮತಿಪಟ್ಟರು. ಈ ತೀರ್ಮಾನದಿಂದ ಪ್ರದರ್ಶನಕ್ಕೆ ಸದರಿ ಸಂಘದವರು ಸಹಾಯವಮಾಡುವುದಾಗಿ ವಾಗ್ದಾನ ಮಾಡಿದ್ದಲ್ಲದೆ, ಪ್ರದರ್ಶನವು ಚೆನ್ನಾಗಿ ನೆರವೇರುವುದಕ್ಕೆ ಬೇಕಾದ ಸಹಾಯವನ್ನು ತಮ್ಮ ಕೈಲಾದಮಟ್ಟಿಗೂ ಮಾಡಬೇಕೆನುತ ಸಂಘದ ಸಾಮಾಜಿಕರನ್ನೆಲ್ಲಾ ಪ್ರಾರ್ಥಿಸಿದರು.

ಫ್ರ್ಯಾಂಕೊ ಬ್ರಿಟಿಷ್ ಕುಶಲವಿದ್ಯೆಗಳ, ಕೈಗಾರಿಕೆಗಳ ಮತ್ತು ಉದ್ಯೋಗಗಳ ಪ್ರದರ್ಶನವು 1908ನೆ ಇಸವಿಯ ಮೇ ತಿಂಗಳ ಆದಿಭಾಗದಲ್ಲಿ ಪ್ರಾರಂಭವಾಗುತ್ತದೆ.

ಷಫರ್ಡ್ಸ್ ಬುಷ್ ಎಂಬ ಸ್ಥಳದಲ್ಲಿ ಮೊದಲು ಚುನಾಯಿಸಿದ ಜಾಗವು 98 ಎಕರೆಗಳ ವಿಸ್ತೀರ್ಣವುಳ್ಳದ್ದಾಗಿತ್ತು. ಅದಕ್ಕೆ ಲಗತ್ತಾಗಿ 42 ಎಕರೆಗಳ ಜಾಗವನ್ನು ಈಚೆಗೆ ತೆಗೆದುಕೊಂಡಿದೆ. ಈ ಜಾಗಾಕ್ಕೆ ಪ್ರವೇಶ ಮಾಡುವ ಮುಖ್ಯವಾದ ದಾರಿಯು (ಟ್ಯೂಬ್ ಎಂದು ವಾಡಿಕೆಯಾಗಿ ಜನರು ತಿಳಿದುಕೊಂಡಿರುವ) ಮಧ್ಯ ಲಂಡನ್ ರೈಲ್ವೆಯ ಸ್ಟೇಷನಿಗೂ ಮತ್ತು ಪಶ್ಚಿಮ ಲಂಡನ್, ಲಂಡನ್ ಮತ್ತು ವಾಯವ್ಯ ಮತ್ತು ದೊಡ್ಡ ಪಶ್ಚಿಮ ರೈಲ್ವೆಗಳ ಅಕ್ಸಬ್ರಿಜ್ ರೋಡ್ ಸ್ಟೇಷನಿಗೂ, ಮೆಟ್ರೊ ಪಾಲಿಟನ್, ಹ್ಯಾಮರ್ಸ್ಮಿತ್ ಮತ್ತು ಸಿಟಿ ರೈಲ್ವೆ ಸ್ಟೇಷನಿಗೂ, ದೊಡ್ಡ ಪಶ್ಚಿಮ ರೈಲ್ವೆ, ಈಲಿಂಗ್, ಮತ್ತು ಷಫರ್ಡ್ಸ್‌ಬುಷ್ ರೈಲ್ವೆಯ ಹೊಸ ಸ್ಟೇಷನಿಗೂ, ಸೇರಿದಹಾಗೆ ಪಕ್ಕದಲ್ಲಿಯೇ, ಲಂಡನ್ ಮತ್ತು ನೈರುತ್ಯ ರೈಲ್ವೆಯ ಷಫರ್ಡ್ಸ್‌ಬುಷ್ ಸ್ಟೇಷನಿಗೆ ಬಹಳ ಸಮೀಪವಾಗಿರುವುದಲ್ಲದೆ, ಡಿಸ್ಟ್ರಿಕ್ಟ್ ರೈಲ್ವೆ ಉತ್ತರ ಲಂಡನ್ ರೈಲ್ವೆ, ಮೆಟ್ರೊಪಾಲಿಟನ್ ಲಂಡನ್ ರೈಲ್ವೆ ಬ್ರೈಟನ್ ಮತ್ತು ದಕ್ಷಿಣ ತೀರದ ರೈಲ್ವೆ, ಆಗ್ನೇಯ ಮತ್ತು ಚಾತಮ್, ರೈಲ್ವೆ ಮತ್ತು ಗ್ರೇಟ್ ಸೆಂಟ್ರಲ್ (ದೊಡ್ಡ ಮಧ್ಯ) ರೈಲ್ವೆಗಳಿಗೆ ಸೀದಾ ದಾರಿಗಳುಳ್ಳದ್ದಾಗಿದೆ. ಮತ್ತು ಲಂಡನ್‌ಪಟ್ಟಣದ ಎಲ್ಲಾ ಭಾಗಗಳಿಗೂ ಅದರ ಸುತ್ತು ಮುತ್ತೂ ಇರುವ ಪ್ರದೇಶಗಳಿಗೂ ಹಾಕಿರುವ ಟ್ರಾಂವೆಗಳ ಮತ್ತು ಆಮ್ನಿಬಸ್ ಎಂಬ ಗಾಡಿ ಮಾರ್ಗಗಳ ಮಧ್ಯ ಪ್ರದೇಶದಲ್ಲಿದೆ. ಪ್ರದರ್ಶನವು ನಡೆಯುತ್ತಿರುವ ಕಾಲಗಳಲ್ಲಿ ಇಲ್ಲಿಗೆ ಘಂಟೆ ಒಂದಕ್ಕೆ 75,000 ಜನರು ಅಥವಾ ದಿನ ಒಂದಕ್ಕೆ 10 ಲಕ್ಷ ಜನರು ಬರುವಹಾಗೆ ಇದೆ.

ಪ್ರದರ್ಶನ ವಸ್ತುಗಳನ್ನು ಇಪ್ಪತ್ತು ಸ್ಥಳಗಳಲ್ಲಿ ಇಡಲಾಗುತ್ತದೆ. ಪ್ರತಿ ಒಂದು ಸ್ಥಳದಲ್ಲಿಯೂ ಅತ್ಯಾಶ್ಚರ್ಯಕರವಾದ ಕೈಗಾರಿಕೆಯ ಕೆಲಸಗಳಿಂದ ಅತಿ ರಮಣೀಯವಾಗಿ ವಿಚಿತ್ರವಾದ ಕಟ್ಟಡ ಕಟ್ಟಿದೆ. ಈ ಪ್ರತಿ ಸ್ಥಳದಲ್ಲಿಯೂ ಕಟ್ಟಡಗಳಿಗೆ ಮರದ ಸಾಮಾನುಗಳನ್ನು ಲೇಶಮಾತ್ರವೂ ಉಪಯೋಗಿಸಿಲ್ಲವಾದಕಾರಣ ಇಲ್ಲಿ ಬೆಂಕಿ ತಗುಲುವುದಕ್ಕೆ ಸ್ವಲ್ಪವೂ ಅವಕಾಶವಿಲ್ಲ. ದೊಡ್ಡದೊಡ್ಡ ಕಟ್ಟಡಗಳ ಪೈಕಿ ಯಂತ್ರಶಾಲೆಯು ಒಂದಾಗಿರುವುದು. ಇದು ಇದರ ಪ್ರಕಾರವೂ ಸೇರಿ 3,21,066 ಚದರಡಿಗಳ ವಿಸ್ತೀರ್ಣವುಳ್ಳದ್ದಾಗಿರುವುದು. ಇಷ್ಟು ದೊಡ್ಡ ಕಟ್ಟಡವನ್ನು ಈ ದೇಶದಲ್ಲಿ ಈವರೆಗೂ ಕಟ್ಟಿ ಇಲ್ಲ. ವಿದ್ಯಾಭ್ಯಾಸ, ಕುಶಲವಿದ್ಯೆ, ಸಾರ್ವವಿಷಯಿಕವಾದ ವಿದ್ಯೆ, ನಾನಾ ಸಾಧನಗಳು, ವೈದ್ಯುತಶಕ್ತಿ, ಶಾಸ್ತ್ರ, ಸಂಗೀತ— ಈ ಸಂಬಂಧವಾದ ಪ್ರದರ್ಶನಗಳಿಗೆ ಬೇರೆ ಸ್ಥಳಗಳನ್ನು ಏರ್ಪಡಿಸಿ ಇದೆ. ಊಟದ ಮನೆಗಳು, ಕಾಫಿ ಮನೆಗಳು, ಗಾರ್ಡನ್ ಕ್ಲಬ್ಸ್ ಎಂಬ ಸಂಘಗಳು, (ಬಹಳ ವಿಸ್ತಾರವಾದ) ಆಟದ ಮೈದಾನಗಳು, ಸ್ವಯಂಚಲನಾ ಶಕ್ತಿಯುಳ್ಳ ಗಾಡಿಗಳು, ಸೈಕ್ಲ್ ಬಂಡಿ ವಗೈರೆಗಳಿಗೆ ದಾರಿಗಳು, ಮತ್ತು ಮನೋಹರವಾದ ವಿನೋದ ಸ್ಥಾನಗಳು ಸಾಮಾನ್ಯವಾಗಿ ಒಂದಕ್ಕೊಂದು ಸೇರಿದ ಹಾಗೆಯೇ ಇದ್ದಾಗ್ಯೂ, ಪ್ರದರ್ಶನಕ್ಕೆ ಮಾತ್ರವೇ ಏರ್ಪಡಿಸಲ್ಪಟ್ಟ ಶಾಲೆಯಿಂದ ಪ್ರತ್ಯೇಕವಾಗಿವೆ. ಈ ಪ್ರದರ್ಶನ ಶಾಲೆಗೆ ಇನ್ನೂ ಹೆಚ್ಚು ಸ್ಥಳ ಬೇಕಾದರೆ ಉಪಶಾಲೆಗಳನ್ನು ಕಟ್ಟುವುದಕ್ಕೆ ತಕ್ಕ ಏರ್ಪಾಡು ಮಾಡಿ ಇದೆ. ಹಾಗೆ ಕಟ್ಟುವ ಉಪಶಾಲೆಗಳು ಯಾವ ಕಟ್ಟಡದ ಶಾಖೆಗಳಾಗಿರುವವೋ ಅಂಥಾ ಕಟ್ಟಡಗಳ ಹಾಗೆಯೇ ವಿಚಿತ್ರವಾಗಿರುವವು.

ಚಿತ್ರವಿದ್ಯೆ, ಶಿಲ್ಪಿಕೆಲಸ, ಸಾಮಾನ್ಯ ಕುಶಲವಿದ್ಯೆ, ಇವುಗಳಿಗೆ ಸಂಬಂಧಪಟ್ಟ ವಸ್ತುಗಳ ಪ್ರದರ್ಶನವನ್ನು ಅರಮನೆಯಂಥಾ ದಿವ್ಯಭವನದಲ್ಲಿ ನಡೆಸಲಾಗುತ್ತದೆ. ಈ ಪ್ರದರ್ಶನವು ಹಿಂದೆ ಲಂಡನ್ ಪಟ್ಟಣದಲ್ಲಿ ನಡೆದ ಎಲ್ಲಾ ಪ್ರದರ್ಶನಕ್ಕಿಂತಲೂ ಭಾರಿಯಾಗಿರುವುದು. ಫ್ರೆಂಚ್ ಮತ್ತು ಬ್ರಿಟಿಷ್ ಜನರ ಈಗಿನ ವಿದ್ಯಾ ಚಮತ್ಕಾರಗಳ ಸಂಯೋಜನದಿಂದುಂಟಾದ ಅತ್ಯಂತ ನಾಜೂಕಾದ ಪದಾರ್ಥಗಳನ್ನು ಜನರು ನೋಡಬಹುದು.

ಪ್ರದರ್ಶನಕ್ಕಾಗಿ ಏರ್ಪಟ್ಟಿರುವ ಪಟ್ಟು ಸ್ಥಳದಲ್ಲಿ ಪೂರಾ ಅರ್ಧ ಭಾಗವನ್ನು ಫ್ರಾನ್ಸ್ ದೇಶದವರು ತೋರಿಸುವ ಪ್ರದರ್ಶನಕ್ಕಾಗಿ ಬಿಟ್ಟಿದೆ. ಇದು ಪ್ಯಾರಿಸ್ ಪಟ್ಟಣದ ಹೊರಗೆ ಫ್ರಾನ್ಸ್ ದೇಶದವರು ಈವರೆಗೆ ತೋರಿಸಿರುವ ಎಲ್ಲಾ ಪ್ರದರ್ಶನಕ್ಕಿಂತಲೂ ವಿಶೇಷ ವಿಸ್ತಾರವಾಗಿರುವುದು. ಸೇಂಟ್‌ಲೂಯೀ ಪಟ್ಟಣದಲ್ಲಿ ಫ್ರೆಂಚ್ ಪ್ರದರ್ಶನಕ್ಕೆ 77212 ಚದರ ವಿಾಟರುಗಳ ಎಂದರೆ 800000 ಚದರ ಅಡಿಗಳಿಗಿಂತಲೂ ಹೆಚ್ಚಾದ ಜಾಗಾ ತೆಗೆದುಕೊಂಡಿತ್ತೆಂಬ ಸಂಗತಿಯನ್ನು ಜ್ಞಾಪಿಸಿಕೊಂಡರೆ, ಈ ಫ್ರ್ಯಾಂಕೊ ಬ್ರಿಟಿಷ್ ಪ್ರದರ್ಶನದಲ್ಲಿ ಫ್ರೆಂಚ್ ಜನರ ಭಾಗಕ್ಕೆ ಬೇಕಾಗುವ ಸ್ಥಳ ವಿಸ್ತಾರವು ಕೂಡಲೆ ವ್ಯಕ್ತವಾಗುತ್ತದೆ. ಫ್ರೆಂಚ್ ಕಾಲನಿಯಾ ವಸ್ತಿಗಳಿಂದ ಬರುವ ವಸ್ತುಗಳನ್ನು ತೋರಿಸುವ ಏರ್ಪಾಡಿಗಾಗಿಯೇ ಒಂದು ಪ್ರತ್ಯೇಕವಾದ ಸಂಘವು ಏರ್ಪಟ್ಟು, ಸದರಿ ಕಾಲನಿಗಳ ಉತ್ಪನ್ನಗಳನ್ನೂ ಐಶ್ವರ್ಯವನ್ನೂ ಒಟ್ಟಾಗಿ ತೋರಿಸುವ ಒಂದು ವಸ್ತು ಸಮುದಾಯವನ್ನು ಕಳುಹಿಸಬೇಕೆಂದು ಉದ್ದೇಶಿಸಲ್ಪಟ್ಟಿದೆ. ಸದರಿ ವಸ್ತು ಸಮುದಾಯವನ್ನು ಆಯಾ ದೇಶಗಳಿಗೆ ವಾಡಿಕೆಯಾದ ನಾನಾ ವಿಧವಾದ ಶಿಲ್ಪ ಕೌಶಲವನ್ನು ತೋರಿಸುವಂಥಾ, ಮತ್ತು 1900ನೆ ಇಸವಿಯಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ನಡೆದ ಪ್ರದರ್ಶನದಲ್ಲಿಯೂ, ಈಚೆಗೆ ಈ ವರ್ಷದಲ್ಲಿ ಮಾರ್ಸೇಲ್‌ನಲ್ಲಿ ನಡೆದ ಕಲೋನಿಯಲ್ ಪ್ರದರ್ಶನದಲ್ಲಿಯೂ, ವ್ಯಕ್ತಪಟ್ಟ ಫ್ರೆಂಚ್ ಕಾಲನಿಗಳ ಸುಂದರವಾದ ಲಕ್ಷಣಗಳನ್ನು ಪುನಃ ತೋರಿಸುವಂಥಾ ಕಟ್ಟಡಗಳಲ್ಲಿ ಇಡಲಾಗುತ್ತದೆ.

ಮನುಷ್ಯನು ಕಂಡು ಹಿಡಿದ ನವೀನಕಲ್ಪನೆಗಳ ಮತ್ತು ಕೈಗಾರಿಕೆಯ ಪ್ರತಿ ಒಂದು ಭಾಗದಲ್ಲಿಯೂ ಕಳೆದ ಶತಮಾನದ ಮಧ್ಯ ಕಾಲದಿಂದೀಚೆಗೆ ಆದ ಅಭಿವೃದ್ಧಿಯನ್ನು ಚಕ್ರಾಧಿಪತ್ಯದ ರಾಜಧಾನಿಯಲ್ಲಿ ತೋರಿಸಲು 1862ನೆ ಇಸವಿಯಿಂದೀಚೆಗೆ ಬ್ರಿಟಿಷ್ ಕೈಗಾರಿಕೆಯವರಿಗೂ ವ್ಯವಸಾಯಗಾರರಿಗೂ ಅವಕಾಶದೊರೆತಿರುವುದಿಲ್ಲ; ಈಗ ಅವುಗಳನ್ನು ತೋರಿಸಲು ಅವರಿಗೆ ಅವಕಾಶದೊರೆಯುವುದು. ಫ್ರಾನ್ಸ್ ದೇಶದ ಪ್ರದರ್ಶಕರು ಕಳೆದ ಅನೇಕ ವರ್ಷಗಳಿಂದ ಏರ್ಪಡಿಸಿಕೊಂಡಿರುವಂಥಾ ಕ್ರಮಗಳನ್ನೇ ಇವರೂ ಈಗ ಪ್ರಥಮತಃ ಅನುಸರಿಸುವುದರಿಂದ ಪ್ರದರ್ಶನವನ್ನು ನೋಡುವುದಕ್ಕೆ ಬಂದವರು ಅಲ್ಲಿನ ವಸ್ತುಗಳನ್ನು ಪೂರ್ತಿಯಾಗಿ ಪರೀಕ್ಷೆಮಾಡಿ ನೋಡದೆ ಅವುಗಳನ್ನು ಬಿಟ್ಟುಹೋಗಲಾರದಂತೆ ಅವರ ಮನಃಸನ್ನು ಆಕರ್ಷಿಸುವ ರೀತಿಯಲ್ಲಿ ಸಂಯುಕ್ತ (ಗ್ರೇಟ್‌ಬ್ರಿಟನ್ ಮತ್ತು ಐರ್ಲೆಂಡ್) ರಾಜ್ಯದವರು ವಸ್ತುಗಳನ್ನು ಪ್ರದರ್ಶನ ಮಾಡುವರು.

ಪ್ರದರ್ಶಕರಿಗೂ ನೋಟಗಾರರಿಗೂ ಅನುಕೂಲವಾಗುವಂತೆ ಕಮರ್ಷಿಯಲ್ ಬರೋಸ್ ಎಂಬ ಕಚೇರಿಗಳನ್ನು ಏರ್ಪಡಿಸಿ ಇದೆ. ಇವುಗಳಲ್ಲಿ ಮುಖ್ಯವಾದ ಕಚೇರಿಯು ಪ್ರದರ್ಶನಶಾಲೆಯ ದೊಡ್ಡ ಬಾಗಿಲಿನ ಬಳಿ ಇದೆ. ಫಲಾನಾ ಪ್ರದರ್ಶನ ವಸ್ತು ಮನ್ನು ಇಟ್ಟಿರುವ ಸ್ಥಳವನ್ನೂ, ಅದರ ಸ್ವಭಾವವನ್ನೂ ಗುಣವನ್ನೂ ಅದಕ್ಕೆ ಸಂಬಂಧಪಟ್ಟ ಮಾಡಿದ ಗ್ರಂಥಾದಿಗಳೇನಾದರೂ ಇದ್ದರೆ ಅವುಗಳನ್ನೂ ಕುರಿತ ಸಂಪೂರ್ಣವಾದ ವರ್ತಮಾನವನ್ನು ನೋಟಗಾರರಿಗೆ ಕೊಡುವುದಕ್ಕಾಗಿ ಈ ಕಚೇರಿಯಲ್ಲಿ ಒಂದು ಇಲಾಖೆಯು ಇದೆ. ಯಾವುದಾದರೂ ಕೈಗಾರಿಕೆಯ ಪ್ರದರ್ಶನವನ್ನು ನೋಡಬೇಕೆಂದು ಪ್ರದರ್ಶನ ಶಾಲೆಗೆ ಬರುವ ಯಾವ ನೋಟಗಾರನಾಗಲಿ ಸ್ವಲ್ಪವೂ ಕಾಲಕಳೆಯದೆ ತನ್ನ ಮನಸ್ಸಿನ ಕೋರಿಕೆಯನ್ನು ಹೊಂದಬಹುದು. ಇದೂ ಅಲ್ಲದೆ ಮತ್ತೇನೆಂದರೆ ಯಾರಿಗಾದರೂ ಯಾವುದಾದರೂ ಒಂದು ವಸ್ತುವಿನ ಮೇಲೆ ಮನಸ್ಸು ಬಿದ್ದರೆ ಅದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಬಹುಸ್ವಲ್ಪ ಕಾಲದಲ್ಲಿಯೇ ತಿಳಿದುಕೊಳ್ಳಬಹುದು. ಪ್ರದರ್ಶನಶಾಲೆಯ ಎಲ್ಲಾ ಕಟ್ಟಡಗಳಲ್ಲಿಯೂ ಇಂಥಾ ಕಚೇರಿಯ ಶಾಖೆಗಳನ್ನು ಏರ್ಪಡಿಸುವುದು.

ಎಲ್ಲಾ ಬ್ರಿಟಿಷ್ ಕಾಲನಿಗಳೊಂದಿಗೂ ಆಶ್ರಿತ ರಾಜ್ಯಗಳೊಂದಿಗೂ ಒಡಂಬಡಿಕೆಗಳು ನಡೆಯುತ್ತಿರುವ ಪ್ರಯುಕ್ತ, ಈಗಿನ ನಾಗರೀಕತೆಗೆ ಬೇಕಾದ ಎಲ್ಲಾ ವಸ್ತುಗಳೂ ಸುಖಭೋಗ ವಸ್ತುಗಳೂ ಬ್ರಿಟಿಷ್ ಚಕ್ರಾಧಿಪತ್ಯದ ಮೇರೆಯೊಳಗೇನೆ ದೊರೆಯುತ್ತವೆಯೆಂಬ ಅಂಶವನ್ನು ತೋರ್ಪಡಿಸಲು ಈ ಫ್ರಾಂಕೋ ಬ್ರಿಟಿಷ್ ಪ್ರದರ್ಶನ ವೇಳೆಯ ಅವಕಾಶವನ್ನು ಅವರು ಉಪಯೋಗಿಸುವರೆಂದು ನಂಬಿ ಇದೆ.

ಭೂಖಂಡದಿಂದ ಎಂದರೆ ಯೂರೋಪು ಖಂಡದಿಂದ ಜನಗಳೂ ಲಂಡನ್ ಪಟ್ಟಣಕ್ಕೆ ಬರುವ ನಾನಾ ರೈಲ್ವೆಗಳಲ್ಲಿ ಪ್ರಯಾಣಿಕರಿಗೂ ಪ್ರದರ್ಶನ ವಸ್ತುಗಳನ್ನು ಸಾಗಿಸುವುದಕ್ಕೂ ಅನುಕೂಲವಾದ ಏರ್ಪಾಡು ಮಾಡಲಾಗಿದೆ. ಮತ್ತು ಈ ದೇಶದಲ್ಲಿ ಜನವಸತಿಯುಳ್ಳ ನಾನಾ ಸ್ಥಳಗಳಿಂದ ಷಫರ್ಡ್ಸ್ ಬುಷ್ ಸ್ಥಳಕ್ಕೆ ಸೀದಾ ಹೋಗುವಂತೆ ರೈಲ್ವೆ ಬಂಡಿಗಳು ಅಡಿಗಡಿಗೆ ತಿರುಗುತ್ತಾ ಇರುತ್ತವೆ. ಈ ದೇಶದಿಂದಲೂ ಹೊರಗಿನಿಂದಲೂ ಬರುವ ಜನರ ಸುಖೋಪಕರಣಗಳನ್ನು ಮೇಲುವಿಚಾರಣೆ ಮಾಡುವುದಕ್ಕೂ, ಅವರಿಗೆ ದುಬಾರಿ ಖರ್ಚಾಗದಂತೆ ನೋಡಿಕೊಳ್ಳುವುದಕ್ಕೂ, ನ್ಯಾಯವಾದ ದರಗಳಲ್ಲಿ ಅವರಿಗೆ ಸ್ಥಳವಸತಿಯನ್ನು ದೊರಕಿಸಿಕೊಡುವುದಕ್ಕೂ, ಮತ್ತು ಪ್ರದರ್ಶನದಲ್ಲಿ ಚೆನ್ನಾಗಿ ಪರೀಕ್ಷಿಸಿ ನೋಡಿ ಸಂತೋಷಪಡತಕ್ಕದ್ದನ್ನೆಲ್ಲಾ ಬಹಳ ಸ್ವಲ್ಪ ಶ್ರಮದಿಂದಲೇ ನೋಡುವುದಕ್ಕೆ ಸಾಧ್ಯವಾಗುವಂತೆ ಮಾಡಿಕೊಡುವುದಕ್ಕೂ, ಒಂದು ಪ್ರತ್ಯೇಕ ಕಮಿಟಿ ಯಾ ಸಮಾಜವು ಏರ್ಪಡುತ್ತದೆ.

ಸಂಗೀತ ಸಂಬಂಧವಾದ ಏರ್ಪಾಡಿಗೆ ವಿಶೇಷ ಅವಧಾನವನ್ನು ಕೊಟ್ಟಿದೆ. ಹಿಂದೆ ಲಂಡನ್ ಪಟ್ಟಣದಲ್ಲಿ ನಡೆದ ಯಾವ ಪ್ರದರ್ಶನದಲ್ಲಿಯೂ ಈ ವಿಷಯದಲ್ಲಿ ಇಷ್ಟು ಭಾರಿಯಾದ ಏರ್ಪಾಡುಗಳನ್ನು ಮಾಡಿರಲಿಲ್ಲ. ಅನೇಕ ವಿಧವಾದ ವಿನೋದಗಳು ನಡೆಯುತ್ತವೆ. ಆದರೆ ಇಂಥಾ ವಿನೋದಗಳು ನಡೆಯುವ ಸ್ಥಳಗಳು ಪ್ರದರ್ಶನಶಾಲೆಯಿಂದ ಪ್ರತ್ಯೇಕವಾಗಿವೆ.

ಪ್ರದರ್ಶನಶಾಲೆಯ ಪ್ರದೇಶಗಳಲ್ಲಿ ಫ್ರಾನ್ಸ್ ದೇಶದ ಅಡಿಗೆಯವರು ಇಟ್ಟುಕೊಂಡಿರುವ ಭೋಜನಶಾಲೆಗಳು ಬಹು ಪ್ರಖ್ಯಾತವಾದವುಗಳೆಂಬುವುದಕ್ಕೆ, ಅವರು ಸೂಪಶಾಸ್ತ್ರದಲ್ಲಿ ನಿಪುಣರೆಂದು ಪ್ರಸಿದ್ಧಿಹೊಂದಿರುವುದೇ ಸಾಕಾದ ಭರವಸವಾಗಿದೆ. ಬ್ರಿಟಿಷ್ ಜನರ ಭೋಜನಶಾಲೆಗಳೂ ಪಾನಗೃಹಗಳೂ ತತ್ಸಮಾನವಾಗಿಯೇ ಚೆನ್ನಾಗಿರುತ್ತವೆ. ಇವುಗಳನ್ನು ಪ್ರದರ್ಶನ ಶಾಲೆಯ ಅಧಿಕಾರಿಗಳೇ ತಮ್ಮ ಸ್ವಂತ ಮೇಲ್ವಿಚಾರಣೆಯಲ್ಲಿಟ್ಟುಕೊಂಡಿರುವರು.

ಆಗಲೇ ಬಹಳ ಪ್ರದೇಶಕ್ಕೆ ದರಖಾಸ್ತು ಬಂದಿದೆ. ಇದನ್ನು ನೋಡಿದರೆ ಇತರ ದೇಶಗಳಲ್ಲಿರುವ ಬ್ರಿಟಿಷ್ ರಾಜ್ಯಗಳಿಂದ, ಹಿಂದೆ ನಡೆದ ಎಲ್ಲಾ ಪ್ರದರ್ಶನಗಳಲ್ಲಿ ಬಂದುದಕ್ಕಿಂತಲೂ ಹೆಚ್ಚಾಗಿ ಪ್ರದರ್ಶನ ವಸ್ತುಗಳು ಬರುವಂತೆ ತೋರುತ್ತದೆ. ಆದುದರಿಂದ, ವಸ್ತುಗಳ ಪ್ರತ್ಯೇಕ ಗುಂಪಿಗೆ ಸಂಬಂಧಪಟ್ಟ ಸಭೆಯವರು ಪರೀಕ್ಷೆ ಮಾಡಿ, ಪ್ರವೇಶಕ್ಕೆ ಅರ್ಹವಾದವುಗಳೇ ಎಂಬ ಸಂಗತಿಯನ್ನೂ, ಸ್ಥಳದ ಬಾಡಿಗೆಯನ್ನೂ ಮತ್ತು ಎಲ್ಲಾ ತಪಶೀಲುಗಳನ್ನೂ ನಿಷ್ಕರ್ಷೆ ಮಾಡುವುದಕ್ಕೆ ಅನುಕೂಲವಾಗುವಂತೆ ಬ್ರಿಟಿಷ್ ದೇಶದ ಕೈಗಾರಿಕೆಯವರೂ, ರೈತರೂ ಕೂಡಿದ ಮಟ್ಟಿಗೂ ತ್ವರೆಯಾಗಿ ಸ್ಥಳಕ್ಕೆ ದರಖಾಸ್ತು ಕೊಡಬೇಕೆಂದು ಕೋರಿ ಇದೆ.

1908ನೆ ಇಸವಿಯ ಫ್ರಾಂಕೋ ಬ್ರಿಟಿಷ್ ಪ್ರದರ್ಶನ.

ಪಶ್ಚಿಮ ಲಂಡನಿನಲ್ಲಿ ಷಫರ್ಡ್ಸ್ ಬುಷ್.

ರಿಯಾಯಿತಿಕೋಸ್ಕರ ಒಡಂಬಡಿಕೆ.

(ಈ ಮುಂದೆ ಅಸೋಸಿಯೇಷನ್ ಯಾ ಸಂಘವೆಂದು ಕರೆಯಲ್ಪಡುವ) ಲಂಡನ್ ಪಟ್ಟಣದ ಫ್ರಾಂಕೋ ಬ್ರಿಟಿಷ್ ಪ್ರದರ್ಶನಕ್ಕಾಗಿ ಸ್ಥಾಪಿಸಲ್ಪಟ್ಟ ಕಾರ್ಯ ನಿರ್ವಾಹಕ ಸಭೆಗೂ, ಮತ್ತು (ಈ ಮುಂದೆ ಕನ್ಸೆಷನೇರ್ ಯಾ ರಿಯಾಯಿತಿದಾರರೆಂದು ಕರೆಯಲ್ಪಡುವ) ____________________ ಗೂ, 190______ನೆ ಇಸವಿಯ ____________ನೆ ತಾರೀಖಾದ ಈ ದಿವಸ ನಡೆದ ಒಡಂಬಡಿಕೆ, ಈ ಉಭಯ ಪಕ್ಷದವರೂ ಈ ಮುಂದೆ ಕಾಣಿಸಿರುವ ಒಡಂಬಡಿಕೆಯನ್ನು ಮಾಡಿಕೊಳ್ಳಲು ಅಪೇಕ್ಷಿಸುತ್ತಾರೆಯಾಗಿ; ಈ ಮುಂದೆ ಹೇಳುವ ಮೇರೆಗೆ ಸಂಘದವರೂ ರಿಯಾಯಿತಿದಾರನೂ ಈ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತಾರೆ:—

1. ರಿಯಾಯಿತಿದಾರನು, ಇದಕ್ಕೆ ಲಗತ್ತಿರುವ ನಿಬಂಧನೆಗಳನ್ನೂ ರೆಗ್ಯುಲೇಷನುಗಳನ್ನೂ ಒಪ್ಪಿಕೊಂಡು ಪ್ರತಿ ಒಂದು ವಿಷಯದಲ್ಲಿಯೂ ಅವುಗಳಂತೆ ನಡೆದುಕೊಳ್ಳುತ್ತೇನೆಂದು ಈ ಮೂಲಕ ಸಮ್ಮತಿಸಿರುತ್ತಾನೆ, ಅಲ್ಲದೆ, ಈ ಮುಂದೆ ತೋರಿಸುವ ವಸ್ತುಗಳನ್ನು ಪಶ್ಚಿಮ ಲಂಡನ್ ಪಟ್ಟಣದ ಷಫರ್ಡ್ಸ್ ಬುಷ್ ಎಂಬ ಸ್ಥಳದಲ್ಲಿ ನಡೆಯುವ ಪ್ರದರ್ಶನದಲ್ಲಿ ತೋರಿಸುವ ಬಗ್ಗೆ ತನ್ನ ಸ್ವಂತ ಖರ್ಚಿನಿಂದ ಸಾಗಿಸುವುದಕ್ಕೂ ಅವುಗಳಿಗೆ ಸ್ಥಳ ಒದಗಿಸಿಕೊಳ್ಳುವುದಕ್ಕೂ ಒಪ್ಪಿರುತ್ತಾನೆ. ಇದಕ್ಕೆ ಮುಂದೆ ಎಲ್ಲಾ ರಿಯಾಯಿತಿ ಎಂದು ಹೆಸರು ಕೊಟ್ಟಿದೆ:—

1908ನೆ ಇಸವಿಯ ಮೇ ತಿಂಗಳಲ್ಲಿ ಅಥವಾ ಆ ಸುಮಾರಿನಲ್ಲಿ ಪ್ರದರ್ಶನ ಪ್ರಾರಂಭವಾಗುವ ತಾರೀಖು ಮೊದಲುಗೊಂಡು ಪ್ರದರ್ಶನದ ವೇಳೆಯಲ್ಲಿ ರಿಯಾಯತಿದಾರನು ಕೆಲಸಕ್ಕೆ ತಗುಲುವ ಎಲ್ಲಾ ಖರ್ಚುಗಳನ್ನು ವಹಿಸಬೇಕಲ್ಲದೆ, ಸದರಿ ರಿಯಾಯತಿಗೆ ಸಂಬಂಧಪಟ್ಟ ಎಲ್ಲಾ ಜನರ, ಕೆಲಸಗಾರರ, ಕಾವಲುಗಾರರ ಮತ್ತು ಇತರರ ಸಂಬಳಗಳನ್ನೂ ಕೂಲಿಯನ್ನೂ ಕೊಡಬೇಕು, ಮತ್ತು ಸಂಘದವರಿಂದ ಕೊಡಲ್ಪಟ್ಟು ಸಂಘದವರಿಗೆ ನೌಕರನಾಗಿರುವ ಒಬ್ಬ ಟಿಕೆಟು ತೆಗೆದುಕೊಳ್ಳುವವನ, ಕ್ಯಾಷಿಯರನ ಅಥವಾ ಬಾಗಿಲಿನಲ್ಲಿ ನಿಂತು ಹೋಗಿ ಬರುವವರ ಲೆಕ್ಕ ತೆಗೆದುಕೊಳ್ಳುವವನ ಸಂಬಳವನ್ನೂ ಸಹ ಕೊಡಬೇಕು ; ಪ್ರದರ್ಶನವು ಜನಗಳಿಗೆಲ್ಲಾ ತೆರದಿರುವ ಕಾಲಗಳಲ್ಲಿ ಪ್ರತಿದಿವಸವೂ ವಸ್ತುಗಳನ್ನು ತರದು ತೋರಿಸುತ್ತಿರಬೇಕು.

2. ಅಲ್ಲದೆ, ಸದರಿ ರಿಯಾಯತಿದಾರನ ಮತ್ತು ಸಂಘದ ಜಂಟಿ ಹೆಸರುಗಳಲ್ಲಿ __________ ಪೌಂಡಿಗೆ ಒಂದು "ಥರ್ಡ್ ಪಾರ್ಟಿರಿಸ್ಕ್ ಇನ್‌ಷೂರೆನ್ಸ ಪಾಲಿಸಿ" ಯಾ "ಮೂರನೆ ಕಕ್ಷಿಯ ನಷ್ಟದ ವಿಮೆ ಪತ್ರ" ವನ್ನು, ಸಂಘದವರು ಒಪ್ಪುವಂತೆ, ಒಂದು ಮೊದಲನೆಯ ತರಗತಿಯ "ಇನ್‌ಷ್ಯೂರೆನ್ಸ್ ಕಂಪೆನಿ" ಯಾ "ವಿಮೆ ಕೂಟದಲ್ಲಿ" ತೆಗೆದುಕೊಳ್ಳಲೂ ಸಹ ಸದರಿ ರಿಯಾಯತಿದಾರನು ಒಪ್ಪಿರುತ್ತಾನೆ.

3. ಸಂಘದವರಿಗೆ ಅವಶ್ಯವೆಂಬು ತೋರುವ ಪ್ರೆಸ್ ಮತ್ತು ಇತರ ಗೌರವಾರ್ಥವಾದ ಪ್ಯಾಸ್ ಅಥವಾ ಚೀಟಿಗಳನ್ನು ಹುಟ್ಟಿಸಲು ಸದರಿ ರಿಯಾಯಿತಿದಾರನು ಸಂಘದವರಿಗೆ ಈ ಮೂಲಕ ಅಧಿಕಾರ ಕೊಟ್ಟಿರುತ್ತಾರೆ ; ಮತ್ತು ಸದರಿ ಚೀಟಿಯು, ಸಂಘದವರಿಗೆ ಯಾವ ಖರ್ಚು ಇಲ್ಲದೆ ರಿಯಾಯಿತಿದಾರನ ರಿಯಾಯಿತಿಯನ್ನು ನೋಡಲು ಜನರನ್ನು ಬಿಡುವ ಬಗ್ಗೆ ಅಂಗೀಕರಿಸಲ್ಪಡತಕ್ಕದ್ದೆಂದು ತಿಳಿಯೋಣಾಗಿದೆ ; ಮತ್ತು 190 ______ ನೆ ಇಸವಿಯ __________ ನೆ ದಿವಸಕ್ಕೆ ಮುಂಚೆ ಅಥವಾ ಈ ಒಡಂಬಡಿಕೆಯು ಮುಗಿದ ನಂತರ ಆರು ತಿಂಗಳ ಒಳಗೆ, ತನ್ನ ರಿಯಾಯಿತಿಯನ್ನು ಇನ್ನೆಲ್ಲಿಯೂ ತೋರಿಸುವುದಿಲ್ಲವೆಂದು ಅಥವಾ ಪ್ರದರ್ಶನಕ್ಕೆ ಇಡುವುದಿಲ್ಲವೆಂದು ಸದರಿ ರಿಯಾಯಿತಿದಾರನು ಒಪ್ಪಿಕೊಳ್ಳುತ್ತಾನೆ.

4. ರಿಯಾಯಿತಿದಾರನು ಮೇಲೆ ನಮೂದಿಸಿದ ಮೇರೆಗೆ ಪ್ರಾಮಾಣಿಕವಾಗಿ ನಡೆದುಕೊಂಡದ್ದಕ್ಕಾಗಿಯೂ, ಇದಕ್ಕೆ ಲಗತ್ತಿರುವ ನಿಬಂಧನೆಗಳನ್ನು ಮತ್ತು ರೆಗ್ಯುಲೇಷನುಗಳನ್ನೂ ಅನುಸರಿಸಿ ನಡೆದದ್ದಕ್ಕಾಗಿಯೂ, ಸಂಘದವರು ಇದಕ್ಕೆ ಲಗತ್ತಿರುವ ನಕ್ಷೆಯಲ್ಲಿ ಕೆಂಪು ಬಣ್ಣದಿಂದ ಗುರ್ತು ಮಾಡಲ್ಪಟ್ಟ ಜಾಗವನ್ನು ಅಥವಾ ಕಟ್ಟಡವನ್ನು ಅಥವಾ ಕಟ್ಟಡದ ಭಾಗವನ್ನು ಅದು ಈಗ ಇರುವ ಸ್ಥಿತಿಯಲ್ಲಿ ಸದರಿ ರಿಯಾಯಿತಿಯ ಉದ್ದೇಶಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದೆಂದು ಒಪ್ಪಿಕೊಳ್ಳುತ್ತಾರೆ. ಆದರೆ ಮತ್ತೆ ಇನ್ಯಾವ ಉದ್ದೇಶಕ್ಕೆ ಅಥವಾ ಉದ್ದೇಶಗಳಿಗಾಗಿಯೂ ಮೇಲೆ ಹೇಳಿದ ಕಾಲದಲ್ಲಿ ಉಪಯೋಗಿಸಕೂಡದು. ಮತ್ತು ಸದರಿ ರಿಯಾಯಿತಿಯ ಬಗ್ಗೆ ಅಥವಾ ಅದಕ್ಕೆ ಸಂಬಂಧಪಟ್ಟು ಜಮೆಯಾದ ಒಟ್ಟು ಮೊಬಲಗಿನಲ್ಲಿ ಶೇಕಡಾ ______ ನ್ನು ಸದರಿ ರಿಯಾಯಿತಿದಾರನಿಗೆ ಕೊಡಲು ಒಪ್ಪಿಕೊಳ್ಳುತ್ತಾರೆ.

5. ಸದರಿ ರಿಯಾಯಿತಿಯನ್ನು ನೋಡುವುದಕ್ಕೆ ಪ್ರವೇಶಕ್ಕಾಗಿ ಕೊಡುವ ಛಾರ್ಜು ತಲೆ ಒಂದಕ್ಕೆ __________ ಇರತಕ್ಕದ್ದು. ಸಂಘದವರು ಒದಗಿಸಿಕೊಡುವ, ತಿರುಗಾಡುವ ಜನರ ಲೆಕ್ಕವನ್ನು ಇಡುವ ಟರ್ನ್‌ಸ್ಟೈಲ್ ಎಂಬ ಬಾಗಿಲಿನ ಮುಖಾಂತರ ಅಥವಾ ಟಿಕೆಟುಗಳ ಮೂಲಕ ಮಾತ್ರವೇ ಪ್ರವೇಶವು ದೊರೆಯತಕ್ಕದ್ದು ; ಪ್ರವೇಶಕ್ಕಾಗಿ ಕೊಡುವ ಹಣವನ್ನೆಲ್ಲಾ ಸಂಘದವರು ನೌಕರರನ್ನಾಗಿ ಮಾಡುವ "ಮನಿಟೇಕರ" ಎಂಬ ಹಣ ವಸೂಲ್ಮಾಡುವ ಅಧಿಕಾರಿಯು ಪ್ರತಿ ದಿವಸವೂ ವಸೂಲ್ಮಾಡತಕ್ಕದ್ದು ; ಹಾಗೆ ವಸೂಲ್ಮಾಡಿದ ಹಣದ ಲೆಕ್ಕದ ಒಂದು ನಕಲು ರಿಯಾಯಿತಿದಾರನ ವಶದಲ್ಲಿರತಕ್ಕದ್ದು ; ಮತ್ತು ಸದರಿ ರಿಯಾಯಿತಿಗೋಸ್ಕರ ಮತ್ತು ಅದಕ್ಕೆ ಸಂಬಂಧಪಟ್ಟು ಸಂಘದವರು ವಸೂಲ್ಮಾಡಿದ ಒಟ್ಟು ಮೊಬಲಗಿನಲ್ಲಿ ಶೇಕಡಾ __________ ನ್ನು ರಿಯಾಯಿತಿದಾರನಿಗೆ ಸಂಘದವರು ಈ ಕೆಳಗೆ ನಮೂದಿಸುವ ರೀತಿಯಲ್ಲಿ ಕೊಡುವರು.

6. ಸಂಘದವರು ವಾರವಾರದ ಲೆಕ್ಕವನ್ನು ಆಯಾ ವಾರದ ಶನಿವಾರದ ದಿವಸ ತಯಾರ್ಮಾಡಿ ಪ್ರತಿ ಒಂದು ವಾರಕ್ಕೂ ಅದರ ಮಾರನೆ ಬುಧವಾರದ ದಿವಸ ಸದರಿ ಶೇಕಡಾ ಮೊಬಲಗಿಗಾಗಿ ರಿಯಾಯಿತಿದಾರನಿಗೆ ಸಲ್ಲತಕ್ಕ ಹಣವನ್ನು ಅವನು ಒಪ್ಪಿಕೊಂಡ ಮೊಬಲಗು ಏನಾದರೂ ಇದ್ದರೆ ಅದನ್ನು ವಜಾ ಮಾಡಿಕೊಂಡು ಸದರಿ ರಿಯಾಯಿತಿದಾರನಿಗೆ ಕೊಡುವರು. ಸದರಿ ರಿಯಾಯಿತಿಯ ವಿಷಯವಾಗಿ ಸಂಘದವರು ವಸೂಲ್ಮಾಡಿದ ಹಣಗಳಿಗೆ ಸಂಬಂಧಪಟ್ಟ ಅವರ ಲೆಕ್ಕಗಳ ಬುಕ್ಕುಗಳನ್ನು ನ್ಯಾಯವಾದ ಎಲ್ಲಾ ಕಾಲಗಳಲ್ಲಿಯೂ ರಿಯಾಯಿತಿದಾರನು ಅಜಮಾಯಿಷಿಮಾಡಿ ನೊಡಬಹುದು.

7. ಜನರು ಪ್ರದರ್ಶನಶಾಲೆಯೊಳಗೆ ಬಂದರೆ ಸಂಘದವರು ಅವರಿಂದ ಹಣ ವಸೂಲ್ಮಾಡುವವರೆಂದು ತಿಳಿಯತಕ್ಕದ್ದು. ಪ್ರದರ್ಶನಶಾಲೆಗೆ ಹೋಗಲು ಸಂಘದವರಿಂದ ಆರೀತಿಯಾಗಿ ಅಥವಾ ಅನ್ಯಥಾ ಅಪ್ಪಣೆಯನ್ನು ಹೊಂದಿದ ಜನರು ಶಿವಾಯಿ ಇನ್ನಾರೂ ರಿಯಾಯಿತಿದಾರನಿಂದ ಉಪಯೋಗಿಸಲ್ಪಟ್ಟ ಜಾಗಾವಿಗೆ, ಕಟ್ಟಡಕ್ಕೆ ಅಥವಾ ಕಟ್ಟಡದ ಒಂದು ಭಾಗಕ್ಕೆ ಪ್ರವೇಶಿಸಲು ಬಿಡುವುದಿಲ್ಲ ; ಮತ್ತು ಮೇಲೆ ವಿವರಿಸಿದ ರಿಯಾಯಿತಿದಾರನ ರಿಯಾಯಿತಿಯೊಳಗೆ ಪ್ರವೇಶ ಮಾಡುವುದಕ್ಕೆ ಮಾತ್ರವೇ ಸಂಬಂಧಪಟ್ಟ ಹಣಕ್ಕೆ ವಿನಾ, ಸಂಘದವರು ಪ್ರದರ್ಶನಶಾಲೆಗೆ ಪ್ರವೇಶಕ್ಕಾಗಿಯಾಗಲಿ ಅನ್ಯಥಾ ಆಗಲಿ ವಸೂಲ್ಮಾಡಿದ ಯಾವ ಹಣದ ಯಾವ ಭಾಗಕ್ಕೂ ರಿಯಾಯಿತಿದಾರನಿಗೆ ಹಕ್ಕು ಇರುವುದಿಲ್ಲ.

8. ರಿಯಾಯಿತಿದಾರನು ತನ್ನ ರಿಯಾಯಿತಿಯ ಬಗ್ಗೆ ತಾನು ಉಪಯೋಗಿಸಿಕೊಳ್ಳುವ ಸದರಿ ಜಾಗದಲ್ಲಿ ಕಟ್ಟಡದಲ್ಲಿ ಅಥವಾ ಕಟ್ಟಡದ ಭಾಗದಲ್ಲಿ, ಈ ದಸ್ತಾವೇಜಿನ ಬಲದ ಮೇಲೆ ಅಥವಾ ಬೇರೆವಿಧವಾಗಿ, ಯಾವ ನ್ಯಾಯವಾದ ಹಕ್ಕನ್ನಾಗಲಿ ಸ್ವಾಸ್ಥ್ಯವನ್ನಾಗಲಿ ಸಂಪಾದಿಸಕೂಡದು, ಆದರೆ ಮೇಲೆ ಹೇಳಿದ ಕಾಲದಲ್ಲಿ ಸದರಿ ರಿಯಾಯಿತಿಯ ಉದ್ದೇಶಕ್ಕೋಸ್ಕರ ಮಾತ್ರವೇ ಅವುಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು.

9. ಈ ಕೆಳಗೆ ಇದಕ್ಕೆ ಲಗತ್ತಿರುವ ನಿಬಂಧನೆಗಳೂ ರೆಗ್ಯುಲೇಷನುಗಳೂ ಈ ಒಡಂಬಡಿಕೆಗೆ ಸೇರಿದ ಭಾಗವಾಗಿರತಕ್ಕದ್ದೆಂದು ಈ ಮೂಲಕ ಒಪ್ಪಿಕೊಂಡಿರುತ್ತದೆಯಾಗಿ ಇದರ ಉಭಯ ಕಕ್ಷಿಯವರೂ ಅವುಗಳಿಗನುಗುಣವಾಗಿ ನಡೆಯಲು ಬದ್ಧರಾಗಿರುತ್ತಾರೆ.

ಇದಕ್ಕೆ ಸಾಕ್ಷಿಯಾಗಿ ಮೇಲೆಹೇಳಿದ ಇದರ ಕಕ್ಷಿಗಾರರು ಮೇಲೆ ಬರೆದ ತಾರೀಖಿನಲ್ಲಿ ಮತ್ತು ವರ್ಷದಲ್ಲಿ ತಮ್ಮ ರುಜು ಹಾಕಿರುತ್ತಾರೆ.

ರುಜು__________

ಸಾಕ್ಷಿ__________

ರುಜು__________

ತಾರೀಖು__________

ಪ್ರದರ್ಶನಕ್ಕೆ ಸಂಬಂಧಪಟ್ಟ ಸಾಮಾನ್ಯ ನಿಬಂಧನೆಗಳು ಮತ್ತು ರೆಗ್ಯುಲೇಷನುಗಳು.

ರಿಯಾಯಿತಿಗಳ, ವಿನೋದಗಳ, ತಮಾಷೆಗಳ ಮತ್ತು ಪ್ರದರ್ಶನಗಳ ಬಗೆ.

ತೆರೆಯುವುದು ಮತ್ತು ಮುಚ್ಚುವುದು.

1. ೧೯೦೮ನೆ ಇಸವಿಯ ಮೇ ತಿಂಗಳಲ್ಲಿ ಅಥವಾ ಆಸುಮಾರಿನಲ್ಲಿ ಪ್ರದರ್ಶನವನ್ನು ಪ್ರಾರಂಭಮಾಡಿ ಭಾನುವಾರಗಳು ವಿನಾ ಪ್ರತಿ ದಿವಸವೂ ಸುಮಾರು ಮಧ್ಯಾಹ್ನದ ಲಾಗಾಯಿತು ರಾತ್ರಿ ಸುಮಾರು 11 ಗಂಟೆಯ ವರೆಗೆ ತೆಗೆದಿರತಕ್ಕದ್ದೆಂತಲೂ ಹೀಗೆಯೇ ಸುಮಾರು ಇಪ್ಪತ್ತು ವಾರಗಳ ವರೆಗೆ ನಡೆಸುತ್ತಿರಬೇಕೆಂದೂ ಯೋಚಿಸಿ ಇದೆ; ಆದರೆ ಈ ಕಾಲದ ಅವಧಿಯನ್ನು ಅಥವಾ ಪ್ರತಿ ದಿನವೂ ಪ್ರದರ್ಶನವು ತೆರೆದಿರುವ ಹೊತ್ತನ್ನು ಹೆಚ್ಚಿಸುವುದಕ್ಕಾಗಲಿ ಕಡಮೆ ಮಾಡುವುದಕ್ಕಾಗಲಿ ಇರುವ ಹಕ್ಕನ್ನು ಸಂಘದವರು ತಮಗೇ ಉಳಿಸಿಕೊಂಡಿರುತ್ತಾರೆ. ಪ್ರದರ್ಶನವನ್ನು ಪ್ರಾರಂಭ ಮಾಡುವುದಕ್ಕೂ ಅದನ್ನು ಮುಚ್ಚುವುದಕ್ಕೂ ಕ್ರಮವಾದ ನೋಟೀಸನ್ನು ಕೊಡಲಾಗುತ್ತದೆ.

ನಕ್ಷೆಯ ಬದಲಾವಣೆ.

2. ಸಂಘದವರು ಪ್ರಕಟಿಸಿರುವ ನಕ್ಷೆಗಳನ್ನೂ ಸಾಮಾನ್ಯ ನಿಬಂಧನೆಗಳನ್ನೂ ಕೂಡಿದ ಮಟ್ಟಿಗೂ ತಪ್ಪದೆ ಅನುಸರಿಸಬೇಕೆಂದು ಇಷ್ಟಪಡುತ್ತಾರೆ, ಆದರೆ ತಾವು ಅಪೇಕ್ಷಿಸಬಹುದಾದ ಯಾವುದಾದರೂ ತಿದ್ದುಪಾಟುಗಳನ್ನೂ ಬದಲಾವಣೆಗಳನ್ನೂ ಮಾಡುವ ಅಧಿಕಾರವನ್ನು ಉಳಿಸಿಕೊಂಡಿರುತ್ತಾರೆ.

ಸ್ಥಾಪಿಸುವುದು ಮತ್ತು ತೆಗೆದುಹಾಕುವುದು.

3. ರಿಯಾಯಿತಿದಾರರು, ತಮ್ಮ ರಿಯಾಯಿತಿಗೆ ಸಂಬಂಧಪಟ್ಟ ಪ್ರತಿ ಸಾಮಾನನ್ನೂ ಸಾಗಿಸುವುದಕ್ಕೂ ಪಾವತಿ ಮಾಡುವುದಕ್ಕೂ, ಕ್ರಮಪಡಿಸುವುದಕ್ಕೂ, ಸೇರಿಸುವುದಕ್ಕೂ ಮತ್ತು ತೆಗೆದು ಹಾಕುವುದಕ್ಕೂ ತಗಲುವ ಎಲ್ಲಾ ಖರ್ಚುಗಳನ್ನೂ, ಮತ್ತು ಅವಶ್ಯವಾದ ಕಟ್ಟಡಗಳೇನಾದರೂ ಇದ್ದರೆ ಅವುಗಳನ್ನೂ, ರಚನೆಗಳನ್ನೂ, ಭಾಗಗಳನ್ನೂ, ಸ್ಥಿರವಾದ ಪದಾರ್ಥಗಳನ್ನೂ ಪರದೆಗಳನ್ನೂ ಮತ್ತು ಅಲಂಕಾರ ವಗೈರೆಗಳನ್ನೂ ಮಾಡುವುದಕ್ಕೆ ತಗಲುವ ಖರ್ಚುಗಳನ್ನೂ ಕೊಡುವುದಕ್ಕೆ ಒಪ್ಪುತ್ತಾರೆ; ಇದೂ ಅಲ್ಲದೆ, ಅವರ ರಿಯಾಯಿತಿಗೆ ಸಂಬಂಧಪಟ್ಟ ಎಲ್ಲಾ ಸಾಮಾನುಗಳನ್ನೂ ಸಾಗಿಸುವುದನ್ನೂ ಪಾವತಿ ತೆಗೆದುಕೊಳ್ಳುವುದನ್ನೂ, ಅವುಗಳ ಭಾಂಗಿ ಒಡೆಯುವುದನ್ನೂ, ಅವುಗಳನ್ನು ಸ್ಥಾಪಿಸುವುದನ್ನೂ ಮತ್ತು (ಪ್ರದರ್ಶನದ ಆಖೈರಿನಲ್ಲಿ ಅಥವಾ ಈ ಒಡಂಬಡಿಕೆಯು ಪೂರೈಸುವಾಗ—ಈ ಎರಡರಲ್ಲಿ ಯಾವುದು ಮುಂಚೆ ಬಂದರೂ ಸರಿಯೇ) ಅವುಗಳನ್ನೆಲ್ಲಾ ತಮ್ಮ ಸ್ವಂತ ಖರ್ಚಿನಿಂದ ಸಾಗಿಸುವುದನ್ನೂ ತಾವೇ ಖುದ್ದಾಗಿಯಾಗಲಿ ತಮ್ಮ ಪ್ರತಿನಿಧಿಗಳ ಮುಖಾಂತರವಾಗಲಿ ಮೇಲು ವಿಚಾರಣೆ ತೆಗೆದುಕೊಳ್ಳಬೇಕು. ಈ ರೆಗ್ಯುಲೇಷನಿಗನುಗುಣವಾಗಿ ಚಾರುಚೂರು ತಪ್ಪದೆ ನಡೆದೇರೇನೆ ಶಿವಾಯಿ, ಸಂಘದವರಿಗೆ ಅವಶ್ಯಕವೆಂದು ತೋರುವ ಕೆಲಸವನ್ನೆಲ್ಲಾ ರಿಯಾಯಿತಿದಾರನ ಖರ್ಚಿನಿಂದಲೇ ಮಾಡಿಸುವ ಹಕ್ಕನ್ನು ಅವರು ತಮಗೇ ಉಳಿಸಿಕೊಂಡಿರುತ್ತಾರೆ.

ಒಳಬಾಡಿಗೆಗೆ ಕೊಟ್ಟುಕೊಳ್ಳುವುದು.

4. ಯಾವ ರಿಯಾಯಿತಿದಾರನೂ ತನಗೆ ಕೊಟ್ಟ ಯಾವ ಜಾಗವನ್ನಾಗಲಿ ಕಟ್ಟಡವನ್ನಾಗಲಿ ಕಟ್ಟಡದ ಭಾಗವನ್ನಾಗಲಿ ಪರಭಾರೆ ಮಾಡಕೂಡದು, ವರ್ಗಮಾಡಕೂಡದು, ಒಳಬಾಡಿಗೆಗೆಕೊಡಕೂಡದು, ಅಥವಾ ಅದರ ಸ್ವಾಧೀನವನ್ನು ಬಿಡಕೂಡದು, ಅಥವಾ ರಿಯಾಯಿತಿಯಲ್ಲಿನ ಯಾವ ಭಾಗವನ್ನಾಗಲಿ ಸಂಬಂಧವನ್ನಾಗಲಿ ವಿಲೆವಾರಿ ಮಾಡಕೂಡದು, ಅಥವಾ ನ್ಯಾಯವಾಗಿ ಒಪ್ಪಿಕೊಳ್ಳಲ್ಪಟ್ಟ ತನ್ನ ರಿಯಾಯಿತಿ ವಿನಾ ಇನ್ನಾವುದನ್ನು ಅದರಲ್ಲಿ ಇಡಕೂಡದು; ಮತ್ತು ರಿಯಾಯಿತಿದಾರನು ಈ ಮೇಲೆ ಕಂಡ ಕರಾರಿನಲ್ಲಿ ನಮೂದಿರುವ ಹೆಸರು ಅಥವಾ ಹೆಸರುಗಳುಳ್ಳ ಜನರು ವಿನಾ ಇನ್ಯಾರೂ ತನ್ನೊಡನೆ ಹಣ ವಿಷಯವಾಗಿಯಾಗಲಿ ಇತರ ವಿಧದಲ್ಲಿಯಾಗಲಿ ಸಂಬಂಧಪಟ್ಟಿಲ್ಲವೆಂದು ಈ ಮೂಲಕ ದೃಢವಾಗಿ ಹೇಳುತ್ತಾನೆ; ಮತ್ತು ಈ ಮೇಲೆ ಕಂಡ ಕರಾರಿಗೆ ರುಜು ಮಾಡಿದ ತರುವಾಯ ಈ ಕರಾರಿನ ಅಥವಾ ರಿಯಾಯಿತಿಯ ವಿಷಯವಾಗಿ, ಸಂಘದವರ ಬರಹ ಮೂಲಕವಾದ ಮಂಜೂರಾತಿಯಿಲ್ಲದೆ, ಪಾಲಿಗೆ ಸೇರುವದಿಲ್ಲವೆಂದು ಒಪ್ಪಿಕೊಳ್ಳುತ್ತಾನೆ; ಸದರಿ ಮಂಜೂರಾತಿಯನ್ನು ಕೊಡಲು ಸಂಘದವರು ಬದ್ಧರಾಗಿರಬೇಕಾದುದಿಲ್ಲ. ರಿಯಾಯಿತಿದಾರನು ಈ ನಿಬಂಧನೆಗೆ ಹೇಗಾದರೂ ತಪ್ಪಿನಡೆದರೆ ಅವನು ಅಂಥಾ ಕರಾರನ್ನು ಹೋಗಲಾಡಿಸಿಕೊಳ್ಳಲು ಗುರಿಯಾಗುತ್ತಾನೆ, ಅವನಿಗೆ ಯಾವ ಪರಿಹಾರ ದ್ರವ್ಯಕ್ಕೂ ಹಕ್ಕಿರುವುದಿಲ್ಲ. ಮತ್ತು ಯಾವ ಹಣವನ್ನೂ ಸಂಘದವರಿಂದ ವಾಪಸು ಪಡೆಯಲೂ ಹಕ್ಕಿರುವುದಿಲ್ಲ.

ಆಹಾರಗಳು.

5. ಯಾವುದಾದರೂ ರಿಯಾಯಿತಿದಾರನಿಂದ ಅಥವಾ ಅವನ ನೌಕರರಿಂದ ರಿಯಾಯಿತಿಗೋಸ್ಕರ ಉಪಯೋಗಿಸಲ್ಪಡುವ ಜಾಗದಲ್ಲಿ ಅಥವಾ ಜಾಗದ ಮೇಲೆ ಅಥವಾ ಅದರೊಳಗೆ, ಅಥವಾ ಕಟ್ಟಡದಲ್ಲಿ ಅಥವಾ ಕಟ್ಟಡದ ಭಾಗದಲ್ಲಿ, ಅದರ ಮೇಲೆ ಅಥವಾ ಅದರ ಒಳಗೆ, ಸಂಘದವರ ಬರಹ ಮೂಲಕವಾದ ಅಪ್ಪಣೆ ಶಿವಾಯಿ, ಅಥವಾ ಸಂಘದವರೊಡನೆ ರಿಯಾಯಿತಿದಾರನು ಮಾಡಿಕೊಂಡ ಒಡಂಬಡಿಕೆಯಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಕಂಠೋಕ್ತವಾದ ನಿಯಮಗಳಿದ್ದರೇನೆ ಹೊರತು, ಆಹಾರಕ್ಕೆ ಫಲಾಹಾರಕ್ಕೆ, ತಿಂಡಿಗೆ, ಅಥವಾ ಕುಡಿಯುವುದಕ್ಕೆ ಸಂಬಂಧಪಟ್ಟ ಯಾವ ಪದಾರ್ಥಗಳನ್ನಾಗಲಿ ಹೊಗೆಸೊಪ್ಪನ್ನಾಗಲಿ ತರಲೂಕೂಡದು, ಮಾರಲೂ ಕೂಡದು, ಕೊಡಲೂಕೂಡದೂ ಅಥವಾ ಉಪಯೋಗಿಸಲೂ ಕೂಡದು.

ಮೋಸಮಾಡಕೂಡದು.

6. ಜನಗಳಿಗೆ ಯಾವ ವಿಧವಾಗಿಯೂ ಮೋಸ ನಡೆಸುವದಕ್ಕೆ ಬಿಡುವುದಿಲ್ಲ. ಸ್ಪಷ್ಟವಾಗಿ ವಿವರಿಸಲ್ಪಡದೆ ಇರುವ ಅಥವಾ ಸಂಘದವರಿಂದ ಸಮ್ಮತಿಸಲ್ಪಡದೆ ಇರುವ ಯಾವ ವಸ್ತುವನ್ನೂ ಪ್ರದರ್ಶನಕ್ಕಾಗಿ ತೆಗದುಕೊಳ್ಳಕೂಡದು, ಅಥವಾ ಜನರ ಮುಂದೆ ನೋಟಕ್ಕೆ ಇಡಕೂಡದು; ತಕ್ಕದ್ದಲ್ಲವೆಂದು, ಅಥವಾ ಅಪಾಯಕರವಾದದ್ದೆಂದು ಅಥವಾ ಇನ್ಯಾವ ವಿಧದಲ್ಲಿಯಾದರೂ ಆಕ್ಷೇಪಣೀಯವಾದದ್ದೆಂದು ಸಂಘದವರಿಗೆ ತೋರುವ ಯಾವ ಸಾಮಾನನ್ನಾಗಲಿ ವಸ್ತುವನ್ನಾಗಲಿ ಯಾವಕಾರಣವನ್ನೂ ಹೇಳದೆ ಯಾವ ಕಾಲದಲ್ಲಿಯಾಗಲಿ ಪ್ರದರ್ಶನಶಾಲೆಯೊಳಗೆ ತರಕೂಡದೆಂದು ತಿರಸ್ಕರಿಸುವುದಕ್ಕೆ ಅಥವಾ ಅಲ್ಲಿಂದ ಹೊರಗೆ ತೆಗೆದುಕೊಂಡು ಹೋಗುವಂತೆ ಬಲಾತ್ಕರಿಸುವುದಕ್ಕೂ ಹಕ್ಕನ್ನು ಸಂಘದವರೇ ಉಳಿಸಿಕೊಂಡಿರುತ್ತಾರೆ; ಮತ್ತು ರಿಯಾಯಿತಿದಾರನು ಈ ಮೂಲಕ ಸದರಿ ಸಂಘದವರನ್ನು ಹಾಗೆ ತಿರಸ್ಕರಿಸಲ್ಪಟ್ಟ ಅಥವಾ ತೆಗೆದುಹಾಕಿಸಲ್ಪಟ್ಟ ಸಾಮಾನಿನ ಅಥವಾ ವಸ್ತುವಿನ ವಿಷಯವಾದ ಎಲ್ಲಾ ಜವಾಬ್ದಾರಿಯಿಂದಲೂ ವಿಮೋಚಿಸುತ್ತಾನೆ.

ಭೇದ ತೋರಿಸುವ ಗುರ್ತು.

7. ಪ್ರದರ್ಶನಕ್ಕೆ ಕಳುಹಿಸುವ ಎಲ್ಲಾ ಪೆಟ್ಟಿಗೆಗಳ ಮೇಲೂ ಸಾಮಾನುಗಳ ಮೇಲೂ ಎರಡು ಪಾರ್ಶ್ವಗಳಲ್ಲಿ | ಎಫ್. | ಬಿ. | ಇ. | ಎಂಬ ಭೇದ ತೋರಿಸುವ ಗುರುತನ್ನೂ, ರಿಯಾಯಿತಿದಾರನ ಹೆಸರನ್ನೂ, ರಿಯಾಯಿತಿಯ ತಪಶೀಲುಗಳನ್ನೂ, ಮತ್ತು ಆ ಸಾಮಾನುಗಳೂ ಪೆಟ್ಟಿಗೆಗಳೂ ಹೋಗತಕ್ಕ ಜಾಗಾ ಅಥವಾ ಕಟ್ಟಡದ ಹೆಸರನ್ನೂ ಹಾಗೆಯೇ ಪ್ರದರ್ಶನದ ಹೆಸರನ್ನೂ ಬರದಿರಬೇಕು.

ಸಾಮಾನುಗಳನ್ನು ತೆಗೆದುಕೊಳ್ಳೋಣ.

8. ಸಂಘದವರಿಂದ ಬರಹ ಮೂಲಕವಾದ ವಿಶೇಷ ಅಪ್ಪಣೆಯನ್ನು ಹೊಂದಿದ್ದ ಹೊರತು, ಪ್ರದರ್ಶನವು ಪ್ರಾರಂಭಿಸುವುದಕ್ಕೆ ಗೊತ್ತಾದ ತಾರೀಖಿಗೆ ಪೂರ್ವ ನಾಲ್ಕು ವಾರಗಳಿಗಿಂತ ಮೊದಲು ಯಾವ ತರದ ಸಾಮಾನುಗಳನ್ನೂ, ವಸ್ತುಗಳನ್ನೂ ತೆಗೆದುಕೊಳ್ಳುವುದಿಲ್ಲ.

ಖಾಲಿ ಪೆಟ್ಟಿಗೆ ವಗೈರೆಗಳನ್ನು ಸಾಗಿಸುವುದು.

9. ಎಲ್ಲಾ ಪೆಟ್ಟಿಗೆಗಳನ್ನೂ ಅವುಗಳು ತಲುಪಿದ ಕೂಡಲೆ ಭಾಂಗಿ ಒಡೆದು, ಖಾಲಿ ಪೆಟ್ಟಿಗೆಗಳನ್ನೂ ಹರಕು ಮುರಕು ಸಾಮಾನುಗಳನ್ನು ಸದರಿ ಜಾಗಾದಿಂದಲೂ ಕಟ್ಟಡದಿಂದಲೂ ಪ್ರದರ್ಶನ ಭೂಮಿಯಿಂದ ಹೊರಗೆ ಕೂಡಲೆ ರಿಯಾಯಿತಿದಾರನು ಸಾಗಿಸಿಬಿಡಬೇಕು; ಇಲ್ಲವಾದರೆ ರಿಯಾಯಿತಿದಾರನ ಖರ್ಚಿನಿಂದ ಈ ಕೆಲಸವನ್ನು ಮಾಡಿಸುವ ಹಕ್ಕನ್ನು ಸಂಘದವರು ತಮಗೇ ಉಳಿಸಿಕೊಂಡಿರುತ್ತಾರೆ. ಪೆಟ್ಟಿಗೆಗಳ ವಿಷಯವಾಗಿ ಯಾವ ವಿಧವಾದ ಜವಾಬ್ದಾರಿಯನ್ನೂ ಸಂಘದವರು ವಹಿಸುವುದಿಲ್ಲ.

ಸ್ಥಳೀಯ ಮತ್ತು ಇತರ ಅವಶ್ಯಕತೆಗಳು.

10. ರಿಯಾಯಿತಿದಾರ ಒದಗಿಸಿಕೊಳ್ಳುವ ಎಲ್ಲಾ ರಚನೆಯು ಅಥವಾ ಇತರ ಸಾಮಾನುಗಳೂ ಎಲ್ಲಾ ಕಾಲಗಳಲ್ಲಿಯೂ ನಿಬಂಧನೆಗಳಿಗನುಸಾರವಾಗಿರಬೇಕಲ್ಲದೆ ಲಂಡನ್ ಕೌಂಟಿ ಕೌನ್ಸಿಲಿನ ಮತ್ತು ಸ್ಥಳೀಯ ಇತರ ಎಲ್ಲಾ ಅಧಿಕಾರಿಗಳ ಒಪ್ಪಿತಕೆ ಒಳಪಟ್ಟಿರಬೇಕು.

ಬದಲಾವಣೆಗಳು.

11. ರಿಯಾಯಿತಿಗೆ ಸಂಬಂಧಪಟ್ಟ ಕಟ್ಟಡದ ಕೆಲಸವೆಲ್ಲಾ ಎಲ್ಲಾ ಕಾಲಗಳಲ್ಲಿಯೂ ಸಂಘದವರ ಮಂಜೂರಾತಿಗೆ ಒಳಪಟ್ಟಿರುತ್ತದೆ. ಒಂದು ರಿಯಾಯಿತಿಯನ್ನು ಒಂದು ಕಟ್ಟಡದಲ್ಲಿ ಸ್ಥಾಪಿಸಿದಲ್ಲಿ ಸಂಘದವರ ಬರಹ ಮೂಲಕವಾದ ಅಪ್ಪಣೆಯನ್ನು ಪಡೆದ ಹೊರತು ಮತ್ತು ರಿಯಾಯಿತಿದಾರನ ಸ್ವಂತ ಖರ್ಚಿನಿಂದಲ್ಲದೆ ಅದರ ನೆಲಕ್ಕೆ ಅಥವಾ ಗೋಡೆಗೆ ಒಂದು ನಾಗೋಸನ್ನು, ಕೊಂಡಿಯನ್ನು ಅಥವಾ ಇತರ ಪದಾರ್ಥವನ್ನು ಹೊಡೆಯ ಬಾರದು; ನೆಲವನ್ನಾಗಲಿ ಗೋಡೆಗಳನ್ನಾಗಲಿ ಮನೆಯ ಮೇಲು ಛಾವಣಿಯನ್ನಾಗಲಿ ಬದಲಾಯಿಸಲೂ ಕೂಡದು, ತೆಗೆದುಹಾಕಲೂ ಕೂಡದು ಅಥವಾ ಬಡಾಯಿಸಲೂಕೂಡದು.

ರಚನೆಗಳು ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

12. ಎಲ್ಲಾ ರಚನೆಗಳೂ, ಸೇರಿಸುವಿಕೆಗಳೂ, ಅಲಂಕಾರಗಳೂ, ನಕ್ಷೆಗಳೂ, ಪ್ರಕಟನೆಯ ಹಲಿಗೆಗಳೂ, ಪ್ರಸಿದ್ಧಪತ್ರಿಕೆಗಳೂ, ಪತಾಕೆಗಳೂ, ಮತ್ತು ಗುರ್ತು ವಗೈರೆಗಳೂ ಹೊಸದಾಗಿರಬೇಕು ಮತ್ತು ಎಲ್ಲಾ ವಿಷಯಗಳಲ್ಲಿಯೂ ಸಂಘದವರ ಒಪ್ಪಿಕೆಗೆ ಒಳಪಟ್ಟಿರಬೇಕು, ಮತ್ತು ಸಂಘದವರಿಗೆ ಯಾವುದಾದರೂ ಆಕ್ಷೇಪಣೀಯವಾದದ್ದೆಂದು ತೋರಿದರೆ ಅದನ್ನು ಅವರು ತೆಗೆದುಹಾಕಿಸುವರು ಅಥವಾ ಬದಲಾಯಿಸುವಂತೆ ಮಾಡುವರು. ರಿಯಾಯಿತಿದಾರರು ತಮ್ಮ ಸ್ವಂತ ರಿಯಾಯಿತಿಗೆ ಸಂಬಂಧಪಟ್ಟುದಕ್ಕೆ ಶಿವಾಯಿ ಇನ್ಯಾವ ಪ್ರಸಿದ್ಧಪತ್ರಿಕೆಗಳನ್ನೂ ಅಥವಾ ನೋಟೀಸುಗಳನ್ನೂ ಪ್ರಕಟಿಸಕೂಡದು.

ಕೆಲಸಕ್ಕೆ ನೇಮಿಸಲ್ಪಟ್ಟ ಕಂಟ್ರಾಕ್ಟರು.

13. ಎಲ್ಲಾ ತರಹದ ಕಟ್ಟಡಗಳನ್ನು ಕಟ್ಟುವುದಕ್ಕೂ, ಅಟ್ಟಣಿಗಳನ್ನು ಹಾಕುವುದಕ್ಕೂ, ಸಾಮಾನುಗಳನ್ನು ಸೇರಿಸುವುದಕ್ಕೂ, ಅಲಂಕಾರಗಳನ್ನೂ ಗುರುತುಗಳನ್ನೂ ಮಾಡುವುದಕ್ಕೂ ಪ್ರದರ್ಶನ ಶಾಲೆಗೆ ಬಂದು ಹುಕುಂ ಹೊಂದಲು ಕಂಟ್ರಾಕ್ಟರು ಯಾ ಕಂಟ್ರಾಕ್ಟರುಗಳನ್ನು ಸಂಘದವರು ನೇಮಿಸಬಹುದು. ಪ್ರದರ್ಶನಶಾಲೆಯ ಸರಹದ್ದಿನಲ್ಲಿ ಇತರ ಯಾವ ಕಂಟ್ರಾಕ್ಟರಿಗೂ ಕೆಲಸ ಹಿಡಿಯುವುದಕ್ಕೆ ಬಿಡುವುದಿಲ್ಲ; ಆದರೆ ರಿಯಾಯಿತಿದಾರರು ಬರೆದು ಕೇಳಿಕೊಂಡರೆ ತಮ್ಮ ಸ್ವಂತ ಕಂಟ್ರಾಕ್ಟರನ್ನು ಅಥವಾ ಜೋಡಿಸುವವರನ್ನು ನೇಮಿಸಿಕೊಳ್ಳಲು ಅಪ್ಪಣೆ ಕೊಡುತ್ತಾರೆ; ಅಂಥಾ ಕಂಟ್ರಾಕ್ಟರು ಪ್ರದರ್ಶನದ ನಿಬಂಧನೆಗಳಿಗೂ ರೆಗ್ಯುಲೇಷನುಗಳಿಗೂ ಒಳಪಟ್ಟಿರಬೇಕು; ಮತ್ತು ಅವನು ಮಾಡಿದ ಕೆಲಸಗಳಿಗೆಲ್ಲಾ ರಿಯಾಯಿತಿದಾರನು ಜವಾಬ್ದಾರನಾಗಿರತಕ್ಕದ್ದು.

ವೈದ್ಯುತಶಕ್ತಿ ಪ್ರವಾಹವು, ಹಬೆಯು ಮತ್ತು ನೀರಿನ ಸರಬರಾಯಿ.

14. ಯಾವ ಯಾವ ಸ್ಥಳದಲ್ಲಿ ವೈದ್ಯುತಶಕ್ತಿಯನ್ನು ಒದಗಿಸುವುದು ಸಾಧ್ಯವೋ ಆಯಾಯ ಸ್ಥಳಗಳಲ್ಲಿ. ಈ ಬಗ್ಯೆ ಏರ್ಪಟ್ಟಿರುವ ಫಾರಮುನೆಗಳಲ್ಲಿ ಬರೆದು ಕೇಳಿದರೆ, ವೈದ್ಯುತಶಕ್ತಿಯ ಪ್ರವಾಹವನ್ನೂ ಹಬೆಯನ್ನೂ ನೀರನ್ನೂ ರಿಯಾಯಿತಿದಾರನ ಖರ್ಚಿನಿಂದ ಮತ್ತು ಅವನ ಜವಾಬ್ದಾರಿಯ ಮೇಲೆ ಒದಗಿಸುವುದಕ್ಕೆ ತಕ್ಕ ಏರ್ಪಾಟು ಮಾಡಲಾಗುವುದು; ತಮಗೆ ಬೇಕಾಗಿರುವ ವೈದ್ಯುತಶಕ್ತಿ ಪ್ರವಾಹದ, ಹಬೆಯ, ಅಥವಾ ನೀರಿನ ಅಂದಾಜು ಪರಿಮಾಣವನ್ನು ರಿಯಾಯಿತಿದಾರರು ಹೇಳಬೇಕು; ಮತ್ತು ರಿಯಾಯಿತಿದಾರನು ತನ್ನ ರಿಯಾಯಿತಿಗಾಗಿ ತಾನು ಹಾಗೆ ಅಪೇಕ್ಷಿಸುವ ವೈದ್ಯುತಶಕ್ತಿಯ ಪ್ರವಾಹವನ್ನು, ಅಥವಾ ಹಬೆಯನ್ನು ಅಥವಾ ನೀರನ್ನು ತೆಗೆದುಕೊಂಡು ಹೋಗಿ ಜೋಡಿಸಿ ಸ್ಥಾಪಿಸುವುದಕ್ಕೆ ತಗಲುವ ಎಲ್ಲಾ ಖರ್ಚನ್ನೂ ಸ್ಥಳದಲ್ಲಿ ವಾಡಿಕೆಯಾಗಿರುವ ಕ್ರಯದ ಮೇರೆಗೆ ಸಂಘದವರಿಗೆ ಕೊಡಲು ಒಪ್ಪಿಕೊಂಡಿರುತ್ತಾನೆ; ಮತ್ತು ಖರ್ಚಾಗಬಹುದಾದ ಎಲ್ಲಾ ವೈದ್ಯುತಶಕ್ತಿಯ ಪ್ರವಾಹದ ಹಬೆಯ, ಅಥವಾ ನೀರಿನ ಬೆಲೆಗೆ ಸಾಕಾಗುವಷ್ಟು ಹಣವನ್ನು ಠೇವಣಿ ಇಡಲು ಒಪ್ಪಿರುತ್ತಾನೆ. ರಿಯಾಯಿತಿದಾರನಾಗಲಿ, ಅವನ ಏಜೆಂಟುಗಳಾಗಲಿ, ನೌಕರರಾಗಲಿ ಯಾವ ವಿಧವಾಗಿಯೂ ವೈದ್ಯುತಶಕ್ತಿಯ, ಹಬೆಯ, ನೀರಿನ, ಜೋಡಣೆಗಳಿಗೆ ಅಥವಾ ಸ್ಥಾಪನೆಗಳಿಗೆ ಕೈಹಚ್ಚಕೂಡದು, ಮತ್ತು ಅವುಗಳಿಗೆ ಸಂಬಂಧಪಟ್ಟ ಯಾವ ಕೆಲಸವೂ ಸಂಘದವರಿಂದ ಕ್ರಮವಾಗಿ ಬರಹ ಮೂಲಕ ಅಧಿಕೃತರಾದವರಿಂದ ಶಿವಾಯಿ ಇನ್ಯಾರಿಂದಲೂ ನಡೆಯಕೂಡದು.

ಆಕಸ್ಮಿಕವಾಗಿ ನಡೆಯುವ ಸಂಭವಗಳಿಗೆ ಜವಾಬ್ದಾರಿ.

15. ಪ್ರದರ್ಶನವು ಪ್ರಾರಂಭವಾಗುವುದಕ್ಕೆ ಪೂರ್ವದಲ್ಲಿ, ಪ್ರದರ್ಶನವು ನಡೆಯುವ ಕಾಲದಲ್ಲಿ, ಅಥವಾ ಪ್ರದರ್ಶನವು ಪೂರೈಸಿದ ತರುವಾಯ, ರಿಯಾಯಿತಿದಾರನಿಂದ, ಅಥವಾ ಅವನಿಂದ ನೇಮಿಸಲ್ಪಟ್ಟ ಯಾವನಾದರೂ ಒಬ್ಬ ಮನುಷ್ಯನಿಂದ ಅಥವಾ ಯಾವುದಾದರೂ ಉಪಕರಣದಿಂದ, ಅಥವಾ ಅದರ ಜೋಡಣೆಯಿಂದ, ಸ್ಥಾಪನೆಯಿಂದ, ಉಪಯೋಗದಿಂದ ಅಥವಾ ತೆಗೆಯೋಣದರಿಂದ, ರಿಯಾಯಿತಿದಾರನಿಗೆ ಸೇರಿದ ಅಥವಾ ಅವನ ಮೇಲು ವಿಚಾರಣೆಯಲ್ಲಿರುವ ಅಥವಾ ರಿಯಾಯಿತಿಗೆ ಸಂಬಂಧಪಟ್ಟ ಯಾವುದಾದರೂ ಒಂದು ವಸ್ತುವಿನಿಂದ, ಯಾರಾದರೂ ನೋಟಕ್ಕೆ ಬಂದವನಿಗೆ ಪ್ರದರ್ಶಕನಿಗೆ, ಅಥವಾ ರಿಯಾಯಿತಿದಾರನಿಗೆ, ಅಥವಾ ಯಾರಾದರೂ ಉದ್ಯೋಗಸ್ಥನಿಗೆ, ನೌಕರನಿಗೆ, ಕೆಲಸದವನಿಗೆ, ಅಥವಾ ಪ್ರದರ್ಶನಶಾಲೆಯಲ್ಲಿ ಬಾಡಿಗೆಗೆ ಇರುವವನಿಗೆ ಅಥವಾ ಯಾವ ಮನುಷ್ಯನಿಗಾಗಲಿ ಯಾವ ವಸ್ತುವಿಗಾಗಲಿ ನಷ್ಟ ಅಥವಾ ಕೆಡಕು ಸಂಭವಿಸಿದರೆ ರಿಯಾಯಿತಿದಾರನು ಲುಕ್ಸಾನು ಕೊಡಬೇಕು, ಮತ್ತು ಸಂಘದವರು ಯಾವ ನಷ್ಟವನ್ನಾಗಲಿ ಲುಕ್ಸಾನನ್ನಾಗಲಿ ತೆರದಂತೆ ಮಾಡಬೇಕು, ಮತ್ತು ಈ ವಿಷಯವಾಗಿ ಅವರ ಮೇಲೆ ಯಾವ ಬಾಧ್ಯತೆಯಾಗಲಿ, ತಗಾದೆಯಾಗಲಿ, ಕಾರ್ಯಗಳಾಗಲಿ, ವ್ಯಾಜ್ಯಗಳಾಗಲಿ, ಖರ್ಚುಗಳಾಗಲಿ ಬಾರದಂತೆ ಮಾಡಬೇಕು.

ನಷ್ಟಕ್ಕೆ ಜವಾಬ್ದಾರಿ.

16. ಪ್ರತಿ ರಿಯಾಯಿತಿಯ ಲಾಭಾಲಾಭಗಳಿಗೂ ರಿಯಾಯಿತಿದಾರನೊಬ್ಬನೇ ಜವಾಬ್ದಾರನಾಗಿರತಕ್ಕದ್ದು; ಸಂಘದವರು ಯಾವ ಸ್ವತ್ತಿನ ರಕ್ಷಣೆಗೂ ಜವಾಬ್ದಾರರಲ್ಲ; ಯಾವ ರಿಯಾಯಿತಿದಾರನಿಗೆ ಅಥವಾ ಇತರ ಮನುಷ್ಯನಿಗೆ ಸೇರಿದ ಯಾವ ರಿಯಾಯಿತಿಗಾಗಲಿ ಇತರ ಸ್ವತ್ತಿಗಾಗಲಿ ಸಂಭವಿಸುವ ಯಾವ ನಷ್ಟಕ್ಕಾಗಲಿ ಲುಕ್ಸಾನಿಗಾಗಲಿ—ಸದರಿ ನಷ್ಟ ಯಾ ಲುಕ್ಸಾನು ಬೆಂಕಿಯಿಂದ, ಪಂಚಭೂತಗಳಿಂದ, ಕಳ್ಳತನದಿಂದ ಅಥವಾ ಇನ್ಯಾವ ಕಾರಣದಿಂದಲಾದರೂ ಸಂಭವಿಸಲಿ—ಅದು ಯಾವುದಕ್ಕೂ ಅವರು ಜವಾಬ್ದಾರರಲ್ಲ; ಮತ್ತು ರಿಯಾಯಿತಿದಾರರು ತಮ್ಮ ಸ್ವತ್ತುಗಳನ್ನು ಅಪಾಯದಿಂದ ನಷ್ಟವುಂಟಾಗದಂತೆ ವಿಮೆ ಮಾಡಬೇಕು. ಯಾವ ರಿಯಾಯಿತಿದಾರನೂ ಸಂಘದವರ ಗುತ್ತಿಗೆಯನ್ನು ಚಾಲ್ತಿ ವಿಮೆಗಳನ್ನು ಅಥವಾ ಲೈಸೆನ್ಸುಗಳನ್ನು ಗಂಡಾಂತರಕ್ಕೆ ಗುರಿಮಾಡುವಂಥಾ ಯಾವ ಕೆಲಸವನ್ನೂ ಮಾಡಕೂಡದು. ಮತ್ತು ಅವರು ಸಂಘದವರ ಫೈರ್ ಇನ್‌ಷೂರೆನ್ಸ್ ಆಫೀಸಿನಿಂದ (ಬೆಂಕಿಯಿಂದ ಉಂಟಾಗುವ ನಷ್ಟಕ್ಕೆ ಪ್ರತಿಯಾಗಿ ವಿಮೆ ಪತ್ರ ಕೊಡುವ ಆಫೀಸಿನಿಂದ) ಮತ್ತು ಸ್ಥಳೀಯ ಮತ್ತು ಇತರ ಅಧಿಕಾರಿಗಳಿಂದ ವಿಧಿಸಲ್ಪಟ್ಟದ್ದಕ್ಕೆಲ್ಲಾ ಅನುಸಾರವಾಗಿ ನಡೆಯಬೇಕು.

ಅಪಾಯಕರವಾದ ಸಾಮಾನುಗಳು.

17. ಸಂಘದವರಿಂದ ವಿಶೇಷ ಅಪ್ಪಣೆಯನ್ನು ಬರಹ ಮೂಲಕ ಮೊದಲು ಪಡೆದ ಹೊರತು, ಯಾವ ರಿಯಾಯಿತಿದಾರನೂ ಅರಕ್ಷಿತವಾದ ಬೆಳಕುಗಳನ್ನು, ಬೆಂಕಿಯನ್ನು ಅಥವಾ ಎಣ್ಣೆಯನ್ನು ಯಾವ ವಿಧದಲ್ಲಿಯೂ ಉಪಯೋಗಿಸುವುದಕ್ಕೆ ಬಿಡುವುದಿಲ್ಲ. ಅಂಥಾ ಅಪ್ಪಣೆಯನ್ನು ಯಾವಾಗ ಬೇಕಾದರೂ ವಾಪಸು ತೆಗೆದುಕೊಳ್ಳಲಾಗುವುದು. ಮದ್ದಿನಂತೆ ಹಾರುವ, ಅಸಹ್ಯಕರವಾದ, ಅಪಾಯಕರವಾದ, ಮತ್ತು ಘಟ್ಟಿಯಿಂದ ಒಡೆಯುವ ಎಲ್ಲಾ ಪದಾರ್ಥಗಳನ್ನೂ ಸರ್ವಥಾ ತರಕೂಡದು. ಪ್ರದರ್ಶನದ ಆವರಣಕ್ಕೆ ಅಥವಾ ಅದರ ಸಮೀಪಕ್ಕೆ ತರಲ್ಪಟ್ಟ ಯಾವ ವಸ್ತುವನ್ನಾಗಲಿ ಪರೀಕ್ಷಿಸುವ ಅಜಮಾಯಿಷಿ ಮಾಡುವ ಅಥವಾ ಮಾಡಿಸುವ ಹಕ್ಕನ್ನು ಸಂಘದವರು ತಮಗೇ ಉಳಿಸಿಕೊಂಡು ಇರುತ್ತಾರೆ.

ಪತ್ರಿಕೆಯವರನ್ನು ನೋಟಕ್ಕೆ ಬಿಡುವುದು.

18. ಪ್ರದರ್ಶನ ಪ್ರಾರಂಭಕ್ಕೆ ಏಳು ದಿವಸಗಳಿಗೆ ಮುಂಚೆ ಪತ್ರಿಕೆಯವರನ್ನು ನೋಟಕ್ಕೆ ಬಿಡಬೇಕೆಂದು ಉದ್ದೇಶಿಸಿರುವುದರಿಂದ, ಎಲ್ಲಾ ರಿಯಾಯಿತಿಗಳೂ ಸಿದ್ಧವಾಗಿರಬೇಕಾದುದೂ ಮತ್ತು ರಿಯಾಯಿತಿದಾರನು ತನ್ನ ಸ್ವಂತಪ್ರಯೋಜನಕ್ಕಾಗಿಯೂ ಒಟ್ಟು ಪ್ರದರ್ಶನದ ಪ್ರಯೋಜನಕ್ಕಾಗಿಯೂ ತಿಳಿವಳಿಕೆ ಕೊಡುವುದಕ್ಕೆ ಬಂದು ಇರಬೇಕಾದುದೂ ಅತ್ಯವಶ್ಯನಾಗಿದೆ.

ಭರ್ತಿಯಾಗದ ಸ್ಥಳ.

19. ಪ್ರದರ್ಶನ ಪ್ರಾರಂಭಕ್ಕೆ ಪೂರ್ವ ಮೂರು ವಾರಗಳಿಗೆ ಮುಂಚೆಯೇ ಸ್ವಾಧೀನ ಮಾಡಿ ಕೊಳ್ಳದೇ ಇರುವ ಸ್ಥಳಗಳನ್ನು; ಜಾಗಾಗಳನ್ನು ಅಥವಾ ಕಟ್ಟಡಗಳನ್ನು ಸಂಘದವರು ಬೇರೆಯವರಿಗೆ ಕೊಟ್ಟುಬಿಡಬಹುದು, ಮತ್ತು ಹಾಗೆ ಸ್ವಾಧೀನ ಮಾಡಿಕೊಳ್ಳದೇ ಹೋದ ತಪ್ಪಿಗಾಗಿ, ರಿಯಾಯಿತಿದಾರನು ಅವುಗಳನ್ನೂ ಅವುಗಳಿಗಾಗಿ ಏನಾದರೂ ಹಣ ಪಾವತಿ ಮಾಡಿದ್ದರೆ ಆ ಹಣವನ್ನೂ ಕಳಕೊಳ್ಳುವನು ; ಮತ್ತು ಅವನಿಂದ ಏನಾದರೂ ಬಾಕಿ ಬರಬೇಕಾಗಿದ್ದರೆ ಆ ಬಾಕಿಯು ಆ ಸ್ಥಳವನ್ನು ಅವನು ಸ್ವಾಧೀನ ಮಾಡಿಕೊಂಡಿದ್ದರೆ ಹೇಗೋ ಹಾಗೆ ಕೊಡತಕ್ಕದ್ದಾಗಿರುತ್ತದೆ.

ಸಾಮಾನುಗಳನ್ನು ತಗೆದುಕೊಳ್ಳೋಣ.

20. ಪ್ರದರ್ಶನವು ಜನಗಳ ನೋಟಕ್ಕೆ ತೆರೆದಿರುವ ಹೊತ್ತಿನಲ್ಲಿ ಪ್ರದರ್ಶನ ಭೂಮಿಯಲ್ಲಿ ಯಾವ ಸಾಮಾನುಗಳನ್ನೂ ಪಾವತಿ ಮಾಡಗೊಡಿಸುವುದಿಲ್ಲ, ಅಥವಾ ಯಾವ ಸಾಮಾನನ್ನೂ ಅಲ್ಲಿಂದ ಸಾಗಿಸುವುದಕ್ಕೆ ಬಿಡುವುದಿಲ್ಲ. ಮುಂಚೆ ಬಂದ ಪೆಟ್ಟಿಗೆಗಳನ್ನೆಲ್ಲಾ ಪ್ರತಿ ದಿನವೂ ಪ್ರಾತಃಕಾಲ ಪ್ರದರ್ಶನ ಪ್ರಾರಂಭಕ್ಕೆ ಮುಂಚೆ ಸಾಗಿಸಿಬಿಡಬೇಕು.

ಪ್ರದರ್ಶನ ಶಾಲೆಗೆ ಪ್ರವೇಶ.

21. ರಿಯಾಯಿತಿದಾರರಿಗೂ ನ್ಯಾಯವಾದಷ್ಟು ಪರಿವಾರದ ಜನರಿಗೂ ಪ್ರದರ್ಶನ ಶಾಲೆಗೆ ಪ್ರವೇಶಕ್ಕಾಗಿ ಇತರರಿಗೆ ವರ್ಗ ಮಾಡಕೂಡದಂಥಾ ಚೀಟಿಗಳನ್ನು ಕೊಡುತ್ತದೆ. ಅವುಗಳನ್ನು ಅವರಲ್ಲದೆ ಇತರರು ಯಾರಾದರೂ ಉಪಯೋಗಿಸಿದರೆ ಆ ತಪ್ಪಿಗಾಗಿ ಅವು ವಾಪಸು ತೆಗೆದುಕೊಳ್ಳಲ್ಪಡುವವು. ಆಮೇಲೆ ಪುನಹ ಕೊಡಲ್ಪಡುವುದಿಲ್ಲ. ಸಂಘದವರು ಆಗಿಂದಾಗ್ಗೆ ಗೊತ್ತು ಮಾಡುವ ಕಾಲಗಳಲ್ಲಿ ಮತ್ತು ಬಾಗಿಲುಗಳಲ್ಲಿ ಮಾತ್ರವೇ ಈ ಚೀಟಿಗಳ ಮೂಲಕ ಪ್ರವೇಶ ದೊರೆಯುವುದು.

ಕೆಡಕುಗಳು.

22. ಕೆಡಕು ಅಥವಾ ತೊಂದರೆ ಎಂದು ಅಥವಾ ಕೆಡಕಾಗಿ ಅಥವಾ ತೊಂದರೆಯಾಗಿ ಪರಿಣಮಿಸುವುದೆಂದು, ಸಂಘದವರಿಗೆ, ಯಾರಾದರೂ ಅವರ ಬಾಡಿಗೆದಾರರಿಗೆ, ಪ್ರದರ್ಶನವನ್ನು ನೋಡುವುದಕ್ಕೆ ಬರುವ ಜನರಿಗೆ ಅಥವಾ ನೆರೆ ಹೊರೆ ಜಾಗಾಗಳನ್ನು, ಚಪ್ರಗಳನ್ನು, ರಿಯಾಯಿತಿಗಳನ್ನು ಅಥವಾ ಸ್ವತ್ತನ್ನು ತೆಗೆದುಕೊಂಡವರಿಗೆ ನಷ್ಟವನ್ನಾಗಲಿ ತೊಂದರೆಯನ್ನಾಗಲಿ ಉಂಟು ಮಾಡುವುದೆಂದು ಸಂಘದವರು ಅಭಿಪ್ರಾಯ ಪಡುವ ಯಾವ ಕೆಲಸವನ್ನೂ ರಿಯಾಯಿತಿದಾರರು ಮಾಡಲೂಕೂಡದು ಮಾಡಗೊಡಿಸಲೂ ಕೂಡದು ; ಮತ್ತು ರಿಯಾಯಿತಿದಾರರು ಯಾವ ವಿಧವಾಗಿಯೂ ಕಾದುಕೊಂಡಿದ್ದು ಜನರನ್ನು ಬರಹೇಳಿ ಬೇಡಿಕೊಳ್ಳುವುದಿಲ್ಲವೆಂದೂ ಅಥವಾ ಅವರ ಏಜಂಟರನ್ನೂ ನಾಕರರನ್ನೂ ಹಾಗೆ ಮಾಡುವುದಕ್ಕೆ ಬಿಡುವುದಿಲ್ಲವೆಂದೂ ಇದರಿಂದ ಒಪ್ಪಿಕೊಂಡಿರುತ್ತಾರೆ. ಒಬ್ಬ ರಿಯಾಯಿತಿದಾರನು ಇನ್ನೊಬ್ಬ ರಿಯಾಯಿತಿದಾರನಿಗೆ ನಡೆಸಿದ ಕೆಲಸಗಳಿಗಾಗಲಿ ನಡತೆಗಾಗಲಿ ಸಂಘದವರು ಜವಾಬ್ದಾರರಲ್ಲ ; ಹಾಗೆಯೇ ಯಾವನಾದರೂ ರಿಯಾಯಿತಿದಾರನು ಈ ನಿಬಂಧನೆಗಳನ್ನು ಅಥವಾ ರೆಗ್ಯುಲೇಷನುಗಳನ್ನೂ ಮೀರಿ ನಡೆದರೆ ಅದರಿಂದಾಗುವ ಫಲಕ್ಕೂ ಸಂಘದವರು ಜವಾಬ್ದಾರರಲ್ಲ.

ನಾಕರರ ಹೆಸರನ್ನು ರಿಜಿಸ್ಟರ್ ಮಾಡುವುದು.

23. ರಿಯಾಯಿತಿದಾರನು ತನ್ನ ನಾಕರನ, ಪರಿವಾರದವನ ಅಥವಾ ಸಹಾಯಕನ (ಅವನ ಅಥವಾ ಅವಳ) ಹೆಸರನ್ನೂ ವಿಳಾಸವನ್ನೂ ಸಂಘದ ಕಚೇರಿಯಲ್ಲಿ ರಿಜಿಸ್ಟರ್ ಮಾಡಿಸಿದ ಹೊರತು ಮತ್ತು ಅವನು ಅಥವಾ ಅವಳು ಪ್ರದರ್ಶನದ ನಿಬಂಧನೆಗಳ ಮತ್ತು ರೆಗ್ಯುಲೇಷನುಗಳ ಮೇರೆಗೆ ನಡೆದುಕೊಳ್ಳುತ್ತೇನೆಂದು ಒಪ್ಪಿಕೊಂಡ ಹೊರತು ಅವರಲ್ಲಿ ಯಾರನ್ನೂ ಪ್ರದರ್ಶನ ಶಾಲೆಯಲ್ಲಿ ಕೆಲಸಕ್ಕೆ ಬಿಡಕೂಡದು.

ನಾಕರರ ನಡತೆ.

24. ರಿಯಾಯಿತಿದಾರನಿಂದ ನೇಮಿಸಲ್ಪಟ್ಟ ಅಥವಾ ಅವನ ನಾಕರಿಯಲ್ಲಿರುವ ಎಲ್ಲಾ ನಾಕರರೂ, ಪರಿವಾರದವರೂ, ಮತ್ತು ಇತರ ಜನರೂ ಎಲ್ಲಾ ಚೆನ್ನಾಗಿ ಉಡುಪು ಹಾಕಿಕೊಂಡಿರಬೇಕು ಮತ್ತು ಎಲ್ಲಾ ಕಾಲಗಳಲ್ಲಿಯೂ ಮರ್ಯಾದೆಯುಳ್ಳವರಾಗಿಯೂ ಯುಕ್ತವಾದ ನಡತೆಯವರಾಗಿಯೂ ಇರಬೇಕು ; ಅವರು ಜನಗಳನ್ನಾಗಲಿ ಇತರ ರಿಯಾಯಿತಿದಾರರನ್ನಾಗಲಿ ಯಾವ ವಿಧವಾಗಿಯೂ ಬೇಡಿಕೊಳ್ಳಕೂಡದು ಮತ್ತು ಅವರಿಗೆ ತೊಂದರೆ ಮಾಡಕೂಡದು ; ಹಾಗೆ ಮಾಡುವ ಯಾವ ಸಹಾಯಕನನ್ನಾಗಲಿ ಸಂಘದವರು ಪ್ರದರ್ಶನ ವಠಾರಗಳ ಹೊರಗೆ ತಳ್ಳಿಸಿ ಬಿಡಬಹುದಲ್ಲದೆ ಅವನನ್ನು ಪುನಹ ಒಳಗೆ ಬರಲು ಬಿಡುವುದಿಲ್ಲ. ಯಾವ ಮನುಷ್ಯನನ್ನಾಗಲಿ ಮನುಷ್ಯರನ್ನಾಗಲಿ ಒಳಗೆ ಬಿಡುವುದಿಲ್ಲವೆಂದು ಕಾರಣ ತಿಳಿಸದೆ ತಿರಸ್ಕರಿಸುವುದಕ್ಕೂ ಅಥವಾ ಕಾರಣ ತಿಳಿಸದೆ ಹೊರಗೆ ಕಳುಹಿಸಿ ಬಿಡುವುದಕ್ಕೂ ಹಕ್ಕನ್ನು ಸಂಘದವರೇ ಉಳಿಸಿಕೊಂಡಿರುತ್ತಾರೆ. ರಿಯಾಯಿತಿದಾರರೂ ಅವರ ಪರಿವಾರದವರೂ ಪ್ರದರ್ಶನವು ಪೂರೈಸಿದಕೂಡಲೇ ಪ್ರತಿ ದಿನ ಸಾಯಂಕಾಲದಲ್ಲಿಯೂ ಪ್ರದರ್ಶನ ವಠಾರಗಳನ್ನು ಬಿಡಬೇಕು.

ನೈರ್ಮಲ್ಯ.

25. ಎಲ್ಲಾ ರಿಯಾಯಿತಿಗಳನ್ನೂ, ಕಟ್ಟಡಗಳನ್ನೂ, ಜಾಗಗಳನ್ನೂ, ಚಪ್ರ ವಗೈರೆಗಳನ್ನೂ ಚೆನ್ನಾಗಿ ಶುಚಿ ಮಾಡಿ ಪ್ರತಿ ದಿನವೂ ಪ್ರದರ್ಶನ ಪ್ರಾರಂಭವಾಗುವ ಗಂಟೆಗೆ ಮುಂಚೆ ನೋಟಗಾರರಿಗೆ ತೆರೆದಿರಬೇಕು, ಮತ್ತು ಪ್ರದರ್ಶನವು ಜನರ ನೋಟಕ್ಕೆ ತೆರೆದಿರಬೇಕಾದ ಕಾಲದಲ್ಲೆಲ್ಲಾ ಹಾಗೆಯೇ ತೆರೆದಿರಬೇಕು ; ಸಂಘದವರಿಗೆ ತೃಪ್ತಿಯಾಗುವಂತೆ ಈ ಕೆಲಸವನ್ನು ಮಾಡದೆ ಹೋದರೆ, ಸಂಘದವರಿಗೆ ಅವಶ್ಯವಾಗಿ ಕಾಣುವುದನ್ನೆಲ್ಲಾ ರಿಯಾಯಿತಿದಾರನೊಬ್ಬನ ಜವಾಬ್ದಾರಿ ಮತ್ತು ಖರ್ಚಿನಿಂದಲೇ ಅವರು ಮಾಡಿಸುವುದಕ್ಕೆ ರಿಯಾಯಿತಿದಾರನು ಅವರಿಗೆ ಈ ಮೂಲಕ ಅಧಿಕಾರ ಕೊಡುತ್ತಾನೆ.

ಕಳೆದು ಹೋದ ಸ್ವತ್ತು.

26. ನೋಟಕ್ಕೆ ಬಂದವರು ಅಥವಾ ಇರದು ಬಿಟ್ಟು ಹೋದ, ಅಥವಾ ರಿಯಾಯಿತಿಗಳ ಅಥವಾ ಪ್ರದರ್ಶನ ಶಾಲೆಯ ಯಾವುದಾದರೂ ಒಂದು ಭಾಗದಲ್ಲಿ ರಿಯಾಯಿತಿದಾರರ ನೌಕರರಿಗೆ ಯಾರಿಗಾದರೂ ಸಿಕ್ಕಿದ ಎಲ್ಲಾ ಪದಾರ್ಥಗಳನ್ನೂ ಇಡಿಸುವುದಕ್ಕಾಗಿ ಸಂಘದವರು ಆಗಾಗ್ಗೆ ನೇಮಿಸುವಂಥಾ ಕಚೇರಿಗಳಲ್ಲಿ ಅಥವಾ ಸ್ಥಳಗಳಲ್ಲಿ ಕೂಡಲೇ ಇಡಿಸುವಂತೆ ರಿಯಾಯಿತಿದಾರರು ಮಾಡಿಸಬೇಕು.

ಪ್ರವೇಶಕ್ಕೆ ಹಕ್ಕು.

27. ಸಂಘದವರಿಗಾಗಲಿ ಅಥವಾ ಅವರು ನೇಮಿಸಿದ ಮನುಷ್ಯ, ಅಥವಾ ಮನುಷ್ಯರಿಗಾಗಲಿ, ರಿಯಾಯಿತಿದಾರನಿಗೆ ಕೊಟ್ಟ ಸ್ಥಳ, ಜಾಗ, ಅಥವಾ ಕಟ್ಟಡದ ಯಾವ ಭಾಗಕ್ಕಾಗಲಿ ಅಥವಾ ಅದರ ಲ್ಲಿಯಾಗಲಿ ಸಲೀಸಾಗಿ ಎಲ್ಲಾ ಕಾಲದಲ್ಲಿಯೂ ಹೋಗಿ ಬರುವುದಕ್ಕೆ ಹಕ್ಕು ಇರತಕ್ಕದ್ದು.

ಪ್ರಸಿದ್ಧ ಪತ್ರಿಕೆಗಳು.

28. ಬರಹ ಮೂಲಕವಾದ ವಿಶೇಷ ಅಪ್ಪಣೆಯನ್ನು ಸಂಘದವರಿಂದ ಮೊದಲೇ ಪಡೆದಿದ್ದ ಹೊರತು ಯಾವ ತರಹದ ಪ್ರಸಿದ್ಧ ಪತ್ರಿಕೆಗಳನ್ನೂ ರಿಯಾಯಿತಿಯಿಂದ ಹೊರಗೆ ಕೊಡಕೂಡದು, ಮತ್ತು ಅಂಥಾ ವಿಶೇಷ ಅಪ್ಪಣೆಯು ಕೇವಲ ಸಂಘದವರ ಯುಕ್ತಾನುಸಾರವಾಗಿಯೇ ತಡೆದಿಡಲ್ಪಡಬಹುದು ಅಥವಾ ವಾಪಸು ತೆಗೆದುಕೊಳ್ಳಲ್ಪಡಬಹುದು.

ಸಾಮಾನುಗಳ ಮಾರಾಟ.

29. ಸಂಘದವರ ಬರಹಮೂಲಕವಾದ ಅಪ್ಪಣೆಯನ್ನು ಸಾಮಾನುಗಳ ಮಾರಾಟಕ್ಕೆ ಮೊದಲು ತೆಗೆದುಕೊಂಡು ತಕ್ಕ ಫೀಜನ್ನು ಪಾವತಿ ಮಾಡಿದ ಹೊರತು ಯಾವ ರಿಯಾಯಿತಿದಾರನೂ ತಾನು ಇರುವ ಜಾಗದಲ್ಲಿ, ಕಟ್ಟಡದಲ್ಲಿ ಅಥವಾ ಅದರ ಭಾಗದಲ್ಲಿ, ಅಥವಾ ಜಾಗದಿಂದ, ಕಟ್ಟಡದಿಂದ ಅಥವಾ ಅದರ ಭಾಗದಿಂದ ಯಾವ ಸಾಮಾನನ್ನೂ ಮಾರುವಂತೆ ಮಾಡಕೂಡದು ಅಥವಾ ಮಾರುವುದಕ್ಕೆ ಬಿಡಕೂಡದು; ಅಂಥಾ ಅಪ್ಪಣೆಯನ್ನು ಸಂಘದವರು ಕೊಡದೆ ತಡೆದಿಡಬಹುದು ಅಥವಾ ಕೊಡದೆ ಬಿಡಬಹುದು, ಅಥವಾ ಒಂದುವೇಳೆ ಕೊಟ್ಟಿದ್ದರೆ, ಅದನ್ನು ಸಂಘದವರು ಯಾವಾಗ ಬೇಕಾದರೂ ಯಾವ ಕಾರಣವನ್ನೂ ಹೇಳದೆ ವಾಪಸು ತೆಗೆದುಕೊಳ್ಳಬಹುದು.

ವಿಶೇಷ ಬಾಡಿಗೆ.

30. ಪ್ರದರ್ಶನ ಕಟ್ಟಡಗಳ ಅಥವಾ ಪ್ರದರ್ಶನ ಭೂಮಿಯ ಯಾವ ಭಾಗ ಅಥವಾ ಭಾಗಗಳಿಗಾಗಲಿ ಆವರಣ ಹಾಕುವುದಕ್ಕೂ, ಮತ್ತು ಪ್ರದರ್ಶನವನ್ನು ಜನರಿಗೆ ತೆರೆದಿರುವ ಕಾಲದಲ್ಲಿ ಆ ಭಾಗವನ್ನು ಮುಚ್ಚಿಬಿಡುವುದಕ್ಕಾಗಲಿ ಅಥವಾ ಅದರಲ್ಲಿ ಪ್ರವೇಶಕ್ಕೆ ವಿಶೇಷ ಬಾಡಿಗೆಯನ್ನು ಗೊತ್ತು ಮಾಡುವುದಕ್ಕಾಗಲಿ ಹಕ್ಕನ್ನು ಸಂಘದವರು ತಮಗೆ ಇಟ್ಟುಕೊಂಡಿರುತ್ತಾರೆ; ಸಂಘದವರು ಹಾಗೆ ಮಾಡಿದುದಕ್ಕಾಗಿ ಅವರಿಂದ ಯಾವ ಪ್ರತಿಫಲವಾಗಲಿ, (ಅಲೋಯನ್ಸ್) ಮೊಬಲಗಾಗಲಿ ಅಥವಾ ಲುಕ್ಸಾನಾಗಲಿ ಬರಬೇಕೆಂದು ಕೇಳಲೂ ಯಾವ ರಿಯಾಯಿತಿದಾರನಿಗೂ ಹಕ್ಕು ಇರುವುದಿಲ್ಲ.

ಅಪ್ಪಣೆ ಇಲ್ಲದೆ ಯಾವುದನ್ನೂ ಸಾಗಿಸಕೂಡದು.

31. ಬರಹ ಮೂಲಕವಾದ ಒಪ್ಪಿಗೆಯನ್ನು ಸಂಘದವರಿಂದ ಮೊದಲು ಪಡೆದ ಹೊರತು, ಕಟ್ಟಡದ ಅಥವಾ ರಿಯಾಯಿತಿಯ ಯಾವ ಭಾಗ ಅಥವಾ ಭಾಗಗಳನ್ನೂ ಕೆಡವಕೂಡದು ಅಥವಾ ಬದಲಾಯಿಸಕೂಡದು, ಅಥವಾ ಅದರ ಯಾವ ಭಾಗವನ್ನೂ ಸಾಗಿಸಕೂಡದು.

ಸಾಮಾನುಗಳನ್ನು ಸಾಗಿಸೋಣ.

32. ರಿಯಾಯಿತಿದಾರರು ಸಂಘದವರೊಡನೆ ಮಾಡಿಕೊಂಡ ಒಪ್ಪಂದವು ಮುಗಿದ ಕೂಡಲೇ ಅಥವಾ ಪ್ರದರ್ಶನವು ಮೊದಲು ಮುಗಿದರೆ ಅದು ಮುಗಿದ ಕೂಡಲೇ ರಿಯಾಯಿತಿದಾರರು ಅವರು ನಿಲ್ಲಿಸಿಕೊಂಡದ್ದನ್ನು, ಜೋಡಿಸಿಕೊಂಡದ್ದನ್ನು, ಅಲಂಕಾರಗಳನ್ನೂ ಮತ್ತು ಎಲ್ಲಾ ತರಹದ ಸಾಮಾನುಗಳನ್ನೂ ಪ್ರದರ್ಶನ ಶಾಲೆಯಿಂದ ಸಾಗಿಸಬೇಕು, ಮತ್ತು ಅವರಿಂದ ನಷ್ಟವೇನಾದರೂ ಆಗಿದ್ದರೆ ಅದಕ್ಕೆ ಭರ್ತಿ ಮಾಡಬೇಕು, ವೈದ್ಯುತಶಕ್ತಿ, ಹಬೆ ಮತ್ತು ನೀರಿಗಾಗಿ ತಗಲಿರುವ ಖರ್ಚನ್ನೆಲ್ಲಾ ಕೊಟ್ಟುಬಿಡಬೇಕು; ಅಥವಾ ರಿಯಾಯಿತಿದಾರನಿಂದ ನಡೆದಿರುವ ನಷ್ಟವನ್ನು ಅವನ ಯಾವ ಸಾಮಾನನ್ನೂ ಪ್ರದರ್ಶನ ಶಾಲೆಯಿಂದ ಸಾಗಿಸುವುದಕ್ಕೆ ಪೂರ್ವವೇ ಕೊಡತಕ್ಕದ್ದು. ಒಡಂಬಡಿಕೆಯು ಮುಗಿದ ನಂತರ ಹದಿನಾಲ್ಕು ದಿನಗಳೊಳಗಾಗಿ ಅಥವಾ ಸಂಘದವರು ಬರಹ ಮೂಲಕ ಕೊಡುವ ಇತರ ಕಾಲದ ಒಳಗೆ ಸಾಗಿಸಲ್ಪಡದೆ ಇರುವ ಸಾಮಾನುಗಳು ಪೆಟ್ಟಿಗೆಗಳು ವಗೈರೆಯನ್ನು ರಿಯಾಯಿತಿದಾರರ ಖರ್ಚು ಮತ್ತು ಜವಾಬ್ದಾರಿಯ ಮೇಲೆ ಸಾಗಿಸಿ ಒಂದು ಸ್ಥಳದಲ್ಲಿ ಇಡಿಸಲಾಗುವುದು; ಅಥವಾ ಸಂಘದವರು ತಮ್ಮ ಯುಕ್ತಾನುಸಾರವಾಗಿ ಅವುಗಳನ್ನು ಹರಾಜಿನ ಮೂಲಕ ಅಥವಾ ಇತರ ವಿಧವಾಗಿ ಮಾರಾಟ ಮಾಡಿ ಬಂದ ಮೊಬಲಗನ್ನೂ ಅವರು ಮಾಡಿದ ಖರ್ಚಿಗಾಗಿ ಉಪಯೋಗಿಸಿಕೊಳ್ಳಬಹುದು.

ದೇಣಿಗೆ ಹಂಗು.

33. ಸಾಮಾನುಗಳು ಸಹಕಾರಿ ವಸ್ತುಗಳು ವಗೈರೆಗಳೆಲ್ಲಾ ಸಂಘದವರಿಗೆ ರಿಯಾಯಿತಿದಾರರಿಂದ ಸಲ್ಲಬೇಕಾಗಿರಬಹುದಾದ ಎಲ್ಲಾ ಮೊಬಲಗಿನ ಹಂಗಿಗೂ ಒಳಪಟ್ಟವುಗಳಾಗಿರತಕ್ಕದ್ದು; ಸಾಗಿಸುವುದಕ್ಕೋಸ್ಕರ ಸಂಘದವರಿಂದ ಬರಹ ಮೂಲಕವಾಗಿ ಅಪ್ಪಣೆಯನ್ನು ಪಡೆಯುವವರೆಗೆ ಯಾವ ಸಾಮಾನುಗಳನ್ನೂ ಪ್ರದರ್ಶನದಿಂದ ಸಾಗಿಸುವುದಕ್ಕೆ ಬಿಡುವುದಿಲ್ಲ.

ತಸ್ವೀರುಗಳು.

34. ಸಂಘದವರಿಂದ ಅಧಿಕಾರ ಪಡೆದ ಏಜಂಟುಗಳು ಹೊರತು ಇನ್ಯಾರೂ ಸಂಘದವರ ಬರಹ ಮೂಲಕವಾದ ವಿಶೇಷ ಅಪ್ಪಣೆ ಇಲ್ಲದೆ, ಯಾವ ರಿಯಾಯಿತಿಯನ್ನಾಗಲಿ ಅದರ ಭಾಗವನ್ನಾಗಲಿ ತಸ್ವೀರು ತೆಗೆಯಕೂಡದು. ಚಿತ್ರ ಬರೆಯಕೂಡದು ನಕಲು ಮಾಡಕೂಡದು ಅಥವಾ ಯಾವ ರೀತಿಯಲ್ಲಿಯೂ ಅದರ ಪ್ರತಿಯನ್ನು ತಯಾರುಮಾಡಕೂಡದು.

35. ಕ್ಯಾಟಲಾಗ್ಸ್ ಯಾ ಪಟ್ಟಿಗಳನ್ನೂ ಗೈಡ್ಸ್ ಯಾ ಮಾರ್ಗದರ್ಶಕ ಪತ್ರಗಳನ್ನೂ ಪ್ರೋಗ್ರ್ಯಾಮ್ಸ್ ಯಾ ಸೂಚಕ ಪತ್ರಗಳನ್ನೂ ಸೂವಿನೀರ್ಸ್ ಯಾ ನೆನಪಿನ ಪತ್ರಗಳನ್ನೂ ಮತ್ತು ಇತರ ಪ್ರಕಟಿಸಲ್ಪಟ್ಟ ಪುಸ್ತಕಗಳನ್ನೂ ಸಂಗ್ರಹಿಸಿ ಬರೆಯುವ, ರಚಿಸುವ ಮತ್ತು ಪ್ರಕಟಿಸುವ ಸಂಪೂರ್ಣ ಹಕ್ಕನ್ನು ಸಂಘದವರೇ ಉಳಿಸಿಕೊಂಡಿರುತ್ತಾರೆ, ಮತ್ತು ರಿಯಾಯಿತಿ ದಾರರು ಅಪೇಕ್ಷಿಸುವ ಯಾವ ಪ್ರಕಟನೆಯನ್ನಾಗಲಿ ಪ್ರಸಿದ್ಧ ಪತ್ರಿಕೆಯನ್ನಾಗಲಿ ಸಂಘದವರ ಮೂಲಕ ಅಥವಾ ಅವರಿಂದ ಅಧಿಕೃತರಾದ ಪ್ರಸಿದ್ಧಿ ಕರ್ತರ ಮೂಲಕವಾಗಿ ಮಾತ್ರವೇ ಮತ್ತು ಗೊತ್ತು ಮಾಡಲ್ಪಟ್ಟ ಧರಗಳಲ್ಲಿ ಮಾತ್ರವೇ ಮಾಡತಕ್ಕದ್ದು.

ಕ್ಯಾಟಲಾಗ್ಸ್ ಯಾ ಪಟ್ಟಿಗಳು ಮತ್ತು ಮಾರ್ಗದರ್ಶಕ ಪತ್ರಗಳು.

36. ರಿಯಾಯಿತಿದಾರರಾಗುವ ಎಲ್ಲಾ ಜನರೂ ಫರ್ಮ್ಸ್ ಯಾ ಭಾರಿ ಅಂಗಡಿ ಯಾವರೂ, ಈ ರೆಗ್ಯುಲೇಷನುಗಳಿಗೂ ಮತ್ತು ಪ್ರದರ್ಶನವನ್ನು ಚೆನ್ನಾಗಿ ನಡೆಸುವುದಕ್ಕೆ ಸಂಘದವರಿಗೆ ಆಗಾಗ್ಗ ಅವಶ್ಯವೆಂದು ತೋರುವಂಥಾ ರೆಗ್ಯುಲೇಷನುಗಳು, ಹೆಚ್ಚು ನಿಬಂಧನೆಗಳು ಅಥವಾ ಬದಲಾವಣೆಗಳಿಗೆ ತಾವು ಒಪ್ಪಿದ್ದಾರೆಂದು, ಅವರು ರಿಯಾಯಿತಿದಾರರಾಗುವುದರ ಮೂಲಕ ಪ್ರಕಟಿಸುತ್ತಾರೆ.

ಆ ಮುಂದಿನ ನಿಬಂಧನೆಗಳು.

37. ಯಾವ ಕಾಲದಲ್ಲಿಯಾದರೂ ಮುಗಿಯುವ ಒಂದು ವಾರದ ನೋಟೀಸನ್ನು ರಿಯಾಯಿತಿದಾರನಿಗೆ ಕೊಟ್ಟು ಅಥವಾ ಅವನಿಗಾಗಿ ಉಪಯೋಗಿಸಲ್ಪಟ್ಟ ಜಾಗಾದಲ್ಲಿ ಅಥವಾ ಜಾಗಾದ ಮೇಲೆ ಆ ನೋಟೀಸನ್ನು ಬಿಟ್ಟು, ಯಾವ ಕಾಲದಲ್ಲಿಯಾದರೂ ಸಂಘದವರು ಒಡಂಬಡಿಕೆಯನ್ನು ಮುಕ್ತಾಯ ಮಾಡಬಹುದು; ಮತ್ತು ರಿಯಾಯತಿದಾರನಿಗೆ ಅದಕ್ಕೆ ಸಂಬಂಧಪಟ್ಟ ಯಾವ ಪ್ರತಿಫಲಕ್ಕೂ ಹಕ್ಕು ಇರುವುದಿಲ್ಲ, ಜನರಿಂದ ನೋಡಲ್ಪಡುವುದಕ್ಕೆ ಅನುಚಿತವಾದ, ದುರ್ಮಾರ್ಗದ, ಅಥವಾ ಅಯೋಗ್ಯವಾದ, ಅಥವಾ ಲಂಡನ್ ಕೌಂಟಿ ಕೌನ್ಸಿಲಿನ ಅಥವಾ ಇತರ ಅಧಿಕಾರಿಗಳ ರೆಗ್ಯುಲೇಷನುಗಳಿಗೆ ವಿರೋಧವಾಗಿರಬಹುದಾದ, ಅಥವಾ ಸಂಘದ ಲೈಸೆನ್ಸಿಗೆ ಅಥವಾ ವಿಮೆಗಳಿಗೆ ನಷ್ಟಕರವಾಗಿರಬಹುದಾದ, ಅಥವಾ ನೋಡುವುದಕ್ಕೆ ಬಂದವರಿಗೆ ಅಥವಾ ನೆರೆಹೊರೆಯವರಿಗೆ ತೊಂದರೆಯಾಗಿರಬಹುದಾದ ಅಥವಾ ತೊಂದರೆಯನ್ನುಂಟುಮಾಡಬಹುದಾದ, ಅಥವಾ ಅಪಾಂತರವನ್ನುಂಟು ಮಾಡುವಂಥಾ ಅಥವಾ ಉಂಟು ಮಾಡುವುದಕ್ಕೆ ತಕ್ಕ ಹಾಗಿರುವ ಯಾವುದಾದರೂ ಕೆಲಸವನ್ನು ತಾನೇ ಆಗಲಿ ತನ್ನ ನಾಕರರು ಸೇವಕರು ವಗೈರೆಯವರು ಮಾಡುವುದರಿಂದ ಅಥವಾ ಸಂಘದವರೊಡನೆ ತಾನು ಮಾಡಿಕೊಂಡಿರುವ ಒಡಂಬಡಿಕೆಗೆ ಅಥವಾ ಈ ನಿಬಂಧನೆಗಳಿಗೂ ರೆಗ್ಯುಲೇಷನುಗಳಿಗೂ ತಪ್ಪಿ ನಡೆಯುವುದರಿಂದ, ಅಥವಾ ಬೆಂಕಿಯು ಅಥವಾ ಯುದ್ಧದ ದೆಶೆಯಿಂದ ಕರಾರು ಅವನ ಮೂಲಕ ನಿಂತುಹೋಗುವ ಸಂದರ್ಭದಲ್ಲಿ ಸಂಘದವರು ಯಾವ ಮೊಬಲಗನ್ನೂ ವಾಪಸು ಕೊಡತಕ್ಕದ್ದಿಲ್ಲ, ಯಾವ ಪರಿಹಾರ ದ್ರವ್ಯವನ್ನು ಕೊಡಬೇಕಾದುದಿಲ್ಲ; ಅಥವಾ ರಿಯಾಯಿತಿದಾರನಿಗೆ ಯಾವ ಹಣವನ್ನು ಕೇಳುವುದಕ್ಕೂ ಹಕ್ಕು ಇರುವುದಿಲ್ಲ. ಅಥವಾ ಅವನು ಕೊ[illegible] ಯಾವ ಹಣವನ್ನೂ ವಾಪಸು ಕೊಡತಕ್ಕದ್ದಿಲ್ಲ. ಸಂಘದವರು ಕೊಟ್ಟ ಯಾವ ಅಪ್ಪಣೆಯನ್ನಾಗಲಿ ಅನುಮತಿಯನ್ನಾಗಲಿ ಯಾವಾಗ ಬೇಕಾದರೂ ಯಾವ ಕಾರಣವನ್ನೂ ತೋರಿಸದೆ ಅವರು ರದ್ದು ಮಾಡಬಹುದು ಅಥವಾ ವಾಪಸು ತೆಗೆದುಕೊಳ್ಳಬಹುದು,

ಒಡಂಬಡಿಕೆಯ ಅಖೈರಾಗೋಣ.

38. ಈ ಒಡಂಬಡಿಕೆಯು ಮುಗಿದ ಮೇಲೆ ರಿಯಾಯಿತಿದಾರನು ಆ ಜಾಗಾದಿಂದ ಕಟ್ಟಡದಿಂದ ಅಥವಾ ಅದರ ಭಾಗದಿಂದ ಕೂಡಲೇ ಹೊರಟು ಹೋಗಬೇಕು, ಮತ್ತು ರಿಯಾಯಿತಿಯನ್ನು ಮತ್ತು ಅದಕ್ಕೆ ಸಂಬಂಧಪಟ್ಟ ರಿಯಾಯಿತಿದಾರನಿಗೆ ಸೇರಿದ ಪ್ರತಿ ಒಂದು ವಸ್ತುವನ್ನು ಅಲ್ಲಿಂದ ತೆಗೆದುಕೊಂಡು ಹೋಗಬೇಕು; ಹಾಗೆ ಮಾಡದೇ ಹೋದರೆ ಸಂಘದವರು ಪುನಹ ಪ್ರವೇಶಿಸಿ ಅಂಥಾ ಸಾಮಾನುಗಳನ್ನು ಅವರೇ ಆಗಲಿ ಅವರ ಕಡೆ ಪಾರುಪತ್ಯಗಾರರಾಗಲಿ ರಿಯಾಯಿತಿದಾರನ ಖರ್ಚು ಮತ್ತು ಜವಾಬ್ದಾರಿಯಿಂದ ಸಾಗಿಸುವರು.

ಮುಗಿದ ನಂತರ ಸ್ಥಳ ಬಿಡುವುದು.

39. ರಿಯಾಯಿತಿದಾರನು ದಿವಾಳಿಯ ಕೆಲಸವನ್ನೇನಾದರೂ ಮಾಡಿದರೆ, ಸಂಘದವರು ಕರಾರನ್ನು ಮುಗಿಸುವುದಕ್ಕೆ ಅಪೇಕ್ಷೆ ಪಟ್ಟಲ್ಲಿ ಕರಾರು ಮುಗಿಸಲ್ಪಡುವುದು, ಮತ್ತು ರಿಯಾಯಿತಿದಾರನಿಂದ ಕರಾರಿನ ಮೇರೆಗೆ ಬರಬೇಕಾದ ಮತ್ತು ಬಂದ ಹಣವೆಲ್ಲಾ ದಂಡವಾಗಿ ಸಂಘಕ್ಕೆ ಸೇರಿಸಿಕೊಳ್ಳಲ್ಪಟ್ಟು ಸಂಪೂರ್ಣವಾಗಿ ಸಂಘದ ಸ್ವತ್ತಾಗುವುದು.

ದಿವಾಳಿಯಾಗೋಣ.

40. ಈ ನಿಬಂಧನೆಗಳಲ್ಲಿ ಯಾವುದನ್ನಾದರೂ ಬದಲಾಯಿಸುವ, ತಿದ್ದುವ, ಅವುಗಳಿಗೆ ಸೇರಿಸುವ ಅಥವಾ ಅವುಗಳನ್ನು ರದ್ದುಮಾಡುವ ಮತ್ತು ಒಂದೊಂದು ಸಂದರ್ಭದಲ್ಲಿ ಅವುಗಳನ್ನೂ ಬಿಟ್ಟುಬಿಡುವ ಅಥವಾ ಅವುಗಳನ್ನು ಸಡಿಲ ಬಿಡುವ ಹಕ್ಕು ಸಂಘದವರಿಗೆ ಉಳಿಸಿಕೊಳ್ಳಲ್ಪಟ್ಟಿದೆ.

ನಿಬಂಧನೆಗಳ ತಿದ್ದುಪಾಟಿಗೆ ಹಕ್ಕು.

41. ಈ ನಿಬಂಧನೆಗಳಲ್ಲಿ ನಿಯಮ ಮಾಡದೆ ಇರುವ ಯಾವ ವಿಷಯದಲ್ಲಾಗಲಿ ಅಥವಾ ರಿಯಾಯಿತಿದಾರನಿಗೂ ಮತ್ತು ಪ್ರದರ್ಶನಶಾಲೆಯಲ್ಲಿರುವ ಅವನ ನೆರೆಹೊರೆಯವನಿಗೂ ಆಗಲಿ ಯಾವುದಾದರೂ ವಿವಾದ ಅಥವಾ ವ್ಯಾಜ್ಯ ಉಂಟಾದರೆ ಅಂಥಾ ವಿವಾದಗಳನ್ನು ಅಥವಾ ವ್ಯಾಜ್ಯಗಳನ್ನು ತೀರಿಸುವುದಕ್ಕೆ ಹಕ್ಕನ್ನು ಸಂಘದವರು ತಮಗೇ ಇಟ್ಟುಕೊಂಡಿರುತ್ತಾರೆ. ಮತ್ತು ಅವರು ಕೊಡುವ ತೀರ್ಮಾನಕ್ಕೆ ತಾವು ಬದ್ಧರಾಗಿದ್ದೇವೆನುತಲೂ ಅದೇ ಅಖೈರಾಗಿರುವುದೆನುತಲೂ ರಿಯಾಯಿತಿದಾರರು ಈ ಮೂಲಕ ಒಪ್ಪಿಕೊಂಡಿರುತ್ತಾರೆ.

ನಿಯಮ ಮಾಡದೆ ಇರುವ ವ್ಯಾಜ್ಯಗಳು.

ಪಂಚಾಯಿತಿ.

42. ರಿಯಾಯಿತಿಗಳ ಅಥವಾ ಈ ದಸ್ತಾವೇಜುಗಳ ಅಥವಾ ಇವುಗಳಲ್ಲಿರುವ ಯಾವದಾದರೂ ವಾಕ್ಯದ ಅಥವಾ ವಿಷಯದ ಬಿಕ್ಕಣೆ, ಅರ್ಥ ಅಥವಾ ಫಲದ ವಿಷಯವಾಗಿ ಅಥವಾ, ವಹಾರಗಳ ವಿಷಯದಲ್ಲಿ ಸಂಘದವರೊಡನೆ ರಿಯಾಯಿತಿದಾರರು ಮಾಡಿಕೊಳ್ಳುವ ಯಾವುದಾದರೂ ಒಡಂಬಡಿಕೆಯ ಮೇರೆಗೆ, ಈ ದಸ್ತಾವೇಜುಗಳ ಅಥವಾ ಇನ್ಯಾವದರ ಮೇರೆಗಾದರೂ ಆ ಕಕ್ಷಿಗಾರರಿಗೆ ಇರುವ ಹಕ್ಕುಗಳು ಅಥವಾ ಹಂಗುಗಳ ವಿಷಯವಾಗಿ ಸಂಘದವರಿಗೂ ರಿಯಾಯಿತಿದಾರನಿಗೂ ಯಾವಾಗಲಾದರೂ ಯಾವುದಾದರೂ ವ್ಯಾಜ್ಯ, ಸಂದೇಹ, ಅಥವಾ ವಿವಾದವು ಹುಟ್ಟಿದರೆ, ಆಗ್ಗೆ ಅಂಥಾ ಪ್ರತಿ ವ್ಯಾಜ್ಯವೂ, ಸಂದೇಹವೂ, ಅಥವಾ ವಿವಾದವೂ ನಿಷ್ಪಕ್ಷಪಾತಿಗಳಾದ ಇಬ್ಬರ ಪಂಚಾಯಿತಿಗೆ ಹಾಕಲ್ಪಡಬೇಕು; ಆ ಇಬ್ಬರ ಪೈಕಿ ಒಬ್ಬನನ್ನು ಸಂಘದವರೂ ಇನ್ನೊಬ್ಬನನ್ನು ರಿಯಾಯಿತಿದಾರನೂ ಮೊಕರರ್ಮಾಡತಕ್ಕದ್ದು, ಅಥವಾ ಹಾಕಲ್ಪಟ್ಟ ಕೆಲಸವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಪಂಚಾಯಿತರು ಬರಹ ಮೂಲಕವಾಗಿಯಾಗಲಿ ಅಥವಾ ಇತರ ನ್ಯಾಯವಾದ ವಿಧಾನದಿಂದಾಗಲಿ ಒಬ್ಬ ಮಧ್ಯಸ್ಥನನ್ನು ನೇಮಿಸಬೇಕು; ಸದರಿ ಪಂಚಾಯಿತರ ಅಥವಾ ಮಧ್ಯಸ್ಥನ ಫೈಸಲು ಅಥವಾ ತೀರ್ಪು ಅಖೈರಾಗಿರತಕ್ಕದ್ದು ಮತ್ತು ಅದಕ್ಕೆ ಉಭಯಕಕ್ಷಿಯವರೂ ಬದ್ಧರಾಗಿರಬೇಕು; ಮತ್ತು ಈ ದಸ್ತಾವೇಜುಗಳು 1889ನೆ ಇಸವಿಯ ಆರ್ಬಿಟ್ರೇಷನ್ ಆಕ್ಟಿನೊಳಗಣ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಅಥವಾ ಪುನಃ ಕಾನೂನಾಗಿ ಅದರಲ್ಲಿ ಜಾರೀಗೆ ತರಲ್ಪಟ್ಟದ್ದರ ಕಾಯಿದೆಯ ಸಂಬಂಧವಾದ ಯಾವುದಾದರೂ ಬದಲಾವಣೆಯೊಳಗಣ ಪಂಚಾಯಿತಿಗೆ ಒಳಪಟ್ಟಂತೆ ಭಾವಿಸಲ್ಪಡುವವು.

ಹೆಸರುಗಳು.

43. ಮೇಲೆ ಹೇಳಿದ ನಿಬಂಧನೆಗಳಲ್ಲಿಯೂ ರೆಗ್ಯುಲೇಷನುಗಳಲ್ಲಿ ಸಂಘವೆಂಬ ಶಬ್ದಕ್ಕೆ ಸನ್ನದು ಕೊಡಲ್ಪಟ್ಟ ಫ್ರ್ಯಾಂಕೊ ಬ್ರಿಟಿಷ್ ಪ್ರದರ್ಶನದ ಕಾರ್ಯನಿರ್ವಾಹಕ ಸಭೆ ಎಂದು ಅರ್ಥವಾಗತಕ್ಕದ್ದು; ಪ್ರದರ್ಶನವೆಂದರೆ ಪಶ್ಚಿಮ ಲಂಡನಿನಲ್ಲಿ ಷೆಫರ್ಡ್ಸ್‌ಬುಷ್ ಎಂಬ ಸ್ಥಳದಲ್ಲಿ ನಡೆಯುವ ಫ್ರ್ಯಾಂಕೊ ಬ್ರಿಟಿಷ್ ಪ್ರದರ್ಶನವೆಂದರ್ಥವಾಗತಕ್ಕದ್ದು; ರಿಯಾಯಿತಿದಾರ ಎಂದರೆ ಈ ನಿಬಂಧನೆಗಳ ಕೆಳಭಾಗದಲ್ಲಿ ರುಜು ಹಾಕಿರುವ ಭಾರಿ ಅಂಗಡಿ, ಕಂಪನಿ ಮತ್ತು ಮನುಷ್ಯ ಅಥವಾ ಮನುಷ್ಯರೆಂದರ್ಥವಾಗತಕ್ಕದ್ದು; ರಿಯಾಯಿತಿಯೆಂದರೆ ಸಂಘದವರೊಡನೆ ಮಾಡಿಕೊಳ್ಳುವ ಕರಾರಿನಲ್ಲಿ ಕಾಣಿಸಿದಂತೆ ರಿಯಾಯಿತಿದಾರನಿಗೆ ಸೇರಿದ ಆಕರ್ಷಕವಸ್ತು, ವಿನೋದ ಅಥವಾ ನೋಟ; ಜಾಗವೆಂದರೆ, ಸದರಿ ಕಕ್ಷಿಯವರು ಮಾಡಿಕೊಳ್ಳುವ ಕರಾರಿನ ಮೇರೆಗೆ ಸಂಘದವರು ರಿಯಾಯಿತಿದಾರನಿಗೆ ಅವನ ರಿಯಾಯಿತಿಗಾಗಿ ಕೊಟ್ಟಿರುವ ಕಟ್ಟಡ, ಅಥವಾ ಅದರ ಭಾಗ, ಅಥವಾ ಯಾವುದಾದರೂ ಸ್ಥಳವೆಂದರ್ಥವಾಗತಕ್ಕದ್ದು.

ನಾನು/ನಾವು ಹಿಂದೆ ಹೇಳಿದ ನಿಬಂಧನೆಗಳನ್ನೂ ರೆಗ್ಯುಲೇಷನುಗಳನ್ನೂ ಓದಿಕೊಂಡಿದ್ದೇನೆ/ದ್ದೇವೆ ಮತ್ತು ಅವುಗಳನ್ನು ಸಮ್ಮತಿಸಿ ಒಪ್ಪಿಕೊಂಡಿರುತ್ತೇನೆ/ತ್ತೇವೆ.

ರಿಯಾಯಿತಿದಾರನ ರುಜು ______________________

ತಾರೀಖು ____________ ನೆ ____________ 190

ಪ್ರದರ್ಶನ ವಸ್ತುಗಳ ಸಾಮಾನ್ಯವಾದ ತರಗತಿ ವಿಭಾಗ.

1ನೆ ಗುಂಪು ವಿದ್ಯಾಭ್ಯಾಸ.

ತರಗತಿ 1. ಪ್ರಾಥಮಿಕ ಶಿಕ್ಷಣದ, ಮೇಲಿನ ಶಿಕ್ಷಣದ ಮತ್ತು ಮುಂದಿನ ಪಾಠಶಾಲೆಗಳು. ಅಂಗಹೀನರ ವಿದ್ಯಾಭ್ಯಾಸ.

,, 2. ಸಹಾಯಕ ವಿದ್ಯಾಭ್ಯಾಗ.

,, 3. ಪ್ರೌಢ ಮತ್ತು ಸರ್ವಕಲಾಪರೀಕ್ಷೆಗೆ ಸಂಬಂಧಪಟ್ಟ ವಿದ್ಯಾಭ್ಯಾಸ.

,, 4. ಆಯಾಯ ಕಸಬಿಗೆ ಸಂಬಂಧಪಟ್ಟ ವಿದ್ಯಾಭ್ಯಾಸ; ಕೈಗಾರಿಕೆಗೆ ಮತ್ತು ವ್ಯಾಪಾರಕ್ಕೆ ಸಂಬಂಧಪಟ್ಟದ್ದು.

,, 5. ಸಂಗೀತವೂ ಸೇರಿದ ಕುಶಲವಿದ್ಯೆಗಳ ವಿಶೇಷಬೋಧೆ.

,, 6. ವ್ಯವಸಾಯ ವಿದ್ಯಾಭ್ಯಾಸ.

2ನೆ ಗುಂಪು—ಕುಶಲ ವಿದ್ಯೆಗಳು.

ತರಗತಿ 7. ಬಣ್ಣ ಬರೆಯುವುದು, ಹಾಸ್ಯೋತ್ಪಾದಕ ಚಿತ್ರಗಳನ್ನು ಬರೆಯುವುದು, ಪಠ ಬರೆಯುವುದು.

,, 8. ಕೆತ್ತನೆ ಕೆಲಸ ಮತ್ತು ಶಿಲಾಮುದ್ರ.

,, 9. ಶಿಲ್ಪ ಕೆಲಸ.

,, 10. ಶಿಲ್ಪ ಶಾಸ್ತ್ರ.

72 139

3ನೆ ಗುಂಪು—ಸಾರ್ವವಿಷಯುಕವಾದ ವಿದ್ಯೆ.

ತರಗತಿ 11. ಛಾಪಿಸುವ ವಿದ್ಯೆ ಮತ್ತು ಛಾಪಿಸುವ ನಾನಾ ವಿಧಾನಗಳು.
,, 12. ತಸ್ವೀರು ತೆಗೆಯುವ ವಿದ್ಯೆ.
,, 13. ಪುಸ್ತಕಗಳು ಮತ್ತು ಪ್ರಕಟನೆಗಳು, ವೃತ್ತಾಂತ ಪತ್ರಿಕೆಗಳು, ಪ್ರಸಿದ್ಧ ಸ್ಥಳಗಳಲ್ಲಿ ಹಚ್ಚಿಸುವ ಪ್ರಸಿದ್ಧ ಪತ್ರಿಕೆಗಳು, ಪುಸ್ತಕಗಳಿಗೆ ರಟ್ಟುಕಟ್ಟುವುದು.
,, 14. ನಕಾಶೆಗಳು, ಭೂವಿವರಣೆ, ಜಗತ್ತಿನ ವರ್ಣನೆ, ಸ್ಥಳವರ್ಣನೆಗೋಸ್ಕರ ಉಪಕರಣಗಳು.
,, 15. ಗಣಿತಶಾಸ್ತ್ರ ಮತ್ತು ಭೌತಿಕಶಾಸ್ತ್ರಗಳಿಗೆ ಸಂಬಂಧಪಟ್ಟ ಉಪಕರಣಗಳು, ನಾಣ್ಯಗಳು, ಮತ್ತು ಬಿರುದಿನ ಬಿಲ್ಲೆಗಳು.
,, 16. ಔಷಧ ಮತ್ತು ಶಸ್ತ್ರಶಾಸ್ತ್ರ.
,, 17. ವಾದ್ಯ ಸಂಬಂಧವಾದ ಸಾಮಗ್ರಿಗಳು.
,, 18. ನಾಟಕಶಾಲೆಯ ಸಾಮಗ್ರಿ.

4ನೆ ಗುಂಪು—ಯಂತ್ರವಿದ್ಯೆ.

ತರಗತಿ 19. ಹಬೆಯ ಯಂತ್ರಗಳು.
,, 20. ನಾನಾವಿಧವಾದ ಮೋಟಾರ್ ಯಾ ಸ್ವಯಂ ಚಲನಾಶಕ್ತಿಯುಳ್ಳ ಗಾಡಿಗಳು.
,, 21. ಸಾಮಾನ್ಯ ಯಂತ್ರಸಾಮಗ್ರಿ.
,, 22. ಯಂತ್ರಗಳಿಗೆ ಉಪಯೋಗಿಸುವ ಆಯುಧಗಳು.

5ನೆ ಗುಂಪು—ವೈದ್ಯುತಶಕ್ತಿ.

ತರಗತಿ 23. ವೈದ್ಯುತ ಶಕ್ತಿಯನ್ನು ಯಂತ್ರಸಹಾಯದಿಂದ ಉತ್ಪತ್ತಿಮಾಡಿ ಉಪಯೋಗಿಸುವುದು.
,, 24. ರಸಾಯನ ವ್ಯಾಪಾರಕ್ಕೆ ಸಂಬಂಧಪಟ್ಟ ವೈದ್ಯುತಶಕ್ತಿಯನ್ನು ಬೋಧಿಸುವ ಶಾಸ್ತ್ರ.
,, 25. ವೈದ್ಯುತ್ತದೀಪಗಳು.
,, 26. ತಂತಿ ಟಪ್ಪಾಲು ಮತ್ತು ತಂತಿಗಳ ಮೂಲಕ ಮಾತನಾಡುವುದು.
,, 27. ವೈದ್ಯುತ ಶಕ್ತಿಯನ್ನು ನಾನಾ ಪ್ರಕಾರವಾಗಿ ಉಪಯೋಗಿಸುವುದು.

6ನೆ ಗುಂಪು—ವಾಸ್ತು ವಿದ್ಯೆ.

ತರಗತಿ 28. ವಾಸ್ತು ವಿದ್ಯೆಗೆ ಸಂಬಂಧಪಟ್ಟ ಸಾಮಾನುಗಳೂ, ಯಂತ್ರ, ಮತ್ತು ವಿಧಾನಗಳು.
,, 29. ಮಹಮತ್ತು ಕೆಲಸಗಳಿಗೆ ಸಂಬಂಧಪಟ್ಟ ನಮೂನೆಗಳು, ನಕ್ಷೆಗಳು ಮತ್ತು ಪತ್ರಗಳು, ಶಿಲ್ಪಿಕೆಲಸದ ಇಂಜನೀರಿನ ವಿದ್ಯೆ.

7ನೆ ಗುಂಪು—ಸ್ಥಳಾಂತರ ಮಾಡುವ ಸಾಧನಗಳು.

ತರಗತಿ 30. ಗಾಡಿಗಳು, ಬಂಡಿ ಮಾಡುವವನ ಕೆಲಸ, ಸ್ವಯಂ ಚಲನಾಶಕ್ತಿಯುಳ್ಳ ಬಂಡಿಗಳು, ಸೈಕಲ್ ಗಾಡಿಗಳು.
,, 31. ಕುದುರೆಯ ಜೀನು, ಗಾಡಿ ಕುದುರೆಯ ಸಾಮಾನು.
,, 32. ರೈಲ್ವೆಗೂ ಟ್ರಾಂವೆಗೂ ಬೇಕಾದ ಯಂತ್ರಸಾಮಗ್ರಿ.
,, 33. ವ್ಯಾಪಾರದ ಹಡಗುಗಳಲ್ಲಿ ಉಪಯೋಗಿಸುವ ಸಾಮಾನುಗಳು.
,, 34. ಆಕಾಶಗಮನ.

8ನೆ ಗುಂಪು—ವ್ಯವಸಾಯ ಮತ್ತು ದ್ರಾಕ್ಷೆಯನ್ನು ಬೆಳೆಯುವುದು.

ತರಗತಿ 35. ರೈತಾಬಿ ಹತ್ಯಾರು, ಮತ್ತು ಜಮೀನುಗಳನ್ನು ಆಬಾದುಮಾಡುವ ವಿಧಾಗಗಳು.
,, 36. ವ್ಯವಸಾಯದ ಮುಟ್ಟುಗಳು ಮತ್ತು ರೈತಾಬಿ ಯಂತ್ರಗಳು.
,, 37. ಗೊಬ್ಬರಗಳು.
,, 38. ವ್ಯವಸಾಯ ಕೆಲಸಗಳಲ್ಲಿ ಉಪಯೋಗಿಸುವ ಉಪಕರಣಗಳು ಮತ್ತು ವಿಧಾನಗಳು.
,, 39. ವ್ಯವಸಾಯ ಶಾಸ್ತ್ರ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಲೆಕ್ಕಗಳು.
,, 40. ವ್ಯವಸಾಯದಿಂದುತ್ಪನ್ನವಾದ ಆಹಾರ ವಸ್ತುಗಳು, (1) ಸಸ್ಯ ಪದಾರ್ಥಗಳು (2) ಪ್ರಾಣಿಗಳು. ತಿನ್ನುವುದಕ್ಕಾಗದ ವ್ಯವಸಾಯೋತ್ಪನ್ನಗಳು.
,, 41. ಉಪಯೋಗಕರವಾದ ಹುಳುಗಳು, ಮತ್ತು ಅವುಗಳ ಉತ್ಪನ್ನಗಳು. ಹಾನಿಯನ್ನುಂಟುಮಾಡುವ ಹುಳುಗಳು ಮತ್ತು ಅವುಗಳ ನಿವಾರಣೆ.
,, 42. ಸಸ್ಯ ರೋಗಗಳು, ಬದನಿಕೆಗಳು.

9ನೆ ಗುಂಪು—ವೃಕ್ಷಗಳನ್ನು ಬೆಳೆಸುವುದು, ತೋಟದ ಕೆಲಸ, ಜಂಗಲಿ ವ್ಯವಸಾಯ.

ತರಗತಿ 43. ತೋಟದ ಕೆಲಸದಲ್ಲಿಯೂ ವೃಕ್ಷಗಳನ್ನು ಬೆಳೆಸುವ ಕೆಲಸದಲ್ಲಿಯೂ ಉಪಯೋಗಿಸುವ ಸಾಧನಗಳು ಮತ್ತು ವಿಧಾನಗಳು.
,, 44. ತೋಟಗಳಿಗೂ ಪಾತೆಗಳಿಗೂ ಬೀಜಗಳೂ ಮತ್ತು ಗಿಡಗಳು.

ತರಗತಿ 45. ಹಣ್ಣುಗಳು, ಹಣ್ಣಿನ ಗಿಡಗಳು, ಫಲವ್ಯವಸಾಯ ಕ್ರಮ, ಸಿಡರ್ ಎಂಬ ಹೆಂಡ ಮಾಡುವ ಕ್ರಮ.

,, 46. ಮರಗಳು, ಪೊದೆಗಳು, ಅಲಂಕಾರಾರ್ಥವಾದ ಗಿಡಗಳು, ಮತ್ತು ಪುಷ್ಪಗಳು.

,, 47. ನೆರಳಿನಲ್ಲಿ ಬೆಳೆಯುವ ಮತ್ತು ಉಷ್ಣಹವಾದಲ್ಲಿ ಬೆಳೆಯುವ ಗಿಡಗಳು.

,, 48. ಕಾಡು ಬೆಳೆಗಳನ್ನು ಜಮಾಯಿಸುವುದಕ್ಕೆ ಸಾಧನಗಳು ಮತ್ತು ಜಮಾಯಿಸಿದ ಬೆಳೆಗಳು.

,, 49. ಜಂಗಲಿ ವ್ಯವಸಾಯದಲ್ಲಿ ಉಪಯೋಗಿಸುವ ಸಾಧನಗಳು ಮತ್ತು ವಿಧಾನಗಳು.

,, 50. ಜಂಗಲಿ ವ್ಯವಸಾಯದ ಉತ್ಪನ್ನಗಳು ಮತ್ತು ಜಂಗಲಿ ಕೆಲಸಗಳು.

,, 51. ಬೇಟೆ, ಬಂದೂಕಿನ ಬೇಟೆ, ಮೀನು ಹಿಡಿಯುವದು, ಮತ್ತು ಬೇಟೆ ಯಾ ಮತ್ತು ಬಂದೂಕಿನ ಬೇಟೆಯ ಸಾಮಗ್ರಿ.

,, 52. ಬೇಟೆಯಲ್ಲಿ ಮತ್ತು ಬಂದೂಕಿನ ಬೇಟೆಯಲ್ಲಿ ಹೊಡೆದು ತಂದ ಪ್ರಾಣಿಗಳು.

,, 53. ಮೀನು ಹಿಡಿಯುವ ಸಾಮಗ್ರಿ ಮತ್ತು ಹಿಡಿದ ಮೀನುಗಳು.

,, 54. ಮೀನುಗಳ ಪೋಷಣೆ.

10ನೆ ಗುಂಪು—ಆಹಾರ.

ತರಗತಿ 55. ಆಹಾರ ವಸ್ತುಗಳನ್ನು ತಯಾರುಮಾಡುವುದರಲ್ಲಿ ಉಪಯೋಗಿಸುವ ಸಾಮಗ್ರಿ ಮತ್ತು ವಿಧಾನಗಳು.

,, 56. ಹಸಿ ಹಿಟ್ಟು ಮತ್ತು ಅದರಿಂದ ತಯಾರಾದ ಸಾಮಾನುಗಳು.

,, 57. ರೊಟ್ಟಿ ಮತ್ತು ಹೋಳಿಗೆ ವಗ್ಯರೆ ಕಣಕದ ಪದಾರ್ಥ.

,, 58. ಒಣಗಿಸಿಟ್ಟ ಮಾಂಸ, ಮೀನು, ತರ್ಕಾರಿ ಮತ್ತು ಹಣ್ಣು.

,, 59. ಸಕ್ಕರೆ, ಮಿಠಾಯಿ, ಕಾರದ ಸಾಮಾನು ಮತ್ತು ರುಚಿ ಕೊಡುವ ಸಾಮಾನು.

,, 60. ಮದ್ಯಗಳು ಮತ್ತು ಬಟ್ಟಿ ಇಳಿಸಿದ ಮದ್ಯಗಳು.

,, 61. ಶರಬತ್ತುಗಳು, ಮದ್ಯಗಳು ನಾನಾವಿಧವಾದ ಹೆಂಡಗಳು, ವ್ಯಾಪಾರದಲ್ಲಿ ಉಪಯೋಗಿಸುವ ಹುಳಿಹಿಡಿಸಿದ ದ್ರವ ಪದಾರ್ಥಗಳು.

,, 62. ನಾನಾ ಪಾನದ್ರವ್ಯಗಳೂ, ಉಕ್ಕಿದ ಸಾರಾಯಿಗಳು ಮತ್ತು ಇತರ ನೀರುಗಳು.

11ನೆ ಗುಂಪು—ಗಣಿಗಳ ಕೆಲಸ ಮತ್ತು ಲೋಹಶೋಧನ ವಿದ್ಯೆ.

ತರಗತಿ 63. ಗಣಿಗಳ ಮತ್ತು ಕಲ್ಲು ಕಡಿಯುವ ಕೆಲಸ.

,, 64. ಲೋಹ ಶೋಧನವಿದ್ಯೆ.

,, 65. ಅದುರುಗಳು ಮತ್ತು ಖನಿಜ ಧಾತುಗಳು.

12ನೆ ಗುಂಪು—ಅಲಂಕಾರ ಮಾಡುವುದು ಮತ್ತು ಮನೆಗೆ ಬೇಕಾದ ಸಾಮಾನುಗಳನ್ನು ಸಿದ್ಧ ಮಾಡುವುದು.

ತರಗತಿ 66. ಅಲಂಕಾರ ಮತ್ತು ಖಾಯಂ ಸಾಮಾನು.

,, 67. ಸೀಸದ ಕೊಳಾಯಿಗಳನ್ನಿಡುವುದು ಮತ್ತು ಆರೋಗ್ಯಕ್ಕೆ ಬೇಕಾದ ಉಪಕರಣಗಳು.

,, 68. ಗೋಡೆಗೆ ಹಚ್ಚುವ ಕಾಗದಗಳು, ಮತ್ತು ತಗುಲುಹಾಕುವ ಕಾಗದಗಳು.

,, 69. ಮನೆ ಮುಟ್ಟು ಸಾಮಾನು, ಕುಶಲವಿದ್ಯೆಗೆ ಸಂಬಂಧಪಟ್ಟ ಸಾಮಾನು ಮತ್ತು ಕಚೇರಿಯ ಸಾಮಾನು.

,, 70. ಜಮಖಾನೆಗಳು, ಫರದಾಗಳು, ಮನೆ ಮುಟ್ಟಿಗೆ ಬೇಕಾದ ಬಟ್ಟೆ.

,, 71. ಮನೆ ಮುಟ್ಟು ಸಾಮಾನು ಪೂರೈಸಿಕೊಡುವವ ಮತ್ತು ಅವನು ಮಾಡುವ ಅಲಂಕಾರ.

,, 72. ಪಿಂಗಾಣಿ ಸಾಮಾನು (ಮಣ್ಣಿನ ಪಾತ್ರೆಗಳು ಮತ್ತು ಪಿಂಗಾಣಿ.)

,, 73. ಕನ್ನಡಿ, ಸ್ಫಟಿಕದ ಶಿಲೆ, ಮತ್ತು ಬಣ್ಣದ ಕನ್ನಡಿ.

,, 74. ಶಾಖ ಮಾಡುವುದಕ್ಕೂ ಗಾಳಿ ಸಂಚಾರಕ್ಕೆ ಏರ್ಪಾಡು ಮಾಡುವುದಕ್ಕೂ ಯಂತ್ರಗಳು ಮತ್ತು ವಿಧಾನಗಳು.

,, 75. (ವೈದ್ಯುತಶಕ್ತಿ ಸಂಬಂಧವಾದುದಲ್ಲದೆ) ಬೆಳಕು ಉಂಟುಮಾಡುವುದಕ್ಕೆ ಯಂತ್ರಗಳು ಮತ್ತು ರೀತಿಗಳು.

13ನೆ ಗುಂಪು—ನೇಯಿಗೆ ಸಾಮಾನು.

ತರಗತಿ 76. ನೂಲುವುದಕ್ಕೂ ಹಗ್ಗ ಮಾಡುವುದಕ್ಕೂ ಸಾಧನಗಳು ಮತ್ತು ಕ್ರಮಗಳು.

,, 77. ನೇಯಿಗೆ ವಸ್ತ್ರಗಳ ತಯಾರಿಯಲ್ಲಿ ಉಪಯೋಗಿಸುವ ಯಂತ್ರಗಳು ಮತ್ತು ಕ್ರಮಗಳು.

,, 78. ನೇಯಿಗೆ ಪದಾರ್ಥಗಳನ್ನು ಬಿಳುಪು ಮಾಡುವುದು, ಅದಕ್ಕೆ ಬಣ್ಣ ಕಟ್ಟುವುದು, ಚೀಟ ಬಣ್ಣ ಹಾಕುವುದು, ಮುಗಿಸುವುದು—ಈ ಕೆಲಸಗಳಿಗೆ ಬೇಕಾದ ಯಂತ್ರಗಳು ಮತ್ತು ಕ್ರಮಗಳು; ಅವುಗಳ ನಾನಾ ದರಜೆಗಳು.

,, 79. ಹೊಲಿಯುವುದರಲ್ಲಿಯೂ ಉಡುಪುಗಳನ್ನು ತಯಾರುಮಾಡುವುದರಲ್ಲಿ ಉಪಯೋಗಿಸುವ ಯಂತ್ರಗಳು ಮತ್ತು ವಿಧಾನಗಳು.

,, 80. ನೂಲು ಮತ್ತು ಹತ್ತಿಯ ಬಟ್ಟೆ.

,, 81. ಅಗಸೆನಾರಿನ ಮತ್ತು ಪುಂಡಿ ನಾರಿನ ದಾರಗಳು ಮತ್ತು ಬಟ್ಟೆಗಳು ಹಗ್ಗಗಳು.

722 1141

ತರಗತಿ 82 ಕಂಬಳಿದ್ದಾರ್ತ ಮತ್ತು ತುಪಟದ ಬಟ್ಟೆಗಳು.

,, 83 ರೇಷ್ಮೆ ಮತ್ತು ರೇಷ್ಮೆ ಬಟ್ಟೆಗಳು.

,, 84 ಕಲಾಬತ್ತುಗಳು, ಬುಟ್ಟೆದಾರಿ ಕೆಲಸಗಳು ಬಟ್ಟೆಗೆ ಹಚ್ಚಿದ ಗೋಟುಗಳೂ.

,, 85. ಗಂಡಸರು, ಹೆಂಗಸರು ಮತ್ತು ಹುಡುಗರ ಉಡುಪುಗಳನ್ನು ತಯಾರಿಸುವ ಉದ್ಯೋಗಗಳು.

,, 86. ಉಡುಪುಗಳಿಗೆ ಸಂಬಂಧಪಟ್ಟ ಅನೇಕ ಉದ್ಯೋಗಗಳು.

14ನೆ ಗುಂಪು – ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟ ಕೆಲಸಗಳು.

,, 87. ಕೈಗಾರಿಕೆಯ ಕೆಲಸಗಳಿಗೆ ಉಪಯೋಗವಾಗುವ ರಸಾಯನಶಾಸ್ತ್ರ ಚಿಹ್ನ ವಸ್ತುಗಳನ್ನು ತಯಾರ್ಮಾ ಡುವ ವಿದ್ಯೆ ಮತ್ತು ಔಷಧ ತಯಾರ್ಮಾಡುವ ವಿದ್ಯೆ.

,, 88. ಕಾಗದದ ತಯಾರಿ.

,, 89. ತೊಗಲು ಮತ್ತು ಚರ್ಮಗಳು.

,, 90 ಸುಗಂಧ ದ್ರವ್ಯಗಳು.

,, 91. ಹೊಗೇಸಪ್ಪಿನ ಮತ್ತು ಬೆಂಕಿಕಡ್ಡಿಯ ತಯಾರಿ.

15ನೆ ಗುಂಪು – ನಾನಾ ಉದ್ಯೋಗಗಳು.

ತರಗತಿ 92. ಬರವಣಿಗೆಯ ಸಾಮಾನು.

,, 93. ಕತ್ತಿ ಮಾಡುವ ಕೆಲಸ.

,, 94. ಚಿನ್ನ ಬೆಳ್ಳಿ ಕೆಲಸ ಮಾಡುವವರ ಸಾಮಾನು.

,, 95. ಆಭರಣಗಳು, ರತ್ನಗಳು.

,, 96. ಗಡಿಯಾರಗಳ ತಯಾರಿ.

,, 97. ಕಂಚು ಮತ್ತು ಕಲ್ಲಿನಲ್ಲಿ ಮಾಡಿದ ಕೈಗಾರಿಕೆಯ ಕೆಲಸ, ಯರಕದ ಮತ್ತು ಇತರ ಹಚ್ಚಿನ ಕೆಲಸ, ಹೂವುಕೆತ್ತಿದ ಲೋಹಗಳು.

,, 98. ಕುಶಲವಿದ್ಯೆ, ತೊಗಲಿನಕೆಲಸ, ಮಂಕ್ರಿ ವಗೈರೆಯನ್ನು ಹೆಣೆಯುವ ಕೆಲಸ; ಬಿರುಸುಗಳು, ಚಿತ್ರವಿ ಚಿತ್ರವಾದ ಸಾಮಾನುಗಳು.

,, 99. ಇಂಡಿಯಾ ರಬ್ಬರು, ಗುಟಪರ್ಚಾ ರಬ್ಬರಿನ ಕೆಲಸಗಳು, ಪ್ರಯಾಣಕ್ಕೆ ಬೇಕಾದ ಸಾಮಾನುಗಳು.

,, 100. ಆಟದ ಸಾಮಾನುಗಳು ಮತ್ತು ಮೋಜಿನ ಜಿನಸು.

16ನೆ ಗುಂಪು – ಜನಸಂಘಗಳ ಕಾರ್ಯನಿರ್ವಾಹ, ಆರೋಗ್ಯ, ಜನಗಳಿಗೆ ಸಹಾಯ.

ತರಗತಿ 101. ಜನಸಂಘಗಳ ಮತ್ತು ಅವರ ಕಾರ್ಯನಿರ್ವಾಹದ ಸ್ಥಿತಿಯನ್ನು ವಿಚಾರಮಾಡಿ ಪರಿಶೋಧಿಸುವುದು.

,, 102. ಕಾರ್ಯ ನಿರ್ವಾಹಕ್ಕೆ ಬೇಕಾದ ಆಧಾರಗಳು; ಮತ್ತು ಸ್ಥಾಪಿತವಾದ ಏರ್ಪಾಡುಗಳು.

,, 103. ಕೈಗಾರಿಕೆ ಕಸಬು ಮತ್ತು ಕೆಲಸದ ವಿಷಯದಲ್ಲಿ ಸುವ್ಯವಸ್ಥಾಪನೆ ಏರ್ಪಾಡು.

,, 104. ಕಸಬುದಾರರು ಮಾಡಿಕೊಂಡಿರುವ ಏರ್ಪಾಡು.

,, 105. ಕಸುಬುದಾರರಿಗೆ ವೇತನ ಸಲ್ಲುವ ರೀತಿಗಳು, ಲಾಭದ ಹಂಚಿಕೆ.

,, 106. ಧನಸಂಚಯ, ವಿಮೆ ಮೊದಲಾದ ಮುಂಜಾಗ್ರತೆಯ ಕೆಲಸಗಳು.

,, 107. ಅನ್ಯೋನ್ಯಸಹಾಯದಿಂದ ಆದ ಉತ್ಪತ್ತಿ ಮತ್ತು ಅದರ ಹಂಚಿಕೆ.

,, 108. ಕೆಲಸಗಾರ ಜನರಿಗೆ ಮನೆ (ನಗರ ನಿವಾಸಿಗಳು ಮತ್ತು ಹಳ್ಳಿಯವರು).

,, 109. ಆರೋಗ್ಯಶಾಸ್ತ್ರ ಮತ್ತು ಆರೋಗ್ಯ.

,, 110 ಜನರಿಗೆ ಸಹಾಯ.

,, 111. ಧರ್ಮಶಾಲೆಗಳು.

,, 112. ಜನಸಂಘದ ವಿಷಯದಲ್ಲಿಯೂ, ಕಾರ್ಯನಿರ್ವಾಹ ವಿಷಯದಲ್ಲಿಯೂ ನಗರವಾಸವನ್ನು ಇನ್ನೂ ಉತ್ತ ಮಸ್ಥಿತಿಗೆ ತರುವುದಕ್ಕಾಗಿ ಮ್ಯುನಿಸಿಪಾಲಿಟಿಯವರಿಂದ ಅಥವಾ ಸ್ವಂತಜನರಿಂದ ಆರಂಭಿಸಿದ ಪ್ರ ಯತ್ನಗಳು.

17ನೆ ಗುಂಪು – ಹೆಂಗಸರ ಕೆಲಸ.

ತರಗತಿ 113. ಮನೆಯ ಕೆಲಸದಲ್ಲಿಯೂ, ಕೈಗಾರಿಕೆಯಲ್ಲಿಯೂ ಶಿಕ್ಷಣ.

,, 114. ಕುಶಲ ವಿದ್ಯೆಗಳು ಮತ್ತು ಕಸಬುಗಳು.

,, 115. ಜನಸಂಘಗಳ ಸಂಬಂಧವಾದ ಮತ್ತು ಲೋಕೋಪಕಾರಾರ್ಥವಾದ ಶಾಲೆಗಳು.

18ನೆ ಗುಂಪು – ವ್ಯಾಪಾರಕ್ಕಾಗಿ ವಸ್ತಿಯಾಗುವಿಕೆ.

ತರಗತಿ 116. ವ್ಯಾಪಾರ, ವರ್ತಕತನ ಮತ್ತು ಬ್ಯಾಂಕಿಂಗು ಯಾ ಸಾಹುಕಾರಿ ಕಸಬು.

,, 117. ವಸ್ತಿಯಾಗುವ ಕ್ರಮಗಳು.

,, 118. ವಸ್ತಿಯ ಕಟ್ಟಡಗಳು ಮತ್ತು ಉಪಕರಣಗಳು.

,, 119. ವಸ್ತಿಗಳಿಗೆ ರಫ್ತು ಮಾಡುವುದಕ್ಕೆ ಯೋಗ್ಯವಾದ ವಿಶೇಷ ತರಹದ ಉತ್ಪನ್ನ ವಸ್ತುಗಳು.

19ನೆ ಗುಂಪು — ಭೂಮಿಯಮೇಲಿನ ಸೈನ್ಯ ಮತ್ತು ನಾವಿಕಸೈನ್ಯ.

ತರಗತಿ 120. ಫಿರಂಗಿಗಳು ಮತ್ತು "ತೋಫು" ಗಳ ಸರಂಜಾಮು.

,, 121. ಸೈನ್ಯ ಸಂಬಂಧವಾದ ಇಂಜನೀರಿಂಗ್ ಮತ್ತು ಅದಕ್ಕೆ ಸಹಾಯಕವಾದ ಕೆಲಸಗಳು.

,, 122. ಹಡಗುಗಳನ್ನು ಕಟ್ಟುವುದು, ಜಲಸೂತ್ರಗಳು, ಹಡಗುಗಳನ್ನು ಹಾರಿಸಿ ನಾಶಮಾಡುವುದಕ್ಕೆ ನೀರೊಳಗೆ ಇಟ್ಟ ಟಾರ್ಪಿಡೊ ಎಂಬ ಯಂತ್ರಗಳು.

,, 123. ನಕ್ಷೆಗಳನ್ನೂ ತಯಾರ್ಮಾಡುವ ವಿದ್ಯೆ. ಸಮುದ್ರದ ಆಳ ವಗೈರೆಗಳ ನಕ್ಷೆಯನ್ನೂ ತಯಾರ್ಮಾಡುವ ವಿದ್ಯೆ—ನಾನಾ ಆಯುಧಗಳು.

,, 124. ಆಡಳಿತದ ಇಲಾಖೆಗಳು.

,, 125. ಆರೋಗ್ಯಶಾಸ್ತ್ರ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ಉಪಕರಣಗಳು.

20ನೆ ಗುಂಪು—ಆಟಗಳು ಮತ್ತು ಅಂಗಸಾಧನೆ.

ತರಗತಿ 126. ಮಕ್ಕಳ ಮತ್ತು ಪ್ರಾಯಸ್ಥರ ಶಿಕ್ಷಣ, ಮತ್ತು ಅಂಗಸಾಧನೆ.

,, 127. ಮಕ್ಕಳಿಗೂ ಪ್ರಾಯಸ್ಥರಿಗೂ ಆಟಗಳು ಮತ್ತು ವಿಹಾರಗಳು.

,, 128. ಆಟ ಮತ್ತು ವಿಹಾರಗಳ ಸಾಮಗ್ರಿಗಳು.

21ನೆ ಗುಂಪು ಸಭೆ ಮತ್ತು ಆಲೋಚನೆ ಕೂಟಗಳು.

ಮೇಲೆ ಕಂಡ ಕಾಗದಗಳನ್ನು ಇಂಡಿಯಾ ಗೆಜೆಟ್ಟಿನ ಸಪ್ಲಿಮೆಂಟ್ ಯಾ ಪರಿಶಿಷ್ಟದಲ್ಲಿ ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿಸುವುದಲ್ಲದೆ ಅವುಗಳ ಪ್ರತಿಗಳನ್ನು ಇದರಿನಲ್ಲಿಕಂಡ ಸ್ಥಳೀಯ ಸರ್ಕಾರಗಳಿಗೆ ಆಯಾಯ ಸ್ಥಳಗಳ ಗೆಜೆಟ್ಟುಗಳಲ್ಲಿ ಪ್ರಕಟಿಸಬೇಕೆಂದು ಕೋರಿ ಅವರ ತಿಳಿವಳಿಕೆಯ ಬಗ್ಗೆ ಕಳುಹಿಸಬೇಕೆಂತ ಹುಕುಂ ಮಾಡಿ ಇದೆ.

ಮದ್ರಾಸು ಸರ್ಕಾರದ ಸೆಕ್ರೆಟರಿ.	ಪೂರ್ವಬಂಗಾಳ ಮತ್ತು ಅಸ್ಸಾಮು.
ಬೊಂಬಾಯಿ.	ಘನವನ್ನೈದಿದ ಮಧ್ಯಪ್ರಾಂತ್ಯದ ಚೀಫ್ ಕಮಿಷನರು.
ಬಂಗಾಳ.	ಘನವನ್ನೈದಿದ ಮೈಸೂರು ಶೀಮೆಯ ರೆಸಿಡೆಂಟ್ ಮತ್ತು ಕೊಡಗಿನ ಚೀಫ್ ಕಮಿಷನರು.
ಸಂಯುಕ್ತ ಪ್ರಾಂತ್ಯಗಳು.	
ಪಂಜಾಬು.	
ಬರ್ಮಾ.	

ಇದು ಅಲ್ಲದೆ ಅದರ ಪ್ರತಿಯನ್ನು ಅಜ್ಮೀರ್ ಮಾರ್ವಾರದ ಚೀಫ್ ಕಮಿಷನರಿಗೆ, ಮತ್ತು ವಾಯುವ್ಯ ಗಡಿ ಪ್ರಾಂತ್ಯದಲ್ಲಿನ ಗವರ್ನರ್ ಜನರಲ್‌ರವರ ಘನವನ್ನೈದಿದ ಏಜಂಟ್ ಮತ್ತು ಚೀಫ್ ಕಮಿಷನರಿಗೆ ತಿಳಿವಳಿಕೆಯ ಬಗ್ಗೂ, ಮತ್ತು ಫಾರಿನ್ ಇಲಾಖೆಗೆ ತಿಳಿವಳಿಕೆಯ ಬಗ್ಗೆ ಮತ್ತು ನೇಟಿವ್ ಯಾ ದೇಶೀಯ ಸಂಸ್ಥಾನಗಳಿಗೆ ಕಳುಹಿಸುವ ಬಗ್ಗೆ ರವಾನಿಸಬೇಕೆಂದು ಹುಕುಂ ಮಾಡಿ ಇದೆ.

ಮತ್ತು ಚೇಂಬರ್ಸ್ ಆಫ್ ಕಾಮರ್ಸ್ ಯಾ ವ್ಯಾಪಾರ ಸಂಘಗಳಿಗೆಲ್ಲಾ ಒಂದೊಂದು ಪ್ರತಿಯನ್ನು ತಿಳಿವಳಿಕೆಯ ಬಗ್ಗೆ ಕಳುಹಿಸತಕ್ಕದ್ದೆಂದು ಕೂಡ ಹುಕುಂ ಮಾಡಿ ಇದೆ.

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರೆಟರಿ.

ಮೈಸೂರು ಗೆಜೆಟ್.

ಸಂ. 42.] ಸರ್ಕಾರದಿಂದ ಪಬ್ಲಿಷ್ ಆದ್ದು. [ಸಂ. 29.

ಬೆಂಗಳೂರು, ಗುರುವಾರ, ಜುಲೈ ತಾ॥ 18, ಸ್ನ 1907.

IV ನ ಭಾಗ.

ಸರ್ಕಾರಿ ಕಾಗದ ಪತ್ರಗಳು.

1907ನೆಯ ವರ್ಷದ 27ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ (1907ನೆಯ ವರ್ಷದ ಜುಲೈ 6ನೆಯ ತಾರೀಖು).

ಡಿಸ್ಟ್ರಿಕ್ಟು ಮತ್ತು ಸ್ಥಳ.		ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ.										ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
		ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ.									
						ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.					
1		2		3		4		5		6		7			
		I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು.
ಬೆಂಗಳೂರು.	ಬೆಂಗಳೂರು ದಂಡು ...	...	89	...	...	7	11	...	...	...	...				
	ಸಿಟಿ ಮತ್ತು ತಾಲ್ಲೂಕು ...	1	30	...	28	13	28	9	37	+ 3	91				
	ಹೊಸಕೋಟೆ ...	...	...	...	27	10	55	8	25	+ 2	30				
	ದೊಡ್ಡಬಳ್ಳಾಪುರ ...	...	44	...	43	7	77	9	10	— 1	33				
	ನೆಲಮಂಗಲ ...	...	8	...	18	10	80	7	99	+ 2	81				
	ಕಾನಕಾನಹಳ್ಳಿ ...	...	15	...	64	10	48	10	49	— 0	1				
	ಮಾಗಡಿ ...	...	52	...	11	18	70	6	73	+ 11	97	ಅಕ್ಕಿ ದುಯಂ ತರಹ	7·00	7·00	8·96
	ಚನ್ನಪಟ್ಣ ...	...	10	...	40	13	95	8	84	+ 5	11				
	ಆನೆಕಲ್ಲು ...	...	83	...	26	13	62	10	94	+ 2	68	ರಾಗಿ	15·00	15·00	19·54
	ದೇವನಹಳ್ಳಿ ...	...	20	...	75	10	66	9	11	+ 1	55	ಹುರುಳಿ	12·00	12·00	...
	ಕ್ಲೋಸ್‌ಪೇಟೆ ...	...	50	...	31	16	48	9	43	+ 7	5	ಕಡಲೆ	9·00	9·00	9·98
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	41	...	36	12	63	9	3	+ 3	60				
ಕೋಲಾರ.	ಕೋಲಾರ ...	...	...	...	40	11	64	6	85	+ 4	79	ಅಕ್ಕಿ ದುಯಂ ತರಹ ...	7·00	7·00	8·87
	ಬೌರಿಂಗಪೇಟೆ ...	...	10	...	42	8	16	7	86	+ 0	30				
	ಚಿಂತಾಮಣಿ ...	...	...	...	44	10	72	6	68	+ 4	4	ರಾಗಿ	16·00	17·00	21·45
	ಮುಳಬಾಗಲು ...	...	...	...	67	12	92	7	76	+ 5	16	ಹುರುಳಿ	14·00	15·00	...
	ಶಿಡ್ಲಘಟ್ಟ ...	...	21	...	45	10	56	7	44	+ 3	12	ಕಡಲೆ	9·00	9·00	9·00
	ಚಿಕ್ಕಬಳ್ಳಾಪುರ ...	1	5	...	62	10	66	10	36	+ 0	30				
	ಬಾಗೆಪಲ್ಲಿ ...	1	85	...	35	9	98	5	29	+ 4	69				
	ಗೋರಿಬಿದನೂರು ...	...	59	...	29	7	50	6	25	+ 1	25				
	ಮಾಲೂರು ...	...	...	...	29	10	19	8	43	+ 1	76				
	ಶ್ರೀನಿವಾಸಪುರ ...	...	52	...	90	9	33	8	15	+ 1	18				
	ಗುಡಿಬಂಡೆ ...	...	90	1	...	11	2	7	26	+ 3	76				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	47	...	53	10	24	7	48	+ 2	76				

ಡಿಸ್ಟ್ರಿಕ್ಕು ಮತ್ತು ಸ್ಥಳ.		ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
1		2		3		4		5		6		7			
		I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಒಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ತುಮಕೂರು.	ತುಮಕೂರು ...	...	61	...	34	10	18	8	94	+ 1	24				
	ಮಧುಗಿರಿ ...	...	80	...	42	6	13	5	98	+ 0	15				
	ಚಿಕ್ಕನಾಯಕನಹಳ್ಳಿ ...	...	...	...	27	8	7	8	95	— 0	88				
	ಸೀರ ...	...	29	...	18	4	86	5	80	— 0	94				
	ಗುಬ್ಬಿ ...	1	42	...	16	9	66	7	...	+ 2	66				
	ತಿಪಟೂರು ...	...	...	...	8	6	84	7	72	— 0	88				
	ಪಾವಗಡ ...	...	44	...	14	4	29	5	48	— 1	19	ಅಕ್ಕಿ ದುಯ್ಯಂ	8·50	8·50	9·25
	ಕುಣಿಗಲು ...	...	...	...	19	10	54	7	32	+ 3	22	ತರಹ			
	ಕೊರಟಗೆರೆ ...	...	25	...	28	8	54	6	55	+ 1	99	ರಾಗಿ	18·00	18·00	22·90
	ತುರುವೇಕೆರೆ ...	...	...	...	9	5	55	6	97	— 1	42	ಹುರುಳಿ	16·00	16·00	...
												ಕಡಲೆ	9·00	9·00	9·15
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	38	...	22	7	47	7	7	+ 0	40				
ಮೈಸೂರು.	ಮೈಸೂರು ...	...	5	...	21	10	39	11	9	— 0	70	ಅಕ್ಕಿ ದುಯ್ಯಂ	7·50	7·50	9·45
	ಚಾಮರಾಜನಗರ ...	...	...	...	6	9	23	11	21	— 1	98	ತರಹ ...			
	ಶ್ರೀರಂಗಪಟ್ಟಣ ...	...	...	...	28	12	19	8	54	+ 3	65	ರಾಗಿ ...	16·00	15·75	18·75
	ಹುಣಸೂರು ...	...	73	...	48	11	27	12	16	— 0	89	ಹುರುಳಿ ...	16·00	15·50	...
	ಯಡತೊರೆ ...	...	...	...	24	9	41	9	38	+ 0	3	ಕಡಲೆ ...	8·50	9·25	10·11
	ಹೆಗ್ಗಡದೇವನಕೋಟೆ ...	...	90	...	76	10	56	12	63	— 2	7				
	ಗುಂಡ್ಲು ಪೇಟೆ ...	...	35	...	30	13	67	9	33	+ 4	34				
	ನಂಜನಗೂಡು ...	...	10	...	28	12	30	9	94	+ 2	36				
	ತಿ. ನರಸೀಪುರ ...	...	...	...	16	8	38	10	6	— 1	68				
	ಮಳವಳ್ಳಿ ...	...	...	...	14	8	18	7	99	+ 0	19				
	ಮಂಡ್ಯ ...	...	40	...	5	14	26	8	42	+ 5	84				
	ಕೃಷ್ಣರಾಜಪೇಟೆ ...	...	45	...	33	9	60	9	50	+ 0	10				
	ನಾಗಮಂಗಲ ...	...	...	...	33	8	79	5	86	+ 2	93				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	23	...	28	10	63	9	70	+ 0	93				
ಹಾಸನ.	ಹಾಸನ ...	1	9	...	52	13	9	11	8	+ 2	1	ಅಕ್ಕಿ ದುಯ್ಯಂ	10·00	9·50	9·95
	ಮಂಜರಾಬಾದು(ಸಕಲೇಶಪುರ)	5	49	4	85	27	3	28	87	— 1	84	ತರಹ			
	ಅರಕಲಗೋಡು ...	2	45	...	88	9	40	12	33	— 2	93	ರಾಗಿ	20·00	20·00	22·87
	ಬೇಲೂರು ...	1	83	...	87	12	26	13	73	— 1	47	ಹುರುಳಿ	15·00	15·00	...
	ಚನ್ನರಾಯಪಟ್ಟಣ ...	..	38	...	17	5	87	8	84	— 2	97	ಕಡಲೆ	9·00	8·50	9·10
	ಅರಸೀಕೆರೆ ...	...	33	...	14	5	79	7	97	— 2	18				
	ಹೊಳೆನರಸೀಪುರ ...	1	11	...	59	9	91	9	79	+ 0	12				
	ಆಲೂರು ...	1	80	...	95	17	95	13	39	+ 4	56				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	1	81	1	12	12	66	13	25	— 0	59				

ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಬಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
1	2		3		4		5		6		7			
	I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಬಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
ಶಿವಮೊಗ್ಗ ...	1	91	...	77	13	31	11	56	+ 1	75				
ಚನ್ನಗಿರಿ ...	...	26	...	42	8	19	8	51	— 0	12				
ಹೊನ್ನಾಳಿ ...	1	8	...	35	5	...	9	22	— 4	22				
ಶಿಕಾರಿಪುರ ...	1	79	...	92	12	6	11	39	+ 0	67				
ಸೊರಬ ...	3	83	2	89	18	85	17	51	+ 1	34				
ಸಾಗರ ...	11	45	4	12	30	80	24	73	+ 6	7				
ನಗರ (ಕಲ್ಲೂರುಕಟ್ಟೆ) ...	10	93	6	75	37	78	32	59	+ 5	19	ಅಕ್ಕಿ ದುಯಂ	8·00	8·50	11·19
ತೀರ್ಥಹಳ್ಳಿ ...	8	44	8	34	27	62	37	29	— 9	67	ತರಹ			
ಕುಂಸಿ ...	3	56	1	23	15	45	13	50	+ 1	95	ರಾಗಿ	19·00	20·00	25·15
											ಹುರುಳಿ	13·00	13·50	...
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	4	81	2	87	18	78	18	46	+ 0	33				
ಚಿಕ್ಕಮಗಳೂರು ...	3	5	...	82	11	72	13	3	— 1	31	ಅಕ್ಕಿ ದುಯಂ	8·50	8·50	10·00
ಕಡೂರು ...	...	13	...	40	7	24	7	52	— 0	28	ತರಹ			
ತರೀಕೆರೆ ...	...	42	1	37	5	78	11	45	— 5	67	ರಾಗಿ	20·00	20·00	21·70
ಕೊಪ್ಪ ...	11	38	9	28	35	11	36	71	+ 1	60	ಹುರುಳಿ	12·00	12·00	...
ಮೂಡಿಗೆರೆ ...	5	22	5	83	32	48	30	72	+ 1	76	ಕಡಲೆ	8·00	8·00	9·20
ಯಡೆಹಳ್ಳಿ ...	4	50	4	2	21	12	20	...	+ 1	12				
ಶೃಂಗೇರಿ ...	16	21	11	10	52	88	46	14	+ 6	74				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	5	84	4	69	23	76	23	65	+ 0	11				
ಚಿತ್ರದುರ್ಗ ...	1	17	...	33	6	63	7	39	— 0	76	ಅಕ್ಕಿ ದುಯಂ	9·00	8·75	10·00
ಚಳ್ಳಕೆರೆ ...	...	70	...	24	6	98	4	73	+ 2	25	ತರಹ			
ಹಿರಿಯೂರು ...	...	31	...	14	7	84	5	89	+ 1	95	ರಾಗಿ	20·00	20·00	22·00
ಹೊಳಲ್ಕೆರೆ ...	...	47	...	26	9	57	7	49	+ 2	8	ಹುರುಳಿ	14·00	14·00	...
ದಾವಣಗೆರೆ ...	3	22	...	54	7	45	8	85	— 1	40	ಜೋಳ	18·00	18·00	20·20
ಮೊಳಕಾಲ್ಮುರು ...	...	57	...	23	5	13	6	41	— 1	28	ಕಡಲೆ	8·00	10·00	9·20
ಜಗಳೂರು ...	2	35	...	29	5	76	8	21	— 2	45				
ಹೊಸದುರ್ಗ ...	...	...	...	28	5	91	6	41	— 0	50				
ಹರಿಹರ ...	1	56	...	30	6	25	6	87	— 0	62				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	1	15	...	29	6	84	6	92	— 0	8				
ಸಂಸ್ಥಾನದಲ್ಲಿ ಸರಾಸರಿ ...	1	89	1	29	12	88	11	94	+ 0	93				

ಡಿಸ್ಟ್ರಿಕ್ಟು ರಿಪೋರ್ಟುಗಳು.

8. ಬಜಾರಿನಲ್ಲಿ ಸರಬರಾಯಿ ಹ್ಯಾಗಿದೆ.
9. ವ್ಯವಸಾಯ ಕಾರ್ಯದ ಅಭಿವೃದ್ಧಿ, ನಿಂತಿರುವ ಪೈರುಗಳ ಸ್ಥಿತಿ, ಬೆಳೆಗಳು ಎಷ್ಟಾಗಬಹುದೆಂಬ ನಿರೀಕ್ಷೆ, ಮತ್ತು ಸುಗ್ಗಿಯ ಕಾಲದಲ್ಲಿ ಉಂಟಾಗಬಹುದಾದ ಹುಟ್ಟುವಳಿ, ಹುಳುಗಳು ಅಥವಾ ಸ್ವಾಭಾವಿಕವಾದ ಇತರ ವಿಪತ್ತುಗಳಿಂದ ಪೈರುಗಳಿಗೆ ಉಂಟಾದ ನಷ್ಟ.
10. ಕಾಲದ ಅಯತಿ, ಮಳೆಯು ಸಾಲದೆ ಇರುವ ಪ್ರದೇಶಗಳು, ದುರ್ಭಿಕ್ಷ ವುಂಟಾಗಿರುವ ಸ್ಥಳಗಳು, ರಿಲೀಫ್ ಯಾ ಸಹಾಯವನ್ನು ಪಡೆಯುತ್ತಿರುವ ಜನರ ಸಂಖ್ಯೆ, ಮತ್ತು ಆಹಾರ ಸಾಮಗ್ರಿಯ ಸ್ಥಿತಿ.
11. ಜನಗಳ ಆರೋಗ್ಯ.
12. ವ್ಯವಸಾಯಕ್ಕೆ ಸಂಬಂಧಿಸುವ ಮೂಲುಗಳು, ದನಗಳಿಗೆ ಮೇಯುವುದಕ್ಕೆ ಹುಲ್ಲುಕಾವಲು ಇಲ್ಲದೇ ಹೋಗುವುದು, ಮೇವು ಮುಂತಾದುವುಗಳ ವಿಷಯವಾಗಿ ಷರಾಗಳು.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜಾ.	ಚಾಲ್ತಿ.	
ಅಕ್ಕಿ ರೂಪಾಯಿ 1 ಕ್ಕೆ	7	6 ರಿಂದ 6½ರ ವರೆಗೆ	ಸೇರುಗಳು.
ರಾಗಿ ,, ...	19	14 ರಿಂದ 15ರ ವರೆಗೆ	

ವ್ಯವಸಾಯ ಕೆಲಸಗಳು—ರಾಗಿ, ಜೋಳ, ಅವರೆ, ಇವುಗಳ ಬಿತ್ತನೆ.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಬಿತ್ತುವದಕ್ಕಾಗಿ ಭೂಮಿಯನ್ನು ತಯಾರುಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಉಳುವುದು ಇನ್ನೂ ನಡಿಯುತ್ತಲಿದೆ.

ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಕೆಲವು ಭಾಗಗಳಲ್ಲಿ ಅವರೆ, ರಾಗಿ, ಪುಣಜೆ ಭತ್ತ, ಎಳ್ಳು, ಇವುಗಳು ಬಿತ್ತಲ್ಪಟ್ಟವೆಯೆಂದು ರಿಪೋರ್ಟಾಗಿವೆ.

ಕುಯ್ಯಲಾದ ಪೈರು—ಹೊಸಕೋಟೆ, ದೇವನಹಳ್ಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ವೈಶಾಖಿ ಭತ್ತವು ಕುಯ್ಯಲಾಗಿದೆಯೆಂದು ರಿಪೋರ್ಟಾಗಿದೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕು.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹೊಸಕೋಟೆ ತಾಲ್ಲೂಕಿನಲ್ಲಿ ಓರೋಹಳ್ಳಿಯಿಂದ 3 ಕಾಲರಾ ಕೇಸುಗಳು ರಿಪೋರ್ಟಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಉಳುವದು ಮುಗಿಯುತ್ತಾ ಬಂದಿದೆ.

ನಿಂತಿರುವ ಪೈರುಗಳ ಸ್ಥಿತಿಯು ಚೆನ್ನಾಗಿದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಕೋಲಾರ, ಬೌರಿಂಗ್‌ಪೇಟೆ, ಮಾಲೂರು, ಈ ತಾಲ್ಲೂಕುಗಳಲ್ಲಿ ಕಾರ್ತೀಕ ಭತ್ತ; ಬೌರಿಂಗ್‌ಪೇಟೆ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗೋರೀಬಿದನೂರು, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ರಾಗಿ; ಚಿಂತಾಮಣಿ ತಾಲ್ಲೂಕಿನಲ್ಲಿ ಬಲ್ಲರ್; ಮುಳಬಾಗಲು, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ಸಾವೆ; ಮುಳಬಾಗಲು, ಬಾಗೇಪಲ್ಲಿ, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ಹಾರಕ; ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೋರೀಬಿದನೂರು, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ಅವರೆ.

ಕುಯ್ಯಲಾದ ಪೈರುಗಳು—ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೋರೀಬಿದನೂರು, ಶ್ರೀನಿವಾಸಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ವೈಶಾಖಿ ಭತ್ತ.

ವೈಶಾಖಿಭತ್ತದ ಆಗಬಹುದಾದ ಉತ್ಪತ್ತಿ—8 ಆಣೆಯಿಂದ 12 ಆಣೆ ವರೆಗೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಬೌರಿಂಗ್‌ಪೇಟೆ ತಾಲ್ಲೂಕಿನ ರಾಬರ್ಟ್ಸನ್ ಪೇಟೆ, ಮತ್ತು ಉರಿಗಂ ಇವುಗಳಲ್ಲಿ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಉಳುವದು ಮತ್ತು ಬಿತ್ತುವದು.

ನಿಂತಿರುವ ಪೈರುಗಳ ಸ್ಥಿತಿಯು ಚೆನ್ನಾಗಿದೆ, ಆದರೆ, ಮದ್ದಗಿರಿ, ಶಿರ್‍ಯ, ತಿಪಟೂರು, ಪಾವಗಡ, ಇವುಗಳ ಕೆಲವು ಭಾಗಗಳಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ.

ಬಿತ್ತನೆಯಾದ ಪೈರುಗಳು—ಮದ್ದಗಿರಿ, ಗುಬ್ಬಿ, ತಿಪಟೂರು, ತುರುವೇಕೆರೆ, ಇವುಗಳಲ್ಲಿ ಭತ್ತ; ಮದ್ದಗಿರಿ, ಚಿಕ್ಕನಾಯಕನಹಳ್ಳಿ, ತಿಪಟೂರು, ಕೊರಟಗೆರೆ, ಇವುಗಳಲ್ಲಿ ರಾಗಿ; ಮದ್ದಗಿರಿ, ಗುಬ್ಬಿ, ತಿಪಟೂರು, ಇವುಗಳಲ್ಲಿ ಜೋಳ; ಚಿಕ್ಕನಾಯಕನಹಳ್ಳಿ, ಮದ್ದಗಿರಿ, ಇವುಗಳಲ್ಲಿ ಅವರೆ; ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಗುಬ್ಬಿ, ಕೊರಟಗೆರೆ, ಇವುಗಳಲ್ಲಿ ಹರಳು; ಮದ್ದಗಿರಿ, ಚಿಕ್ಕನಾಯಕನಹಳ್ಳಿ, ಇವುಗಳಲ್ಲಿ ತೊಗರಿ; ಮದ್ದಗಿರಿ, ಗುಬ್ಬಿ, ಕೊರಟಗೆರೆ, ಇವುಗಳಲ್ಲಿ ಹಾರಕ; ಗುಬ್ಬಿಯಲ್ಲಿ ನೆಲಗಡಲೇಕಾಯಿ; ಪಾವಗಡದಲ್ಲಿ ನವಣೆ, ಸಜ್ಜೆ, ಮತ್ತು ತೊಗರಿ, ಹೆಸರು, ಮುಂತಾದ ಬೆಳೆಯ ಧಾನ್ಯಗಳು; ಕುಣಿಗಲ್ಲು ಮತ್ತು ತುರುವೇಕೆರೆ, ಇವುಗಳಲ್ಲಿ ಹುಚ್ಚೆಳ್ಳು; ಮದ್ದಗಿರಿಯಲ್ಲಿ ಸಾವೆ; ಮದ್ದಗಿರಿ ಮತ್ತು ತಿಪಟೂರು, ಇವುಗಳಲ್ಲಿ ಹುರುಳಿ, ಕಡಲೆ ಮುಂತಾದವುಗಳು.

ಮೈಸೂರ ಗೆಜೆಟ್.

147/25

[ನಂ. 42.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 29.]

ಬೆಂಗಳೂರು, ಗುರುವಾರ, ಜುಲೈ ತಾ॥ 18, ಸನ್ 1907.

IVನೆ ಭಾಗ.

ಸರ್ಕಾರಿ ಕಾಗದ ಪತ್ರಗಳು.

1907ನೆಯ ವರ್ಷದ 27ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ.

(1907ನೆಯ ವರ್ಷದ ಜುಲೈ 6ನೆಯ ತಾರೀಖು).

ಡಿಸ್ಟ್ರಿಕ್ಟು ಮತ್ತು ಸ್ಥಳ.		ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ.										ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯಗಳ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
ಬಿತ್ತನೆಯಾದ ಪೈರು—ಚನ್ನರಾಯಪಟ್ಣ ಮತ್ತು ಹೊಳೇನರಸೀಪುರ, ಈ ತಾಲ್ಲೂಕುಗಳಲ್ಲಿ ಹುರುಳಿಯನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಚನ್ನರಾಯಪಟ್ಣದ ತಾಲ್ಲೂಕಿನಲ್ಲಿ ಕಾರಿಭತ್ತ, ಕಬ್ಬು, ಹುಚ್ಚೆಳ್ಳು, ಮತ್ತು ಜೋಳ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಹಾಸನ ಮತ್ತು ಬೇಲೂರು ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗು, ಮತ್ತು ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಛಳೀ ಜ್ವರವು, ಇವುಗಳು ಇರುವುದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಮೇವೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಶಿವಮೊಗ್ಗ, ಸಾಗರ, ನಗರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಳೆ ಕೀಳುವ ಕೆಲಸಗಳು ನಡಿಯುತ್ತಿವೆ. ನಗರ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತದ ಸಸಿಗಳನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಯಾವವೆಂದರೆ, ಭತ್ತ, ರಾಗಿ, ಜೋಳ, ಕಬ್ಬು, ಇವುಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ ಒಳ್ಳೇ ಸ್ಥಿತಿಯಲ್ಲಿವೆ. ಮಲನಾಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅಡಿಕೆ ಫಸಲಿಗೆ "ಕೊಳೇ" ರೋಗವು ಹಿಡಿದು ಇದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹೊನ್ನಾಳಿ ತಾಲ್ಲೂಕು ಮತ್ತು ಕುಂಸಿ ಸಬ್ ತಾಲ್ಲೂಕು ಇವುಗಳ ಕೆಲವು ಭಾಗಗಳಲ್ಲಿ ಸಿಡುಬೂ ಮತ್ತು ಹೊನ್ನಾಳಿ ಹೋಬಳಿಯ ಕೆಲವು ಭಾಗಗಳಲ್ಲಿ ಜ್ವರವೂ ಇವು ಇರುತ್ತವೆ. ಚನ್ನಗಿರಿ ಮತ್ತು ಸಾಗರದ ತಾಲ್ಲೂಕುಗಳಲ್ಲಿ ಸಿಡುಬು ಗುಣಮುಖವಾಗಿದೆ. ಹೊನ್ನಾಳಿ ತಾಲ್ಲೂಕು ಮತ್ತು ಕುಂಸಿ ಸಬ್ ತಾಲ್ಲೂಕು ಇವುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇನ್ನೂ ಇರುತ್ತಿದೆ; ಮತ್ತು ಶಿವಮೊಗ್ಗ ಕಸಬಾದಲ್ಲಿ ಷರೂ ಆಗಿ ಇದೆ.

12. ಹುಲ್ಲೂ, ಮೇವೂ ಸಾಕಾದಷ್ಟು ಇವೆ. ನಗರದ ತಾಲ್ಲೂಕು ವಿನಹಾ ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಗೋಮಾರೀರೋಗವು ಇರುತ್ತಲಿದೆ. ನಗರದ ತಾಲ್ಲೂಕಿನಲ್ಲಿ ಅದು ಶಮನವಾಗಿದೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಮೂಡಿಗೆರೆ, ಎಡೇಹಳ್ಳಿ, ಕೊಪ್ಪ, ಈ ತಾಲ್ಲೂಕುಗಳಲ್ಲಿ ಭತ್ತದ ನಾಟಿ
ಮಾಡುತ್ತಿದ್ದಾರೆ.

ನಿಂತಿರುವ ಪೈರುಗಳು—ಚಿಕ್ಕಮಗಳೂರಿನಲ್ಲಿ ಕಬ್ಬು, ಭತ್ತ, ರಾಗಿ, ತೊಗರಿ ಮತ್ತು ಅವರೆ; ಮೂ
ತ್ತ ಮತ್ತು ರಾಗಿ; ಎಡೇಹಳ್ಳಿಯಲ್ಲಿ ಕಬ್ಬು, ಕಾಫಿ ಮತ್ತು ಭತ್ತ; ಶೃಂಗೇರಿಯಲ್ಲಿ ಅಡಿಕೆ; ಕ
ಕಬ್ಬು, ಜೋಳ, ರಾಗಿ, ಹುರುಳಿ, ಅವರೆ, ತೊಗರಿ, ಉದ್ದು, ಹೆಸರು, ಧನಿಯ, ಹುಚ್ಚೆಳ್ಳು, ಹ
ಮತ್ತು ಮೆಣಸಿನಕಾಯಿ; ತರೀಕೆರೆಯಲ್ಲಿ ಭತ್ತ, ಕಬ್ಬು, ರಾಗಿ, ಜೋಳ, ಉದ್ದು, ಹೆಸರು
ಸಿನಕಾಯಿ; ಕೊಪ್ಪದಲ್ಲಿ ಭತ್ತ, ಕಬ್ಬು, ಅಡಿಕೆ ಮತ್ತು ಕಾಫಿ; ಇವುಗಳೆಲ್ಲಾ ಒಳ್ಳೆ ಸ್ಥಿತಿಯ
ಲ್ಲೂ ಮತ್ತು ಶೃಂಗೇರಿಯಲ್ಲಿಯೂ ಅಡಿಕೆ ಫಸಲಿಗೆ "ಕೊಳೆರೋಗವು" ಹಿಡಿದು ಕೆಟ್ಟುಹೋಯಿತು
ಚಿಕ್ಕಮಗಳೂರು, ಮೂಡಿಗೆರೆ, ಇವುಗಳಲ್ಲಿ ಹೆಚ್ಚಾಗಿ ಆದ ಮಳೆಯಿಂದ ರಾಗಿಯು ಸ್ವಲ್ಪ ಕೆಟ್ಟ
ಟ್ಟಾಗಿದೆ.

ಬಿತ್ತನೆಯಾದ ಪೈರುಗಳು—ಮೂಡಿಗೆರೆ, ಎಡೇಹಳ್ಳಿ, ಕೊಪ್ಪ, ಇವುಗಳಲ್ಲಿ ಭತ್ತ, ಮತ್ತು ತರೀಕೆರೆಯ
ಗಳಲ್ಲಿ ರಾಗಿ.

ಕುಯ್ಯಲಾದ ಪೈರುಗಳು—ಚಿಕ್ಕಮಗಳೂರಿನಲ್ಲಿ ರಾಗಿ; ಕಡೂರಿನಲ್ಲಿ ಕಬ್ಬು ಮತ್ತು ಭತ್ತ; ಕೊ

ಕೆಲವು ಭಾಗಗಳಲ್ಲಿ ಯಾಲಕ್ಕಿ—ಇವುಗಳು ಎಲ್ಲವೂ ಸ್ವಲ್ಪವಾಗಿಯೇ ಆಗಿದೆ.

10. ಕಾಲದ ಆಮತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕು.

11. ಕಸಬಾ ಚಿಕ್ಕಮಗಳೂರಿನಲ್ಲಿ ಪ್ಲೇಗ್ ಇರುವದು ಹೊರತು, ಜನಾರೋಗ್ಯವು ಸಾಧಾರಣವಾಗಿ ಚೆನ್

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ತರೀಕೆರೆ, ಚಿಕ್ಕಮಗಳೂ
ಇವುಗಳಲ್ಲಿ "ದೊಡ್ಡ ರೋಗವು" ಇಳಿಮುಖದಲ್ಲಿದೆಯೆಂದು ರಿಪೋರ್ಟಾಗಿದೆ; ಆದರೆ, ಅದು ಮೂಡಿಗೆರೆ ತಾಲ್ಲೂ
ಮುದಲ್ಲಿ ಶುರೂ ಆಗಿದೆಯೆಂದೂ, ಮತ್ತು ಕ್ಯಾಟಲ್ ಡಿಸೀಜ್ ಇನ್ಸ್‌ಪೆಕ್ಟರವರಿಂದ ಬಂದ ಚಿಕಿತ್ಸಾ ವಿಧಾನಗಳ ಪ್ರ
ಔಷಧಗಳು ಕೊಡಲ್ಪಡುತ್ತಿವೆಯೆಂದೂ, ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ಜೋಳ, ರಾಗಿ, ಹುರುಳಿ, ಹೆಸರು, ಉದ್ದು, ಅರಳಿ,
ನವಣೆ, ಭತ್ತ, ಹೊಗೆಸೊಪ್ಪು, ಕಬ್ಬು, ಇವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಆದರೆ,
ದೇವನಗೆರೆ ತಾಲ್ಲೂಕುಗಳಲ್ಲಿ ಮಳೆಯು ಬೇಕಾಗಿದೆ.

ಬಿತ್ತನೆಯಾದ ಪೈರುಗಳು—ದೇವನಗೆರೆ ತಾಲ್ಲೂಕಿನಲ್ಲಿ ಅರಳಿ ಮತ್ತು ನವಣೆ. ಮೊಳಕಾಲ್ಮು
ಭತ್ತ ಮತ್ತು ಹುರುಳಿ.

ಕುಯ್ಯಲಾದ ಪೈರು—ಏನೂ ಇಲ್ಲ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಸೆಪ್ಟೆಂಬರ 2ನೆಯ ತಾರೀಖು.

ಎ. ರಂಗಸ್ವಾಮಿ
ರಿ

ಮೈಸೂರ ಗೆಜೆಟ್.

204
754

ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ|| 19, ಸನ್ 1907.

IVನೆ ಭಾಗ.

ಸರ್ಕಾರಿ ಕಾಗದ ಪತ್ರಗಳು.

...ವರ್ಷದ 36ನೆಯ ಶನಿವಾರಕ್ಕೆ ಮುಗಿದ ಒಂದು ವಾರದ ಸೀಸನ್ ರಿಪೋರ್ಟು ಯಾ ಕಾಲಗತಿಯನ್ನು ತೋರಿಸುವ ವರದಿ (1907ನೆಯ ವರ್ಷದ ಸೆಪ್ಟೆಂಬರ್ 7ನೆಯ ತಾರೀಖು).

...ಮತ್ತು ಸ್ಥಳ.	ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇ ವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (—)ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧ... ಧಾರಣೆಯಿತ್ತು ಎಂಬುದು ಮತ್ತು ಬೆ... ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗ...			
1	2		3		4		5		6		7			
	I.	c.	I.	c	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ವಷ್ಟ...
...ರು ದಂಡು	...	95	...	...	17	97	...	...	...	...				
...ತ್ತು ತಾಲ್ಲೂಕು	...	38	2	84	23	7	20	88	+ 2	19				
[illegible]	....	13	1	74	16	86	18	35	— 1	49				
[illegible]	...	8	2	3	13	53	18	63	— 5	10				
[illegible]	...	10	2	57	13	76	18	88	— 5	12				
[illegible]	1	57	1	74	17	34	18	16	— 0	82				
[illegible]	...	65	2	84	23	85	17	96	+ 5	89	ಅಕ್ಕಿ ದುಯಂ ತರಹ	7·00	7·00	8
[illegible]	2	20	2	47	21	15	19	30	+ 1	85				
[illegible]	1	85	2	8	22	11	21	93	+ 0	18	ರಾಗಿ	15·00	15·00	1
[illegible]	...	13	1	98	16	61	18	57	— 1	96	ಹುರುಳಿ	12·50	12·50	..
[illegible]	1	22	2	27	20	55	19	52	+ 1	3	ಕಡಲೆ	9·00	9·00	9
...ಸರಾಸರಿ	...	83	2	26	18	88	19	22	— 0	34				
[illegible]	...	...	1	17	15	4	14	32	+ 0	72	ಅಕ್ಕಿ ದುಯಂ ತರಹ	7·00	7·00	8
[illegible]	...	11	1	48	10	28	16	15	— 5	87				
[illegible]	...	59	1	2	17	12	12	58	+ 4	54	ರಾಗಿ	15·00	16·00	18
[illegible]	..	15	1	40	16	81	17	19	— 0	38	ಹುರುಳಿ	14·00	14·00	..
[illegible]	...	60	1	36	16	65	16	40	+ 0	25	ಕಡಲೆ	9·50	9·00	8
[illegible]	...	25	1	75	15	74	20	72	— 4	98				
[illegible]	...	24	1	48	18	7	12	50	+ 5	57				
[illegible]	...	87	1	51	14	13	15	48	— 1	35				
[illegible]	...	4	1	20	13	58	17	38	— 3	75				
[illegible]	...	20	1	19	16	90	17	36	— 0	46				
[illegible]	...	96	1	86	16	23	18	28	— 2	...				
...ಸರಾಸರಿ	...	36	1	40	15	50	16	20	— 0	70				

ಡಿಸ್ಟ್ರಿಕ್ಟು ಮತ್ತು ಸ್ಥಳ.		ಶನಿವಾರ ಬೆಳಿಗ್ಯೆ 8 ಘಂಟೆಯ್ತು ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದ್ದಿನ ಹತ್ತು ವರ್ಷಗಳ ಸರಾಸರಿ.		1907ನೆಯು ವರ್ಷದ ಜನವರಿ 1ನೆಯು ತಾರೀಖಿನಿಂದ ಈ ವಾರದ ಕೋನೆಯು ವರೆಗೆ: ಈ ವರ್ಷ.		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯು ಮದ್ದದ ಹೆಚ್ಚು (+) ಕಡಮೆ (—) ಯನ್ನು 5ನೆಯು ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಬಂದಕ್ಕೆ ಎಷ್ಟು ಸೇರಿನಂತ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.			
1		2		3		4		5		6		7			
		I.	c.	I.	c.	I.	c.	I.	c.	I.	c.		ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಬಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು.
ತುಮಕೂರು	ತುಮಕೂರು ...	...	21	1	45	22	32	19	12	+ 3	20				
	ಮದ್ದಗಿರಿ ...	...	30	1	98	10	78	13	8	— 2	30				
	ಚಿಕ್ಕನಾಯಕನಹಳ್ಳಿ ...	...	20	1	6	12	97	15	29	— 2	32				
	ಸೀರ ...	...	63	...	77	8	60	11	10	— 2	50				
	ಗುಬ್ಬಿ ...	...	25	1	29	15	31	13	86	+ 1	45				
	ತಿಪಟೂರು ...	...	52	1	20	9	44	13	71	— 4	27				
	ಪಾವಗಡ ...	...	68	1	74	7	49	11	29	— 3	80	ಅಕ್ಕಿ ದುಯಂ ಹತರ	8·00	8·00	8·81
	ಕುಣಿಗಲು ...	..	66	1	39	14	62	14	77	— 0	15				
	ಕೊರಟಗೆರೆ ...	...	...	...	99	15	28	11	94	+ 3	34	ರಾಗಿ	16·00	16·00	22·90
	ತುರುವೇಕೆರೆ ...	...	30	1	24	13	27	12	58	+ 0	69	ಹುರುಳಿ	14·00	14·00	...
												ಕಡಲೆ	8·00	8·00	8·85
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	38	1	31	13	1	13	67	— 0	66				
ಮೈಸೂರು	ಮೈಸೂರು ...	...	22	...	12	12	94	15	65	— 2	71	ಅಕ್ಕಿ ದುಯಂ ತರಹ	7·50	7·50	9·13
	ಚಾಮರಾಜನಗರ ...	...	41	1	67	12	52	17	84	— 5	32				
	ಶ್ರೀರಂಗಪಟ್ಟಣ ...	...	...	1	16	17	30	13	35	+ 3	95	ರಾಗಿ	16·00	16·00	18·08
	ಹುಣಸೂರು ...	...	28	1	26	19	50	19	1	+ 0	49	ಹುರುಳಿ	16·00	16·00	...
	ಯಡತೊರೆ ...	...	...	...	72	12	32	13	61	— 1	29	ಕಡಲೆ	8·50	8·50	9·62
	ಹೆಗ್ಗಡದೇವನಕೋಟೆ ...	...	45	1	40	24	14	23	70	+ 0	44				
	ಗುಂಡ್ಲುಪೇಟೆ ...	...	89	...	61	16	62	13	63	+ 2	99				
	ನಂಜನಗೂಡು ...	...	80	...	98	17	13	16	12	+ 1	1				
	ತಿ. ನರಸೀಪುರ ...	...	23	1	27	13	80	15	88	— 2	8				
	ಮಳವಳ್ಳಿ ...	1	...	1	1	13	97	14	58	— 0	61				
	ಮಂಡ್ಯ ...	...	35	1	7	18	17	14	20	+ 3	97				
	ಕೃಷ್ಣರಾಜಪೇಟೆ ...	...	10	1	45	14	...	14	98	— 0	98				
	ನಾಗಮಂಗಲ ...	1	19	1	18	10	54	10	33	+ 0	21				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	45	1	7	15	61	15	61	...	...				
ಹಾಸನ	ಹಾಸನ ...	...	54	...	96	24	70	20	84	+ 3	86	ಅಕ್ಕಿ ದುಯಂ ತರಹ	9·50	9·50	9·70
	ಮಂಜರಾಬಾದು (ಸಕಲೇಶಪುರ)	1	87	1	67	94	11	71	52	+ 22	59				
	ಅರಕಲಗೂಡು ...	...	17	...	67	24	9	23	56	+ 0	53	ರಾಗಿ	22·00	22·00	22·88
	ಬೇಲೂರು ...	...	15	1	8	29	99	27	1	+ 2	98	ಹುರುಳಿ	16·00	16·00	...
	ಚನ್ನರಾಯಪಟ್ಟಣ ...	...	14	...	85	9	23	14	9	— 4	86	ಕಡಲೆ	8·50	8·[illegible]	8·70
	ಅರಸೀಕೆರೆ ...	...	32	...	95	8	67	14	31	— 5	64				
	ಹೊಳೆನರಸೀಪುರ ...	...	...	...	37	17	23	15	12	+ 2	21				
	ಆಲೂರು ...	...	88	...	60	42	55	28	18	+ 14	37				
	ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	51	...	89	31	32	26	81	+ 4	51				

ಡಿಸ್ಟ್ರಿಕ್ಟು ಮತ್ತು ಸ್ಥಳ.	ಶನಿವಾರ ಬೆಳಿಗ್ಗೆ 8 ಘಂಟೆಯ ವರೆಗೆ ಬಿದ್ದ ಮಳೆ. ಈ ವಾರ.		ಇದೇವಾರಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ.		1907ನೆಯ ವರ್ಷದ ಜನವರಿ 1ನೆಯ ತಾರೀಖಿನಿಂದ ಈ ವಾರದ ಕೊನೆಯ ವರೆಗೆ. ಈ ವರ್ಷ		ಹಿಂದಿನ ಹತ್ತು ವರ್ಷಗಳ ಸರಾಸರಿ.		4ನೆಯ ಮದ್ದದ ಹೆಚ್ಚು (+) ಕಡಮೆ (−) ಯನ್ನು 5ನೆಯ ಮದ್ದದೊಂದಿಗೆ ಹೋಲಿಸಿದ ಲೆಕ್ಕ.		ರೂಪಾಯಿ ಒಂದಕ್ಕೆ ಎಷ್ಟು ಸೇರಿನಂತೆ ಧಾನ್ಯದ ಧಾರಣೆಯಿತ್ತು ಎಂಬುದು ಮತ್ತು ಬಜಾರಿನಲ್ಲಿ ಧಾನ್ಯಗಳ ಧಾರಣೆಗಳ ಹೆಚ್ಚು ಕಡಮೆಗಳು.	ಈ ವಾರ ಸೇರುಗಳು	ಕಳೆದ ವಾರ ಸೇರುಗಳು	ಪಕ್ಷ ಬಂದಕ್ಕೆ ಹಿಂದಿನ ಹತ್ತು ವರ್ಷಗಳ ಸರಾಸರಿ; ಸೇರುಗಳು
1	2		3		4		5		6		7			
	l.	c.	l.	c.	l.	c.	l.	c.	l.	c.				
ಶಿವಮೊಗ್ಗ ...	1	52	...	57	31	14	25	66	+ 5	48				
ಚನ್ನಗಿರಿ ...	1	26	...	57	21	26	17	40	+ 3	86				
ಹೊನ್ನಾಳಿ ...	...	51	...	43	11	95	15	64	− 3	69				
ಶಿಕಾರಿಪುರ ...	1	26	...	92	31	12	30	49	+ 0	63				
ಸೊರಬ ...	1	15	1	43	57	97	45	9	+ 12	88				
ಸಾಗರ ...	2	31	1	46	88	70	65	46	+ 23	24				
ನಗರ (ಕಲ್ಲೂರುಕಟ್ಟೆ) ...	1	40	1	59	119	29	81	70	+ 37	59	ಅಕ್ಕಿ ದುಯುಂ	8·00	8·00	11·02
ತೀರ್ಥಹಳ್ಳಿ ...	2	39	2	54	135	2	101	18	+ 33	84	ತರಹ			
ಕುಂಸಿ ...	1	10	1	16	40	12	30	66	+ 9	46	ರಾಗಿ	20·00	20·00	25·07
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	1	43	1	18	59	62	45	92	+ 13	70	ಹುರುಳಿ	13·50	13·50	...
ಚಿಕ್ಕಮಗಳೂರು ...	...	4	...	46	22	85	21	62	+ 1	23	ಅಕ್ಕಿ ದುಯುಂ	9·00	9·00	9·40
ಕಡೂರು ...	...	9	...	31	13	35	11	77	+ 1	58	ತರಹ			
ತರೀಕೆರೆ ...	1	74	...	78	25	71	24	88	+ 0	83	ರಾಗಿ	20·00	20·00	21·10
ಕೊಪ್ಪ ...	2	43	2	44	147	89	103	71	+ 44	18	ಹುರುಳಿ	13·00	12·00	...
ಮೂಡಿಗೆರೆ ...	1	27	1	85	100	12	72	99	+ 27	13	ಕಡಲೆ	8·00	8·00	8·60
ಯಡೆಹಳ್ಳಿ ...	1	45	1	71	79	74	51	36	+ 28	38				
ಶೃಂಗೇರಿ ...	4	71	3	59	178	17	124	17	+ 54	...				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	1	67	1	59	81	12	58	64	+ 22	48				
ಚಿತ್ರದುರ್ಗ ...	...	48	...	74	12	13	13	14	− 1	1	ಅಕ್ಕಿ ದುಯುಂ	8·00	8·00	10·15
ಚಳ್ಳಕೆರೆ ...	...	2	...	87	8	...	7	94	+ 0	6	ತರಹ			
ಹಿರಿಯೂರು ...	...	30	...	93	11	77	9	66	+ 2	11	ರಾಗಿ	20·00	19·00	21·50
ಹೊಳಲ್ಕೆರೆ ...	1	9	...	55	16	12	13	58	+ 2	54	ಹುರುಳಿ	16·00	16·00	...
ದಾವಣಗೆರೆ ...	1	4	...	91	13	74	15	70	− 1	96	ಜೋಳ	19·00	18·00	9·50
ಮೊಳಕಾಲ್ಮುರು ...	1	25	1	18	10	72	11	80	− 1	8	ಕಡಲೆ	8·00	8·00	20·00
ಜಗಳೂರು ...	...	38	1	30	9	55	13	51	− 3	96				
ಹೊಸದುರ್ಗ ...	...	30	...	58	11	47	11	76	− 0	29				
ಹರಿಹರ ...	1	4	...	59	13	13	11	96	+ 1	17				
ಡಿಸ್ಟ್ರಿಕ್ಟಿನಲ್ಲಿ ಸರಾಸರಿ ...	...	65	...	85	11	85	12	12	− 0	27				
ಸಂಸ್ಥಾನದಲ್ಲಿ ಸರಾಸರಿ ...	...	78	1	32	30	86	26	2	+ 4	84				

ಡಿಸ್ಟ್ರಿಕ್ಟು ರಿಪೋರ್ಟುಗಳು.

8. ಬಜಾರಿನಲ್ಲಿ ಸರಬರಾಯಿ ಹ್ಯಾಗಿದೆ.

9. ವ್ಯವಸಾಯದ ಕಾರ್ಯದ ಅಭಿವೃದ್ಧಿ, ನಿಂತಿರುವ ಪೈರುಗಳ ಸ್ಥಿತಿ, ಬೆಳೆಗಳು ಎಷ್ಟಾಗಬಹುದೆಂಬ ನಿರೀಕ್ಷೆ, ಮತ್ತು ಸುಗ್ಗಿಯ ಕಾಲದಲ್ಲಿ ಉಂಟಾಗಬಹುದಾದ ಹುಟ್ಟುವಳಿ, ಹುಳುಗಳು ಅಥವಾ ಸ್ವಾಭಾವಿಕವಾದ ಇತರ ವಿಪತ್ತುಗಳಿಂದ ಪೈರುಗಳಿಗೆ ಉಂಟಾದ ನಷ್ಟ.

10. ಕಾಲದ ಆಯತಿ, ಮಳೆಯು ಸಾಲದೆ ಇರುವ ಪ್ರದೇಶಗಳು, ದುರ್ಭಿಕ್ಷ ವುಂಟಾಗಿರುವ ಸ್ಥಳಗಳು, ರಿಲೀಫ್ ಯಾ ಸಹಾಯವನ್ನು ಪಡೆಯುತ್ತಿರುವ ಜನರ ಸಂಖ್ಯೆ, ಮತ್ತು ಆಹಾರ ಸಾಮಗ್ರಿಯ ಸ್ಥಿತಿ.

11. ಜನಗಳ ಆರೋಗ್ಯ.

12. ವ್ಯವಸಾಯಕ್ಕೆ ಸಂಬಂಧಿಸುವ ಮಾಲುಗಳು, ದನಗಳಿಗೆ ಮೇಯುವುದಕ್ಕೆ ಹುಲ್ಲುಕಾವಲು ಇಲ್ಲದೇ ಹೋಗುವುದು, ಮೇವು ಮುಂತಾದುವುಗಳ ವಿಷಯವಾಗಿ ವರಾಗಳು.

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು:—

	ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜಾ.	ಚಾಲ್ತಿ.		
ಅಕ್ಕಿ ರೂಪಾಯಿ 1ಕ್ಕೆ	7	6 ರಿಂದ	$6\frac{1}{4}$ರ ವರಿಗೆ	ಸೇರುಗಳು.
ರಾಗಿ ,, ...	$18\frac{3}{4}$	14 ರಿಂದ	15ರ ವರಿಗೆ	

ವ್ಯವಸಾಯು ಕೆಲಸ—ರಾಗಿ ಪೈರುಗಳ ಕಳೇಕೀಳುವದು.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ನಿಂತಿರುವ ಪೈರುಗಳು ಒಳ್ಳೇಸ್ಥಿತಿಯಲ್ಲಿವೆ. ಡಿಸ್ಟ್ರಿಕ್ಟಿನಲ್ಲೆಲ್ಲಾ ಮಳೆ ಇಲ್ಲದ್ದರಿಂದ ಬಹಳ ಕಷ್ಟವಾಗಿದೆ.

ಬಿತ್ತನೆಯಾದ ಪೈರು—ಹೊಸಕೋಟೆ ತಾಲ್ಲೂಕಿನಲ್ಲಿ ಹುರುಳಿಯನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು – ಹೊಸಕೋಟೆ ತಾಲ್ಲೂಕಿನಲ್ಲಿ ಆಲೂ ಗೆಡ್ಡೆಯನ್ನೂ, ಮಾಗಡಿ ತಾಲ್ಲೂಕಿನಲ್ಲಿ ಹುಚ್ಚೆಳ್ಳನ್ನೂ, ಕುಯ್ಯುತ್ತಿದ್ದಾರೆ.

10. ಕಾಲದ ಆಯುತಿಯು ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸಿ ಇವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಕಸಬಾ ಕಾರ್ಕಾಹಳ್ಳಿ, ಆನೇಕಲ್, ದೇವನಹಳ್ಳಿ, ಚನ್ನಪಟ್ಣ, ಇವುಗಳಲ್ಲಿಯೂ ಮತ್ತು ದೊಡ್ಡಬಳ್ಳಾಪುರದ ತಾಲ್ಲೂಕು ನಾಗೇನಹಳ್ಳಿ, ಗುಳ್ಯ, ನಲ್ಲನಹಳ್ಳಿಗಳಲ್ಲಿಯೂ ಮತ್ತು ನೆಲಮಂಗಲದ ತಾಲ್ಲೂಕು ಬೀರಗೊಂಡಹಳ್ಳಿ, ದೊಡ್ಡಬೆಲೆ, ಇವುಗಳಲ್ಲಿಯೂ, ಪ್ಲೇಗ್ ಇರುತ್ತಲಿದೆ

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಮಳೇ ಇಲ್ಲದ್ದರಿಂದ ಕುಷ್ಕೀ ಪೈರುಗಳು ಒಣಗಿ ಹೋಗುತ್ತಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಬಾಗೇಪಲ್ಲಿಯಲ್ಲಿ ಭತ್ತವೂ, ಗುಡಿಬಂಡೆಯಲ್ಲಿ ಹುರುಳಿಯೂ, ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯುತಿಯು ಸುಮಾರಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ. ಬಿತ್ತಿರುವ ಕುಷ್ಕೀ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆ.

11. ಕೋಲಾರದ ಚಿನ್ನದ ಗಣಿಯಲ್ಲಿಯೂ, ಬೌರಿಂಗ್‌ಪೇಟೆ ತಾಲ್ಲೂಕು ಕೆಲವು ಗ್ರಾಮಗಳಲ್ಲಿಯೂ ಮತ್ತು ಕಸಬಾ ಕೋಲಾರದಲ್ಲಿಯೂ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಉಳುವದೂ ಮತ್ತು ಬಿತ್ತುವದೂ.

ಬಿತ್ತನೆಯಾದ ಪೈರುಗಳು—ತುಮಕೂರು, ಮದ್ದಗಿರಿ, ತಿಪಟೂರು, ಪಾವಗಡ, ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ರಾಗಿ ; ಮದ್ದಗಿರಿ, ಚಿಕ್ಕನಾಯ್ಕನಹಳ್ಳಿ, ಸೀರ, ಗುಬ್ಬಿ, ಪಾವಗಡ, ಕುಣಿಗಲ್ಲು, ಇವುಗಳಲ್ಲಿ ಹುರುಳಿ ; ಮದ್ದಗಿರಿಯಲ್ಲಿ ನವಣೆ ; ಚಿಕ್ಕನಾಯ್ಕನಹಳ್ಳಿಯಲ್ಲಿ ಜೋಳ ಮತ್ತು ಕಡಲೆ ; ಗುಬ್ಬಿ, ತಿಪಟೂರು, ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ಅವರೆ, ತೊಗರಿ ಮತ್ತು ಹರಳು.

ಕುಯ್ಯಲಾದ ಪೈರುಗಳು—ಗುಬ್ಬಿ, ಕುಣಿಗಲ್ಲು, ತುರುವೇಕೆರೆ, ಇವುಗಳಲ್ಲಿ ಭತ್ತ ಮತ್ತು ಕಬ್ಬು ; ತಿಪಟೂರಿನಲ್ಲಿ ಉದ್ದು, ಹೆಸರು ಮತ್ತು ಎಳ್ಳು ; ಪಾವಗಡದಲ್ಲಿ ರಾಗಿ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ. ಬಿತ್ತಿ ಇರುವ ಪೈರುಗಳಿಗೆ ಮಳೆಯು ಬೇಕಾಗಿ ಇದೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಪಾವಗಡದ ತಾಲ್ಲೂಕು ಗೌಡತಿ ಗ್ರಾಮದಲ್ಲಿ ಕಾಲರಾ ಇತ್ತು.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಾಕು.

756 - 208

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಶ್ರೀರಂಗಪಟ್ಣ, ಹೆಗ್ಗಡದೇವನಕೋಟೆ, ನಂಜನಗೂಡು ಮಳವಳ್ಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಮೈಸೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕುಷ್ಕೀ ಪೈರುಗಳು ಒಣಗುತ್ತಿವೆಯೆಂದು ರಿಪೋರ್ಟಾಗಿರುವದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ನಿಂತಿರುವ ಪೈರುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಎಡತೊರೆ, ಗುಂಡ್ಲು ಪೇಟೆ, ನಂಜನಗೂಡು, ಟಿ. ನರಸೀಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಹುರುಳಿ ; ಎಡತೊರೆ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ ; ಗುಂಡ್ಲು ಪೇಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಉದ್ದು ಮತ್ತು ಹೆಸರು ; ಇವುಗಳು ಬಿತ್ತಲ್ಪಡುತ್ತಿವೆ.

ಕುಯ್ಯಲಾದ ಪೈರುಗಳು—ಎಡತೊರೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಾರ್ ಭತ್ತ ; ಹುಣಸೂರು, ಹೆಗ್ಗಡದೇವನ ಕೋಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ ; ಎಡತೊರೆ, ಗುಂಡ್ಲು ಪೇಟೆ, ಹೊಳೆನರಸೀಪುರ ... ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಜೋಳ ; ಹುಣಸೂರು ಮತ್ತು ಹೆಗ್ಗಡದೇವನ ಕೋಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಎಳ್ಳು ; ಇವುಗಳು ಕುಯ್ಯಲಾಗುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಮೈಸೂರು, ಗುಂಡ್ಲು ಪೇಟೆ, ನಂಜನಗೂಡು, ಮಳವಳ್ಳಿ, ಮಂಡ್ಯ, ಕೃಷ್ಣರಾಜಪೇಟೆ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ. ಆದರೆ, ಮೈಸೂರು, ಹುಣಸೂರು, ಮಂಜರಾಬಾದ್, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿಯೂ ಮತ್ತು ನಂಜನಗೂಡು, ಮತ್ತು ಮಂಡ್ಯ, ಈ ಕಸಬಾಗಳಲ್ಲಿಯೂ, ಪ್ಲೇಗು ಇರುತ್ತಲಿದೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ಎಲ್ಲಾ ಕಡೆಯಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಬೇಲೂರು ತಾಲ್ಲೂಕಿನಲ್ಲಿ ಕಳೆ ಕೀಳುತ್ತಿದ್ದಾರೆ. ಮಂಜರಾಬಾದ್ ತಾಲ್ಲೂಕಿನಲ್ಲಿ ಹೊಳೇ ಬಂದು ನೀರು ತುಂಬಿಕೊಂಡು ಪೈರು ನಷ್ಟವಾದ ಗದ್ದೆಗಳಲ್ಲಿ ಭತ್ತವನ್ನು ಪುನಃ ಬಿತ್ತುತ್ತಿದ್ದಾರೆ.

ನಿಂತಿರುವ ಪೈರುಗಳು—ಭತ್ತ, ರಾಗಿ, ಹರಳು, ಕಬ್ಬು, ತೊಗರಿ, ಮೆಣಸಿನಕಾಯಿ ಮುಂತಾದವುಗಳು ಒಳ್ಳೇ ಸ್ಥಿತಿಯಲ್ಲಿವೆ. ಅರಸೀಕೆರೆ, ಚನ್ನರಾಯಪಟ್ಣ, ಈ ತಾಲ್ಲೂಕುಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಬೇಕಾಗಿದೆ.

ಬಿತ್ತನೆ ಆದ ಪೈರು—ಅರಸೀಕೆರೆ ತಾಲ್ಲೂಕಿನಲ್ಲಿ ಹುರುಳಿಯನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಹಾಸನ, ಬೇಲೂರು, ಅರಕಲಗೂಡು, ಈ ತಾಲ್ಲೂಕುಗಳಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಗಿಡ್ಡರಾಗಿ ; ಚನ್ನರಾಯಪಟ್ಣದ ತಾಲ್ಲೂಕಿನಲ್ಲಿ ಕೆರೆಗಳ ಕೆಳಗೆ ಭತ್ತ, ರಾಗಿ ಮತ್ತು ಕಬ್ಬು ; ಇವುಗಳು ಕುಯ್ಯಲಾಗುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೆನಸಿ ಸಿಕ್ಕುತ್ತವೆ.

11. ಹಾಸನ, ಬೇಲೂರು, ಚನ್ನರಾಯಪಟ್ಣ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗು, ಮತ್ತು ಮಂಜರಾಬಾದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಛಳೀ ಜ್ವರವೂ ಮತ್ತು ಜ್ವರವೂ ಇವುಗಳು ಇರುವುದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಮೇವೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ಭತ್ತ, ರಾಗಿ, ಜೋಳ, ಕಬ್ಬು, ಇವುಗಳು ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಳ್ಳೇ ಸ್ಥಿತಿಯಲ್ಲಿವೆ. ಮಲನಾಡು ತಾಲ್ಲೂಕುಗಳಲ್ಲಿ ಅಡಿಕೇ ಫಸಲಿಗೆ "ಕೊಳೇ ರೋಗವು" ಹಿಡಿದು ಇದೆ.

ಬಿತ್ತನೆಯಾದ ಪೈರುಗಳು—ಹೊನ್ನಾಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ನವಣೆ, ಸಾವೆ, ಹುರುಳಿ, ಇವುಗಳನ್ನು ಬಿತ್ತುತ್ತಾ ಇದ್ದಾರೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಸಾಕಾದಷ್ಟು ಆಹಾರ ಜೆನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಶಿಕಾರಿಪುರ, ತೀರ್ಥಹಳ್ಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಸಿಡುಬು ಇರುತ್ತಲಿದೆ. ಹೊನ್ನಾಳಿ ತಾಲ್ಲೂಕಿನಲ್ಲಿಯೂ, ಕುಂಸಿ ಸಬ್ ತಾಲ್ಲೂಕಿನಲ್ಲಿಯೂ ಮತ್ತು ಶಿವಮೊಗ್ಗಾ ಕಸಬಾದಲ್ಲಿಯೂ ಪ್ಲೇಗ್ ಇರುತ್ತಲಿದೆ.

12. ಶಿವಮೊಗ್ಗ, ಹೊನ್ನಾಳಿ, ಸಾಗರ, ಇವುಗಳು ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಗೋಮಾರೀ ರೋಗವು ಇದ್ದುಕೊಂಡಿದೆ. ಹುಲ್ಲೂ, ಮೇವೂ ಸಿಕ್ಕುತ್ತಲಿವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ— ಚಿಕ್ಕ ಮಗಳೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿಯೂ ಮತ್ತು ಕೊಪ್ಪ, ಎಡೇಹಳ್ಳಿ, ಶೃಂಗೇರಿ, ಇವುಗಳಲ್ಲಿಯೂ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಚಿಕ್ಕ ಮಗಳೂರು, ತರೀಕೆರೆ, ಕೊಪ್ಪ, ಎಡೇಹಳ್ಳಿ, ಶೃಂಗೇರಿ, ಇವುಗಳಲ್ಲಿ ಭತ್ತ; ಚಿಕ್ಕ ಮಗಳೂರು, ಕಡೂರು, ತರೀಕೆರೆ, ಇವುಗಳಲ್ಲಿ ರಾಗಿ; ಚಿಕ್ಕ ಮಗಳೂರು ಮತ್ತು ಕಡೂರು, ಇವುಗಳಲ್ಲಿ ತೊಗರಿ ಮತ್ತು ಅವರೆ; ಕಡೂರು, ತರೀಕೆರೆ, ಇವುಗಳಲ್ಲಿ ಜೋಳ; ಕಡೂರಿನಲ್ಲಿ ಹುರುಳಿ, ಉದ್ದು, ಹೆಸರು, ಗೋಧಿ, ನವಣೆ, ಸಾವೆ ಮತ್ತು ಮೆಣಸಿನಕಾಯಿ; ಕೊಪ್ಪ, ಶೃಂಗೇರಿ, ಇವುಗಳಲ್ಲಿ ಅಡಿಕೆ; ಕೊಪ್ಪ, ಎಡೇಹಳ್ಳಿ, ಇವುಗಳಲ್ಲಿ ಕಾಫಿ ಮತ್ತು ಕಬ್ಬು; ಕೊಪ್ಪದಲ್ಲಿ ಯಾಲಕ್ಕಿ; ಇವುಗಳೆಲ್ಲಾ ಒಳ್ಳೆ ಸ್ಥಿತಿಯಲ್ಲಿವೆ. ಆದರೆ, ಶೃಂಗೇರಿ, ಕೊಪ್ಪ, ಇವುಗಳಲ್ಲಿ ಅಡಿಕೆ ಫಸಲಿಗೆ ಹತ್ತಿರುವ "ಕೊಳೇ" ರೋಗವು ಇನ್ನೂ ಇದ್ದುಕೊಂಡು ಇದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ರಾಗಿ ಉತ್ಪತ್ತಿ 8 ಆಣೆ; ಹುಚ್ಚೆಳ್ಳು ಉತ್ಪತ್ತಿ 4 ಆಣೆ—ಇವುಗಳು ಚಿಕ್ಕ ಮಗಳೂರಿನಲ್ಲಿ ಕಡೂರಿನಲ್ಲಿ ಧನಿಯಾ, ಕಬ್ಬು, ಭತ್ತ ಮತ್ತು ಹುಚ್ಚೆಳ್ಳು. ಕೊಪ್ಪದ ಕೆಲವು ಭಾಗಗಳಲ್ಲಿ ಸ್ವಲ್ಪಮಟ್ಟಿಗೆ ಯಾಲಕ್ಕಿ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಾಕು.

11. ಕಸಬಾ ಚಿಕ್ಕ ಮಗಳೂರಿನಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಶೃಂಗೇರಿ, ಚಿಕ್ಕ ಮಗಳೂರು, ತರೀಕೆರೆ, ಇವುಗಳಲ್ಲಿ "ದೊಡ್ಡ ರೋಗವು" ನಿಂತಿದೆಯೆಂದೂ ಮತ್ತು ಎಡೇಹಳ್ಳಿ ಸಬ್ ತಾಲ್ಲೂಕಿನ ಮೇಲಗದ್ದೆಯಲ್ಲಿ ಅದು ಇನ್ನೂ ಇರುತ್ತದೆಯೆಂದೂ, ರಿಪೋರ್ಟಾಗಿದೆ. ಜಾಡ್ಯವು ಹರಡದ ಹಾಗೆ ಇರುವದಕ್ಕೂ, ಮತ್ತು ಕ್ಯಾಟಲ್ ಡಿಸೀಜ್ ಇನ್ಸ್ಪೆಕ್ಟರವರು ತಿಳಿಸಿದ ಚಿಕಿತ್ಸಾ ವಿಧಾನಗಳಂತೆ ದನಗಳನ್ನು ನೋಡಿಕೊಳ್ಳುವದಕ್ಕೂ ಬೇಕಾದಂತಾ ಏರ್ಪಾಡುಗಳನ್ನು ಮಾಡಿದೆಯೆಂದು ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಚಿತ್ರದುರ್ಗ, ಚೆಳ್ಳಕೆರೆ, ಹಿರಿಯೂರು, ಜಗಳೂರು, ಈ ತಾಲ್ಲೂಕುಗಳಲ್ಲಿ ಮಳೆ ಇಲ್ಲದ್ದರಿಂದ ಬಾಡಿ ಹೋಗುತ್ತಿರುವುದು ಹೊರ್ತು, ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಚಿತ್ರದುರ್ಗ ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿ ನವಣೆ, ಚಿತ್ರದುರ್ಗ ಮತ್ತು ಮೊಳಕಾಲ್ಮುರು ತಾಲ್ಲೂಕುಗಳಲ್ಲಿ ಹುರುಳಿ, ಮತ್ತು ಹೊಳಲ್ಕೆರೆ, ದಾವಣಗೆರೆ ಈ ತಾಲ್ಲೂಕುಗಳಲ್ಲಿ ಅರಳೆ.

ಕುಯ್ಯಲಾದ ಪೈರುಗಳು—ಚೆಳ್ಳಕೆರೆ ತಾಲ್ಲೂಕಿನಲ್ಲಿ ನಾಟಿರಾಗಿ—ಉತ್ಪತ್ತಿ 8 ಆಣೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸಿ ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಸೆಪ್ಟಂಬರ 17ನೆಯ ತಾರೀಖು. }

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮೀಷನರ್.

757

210

ಮೈಸೂರ ಗೆಜೆಟ್.

ನಂ. 42.] ಸರ್ಕಾರದಿಂದ ಪ್ರಾಯಿಷ್ಟ್ ಆದ್ದು. [ನಂ. 38.

ಬೆಂಗಳೂರು, ಗುರುವಾರ, ಸೆಪಟಂಬರ, ತಾ॥ 19, ಸನ್ 1907.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಇಂಟೆಂಡೆಂಟರು, ರೆವಿನ್ಯೂ ಕಮ್ಮಿಷನರವರು, ಕಂಟ್ರೋಲರವರು, ಪಬ್ಲಿಕವರ್ಕಸ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಜ್ಯುಕೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡುಗಳ ಪ್ರೆಸಿಡೆಂಟರು ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ ಸೂಪರ್ಇಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು, ವಗೈರ ಕಾಲಸ್ಥಿತಿ, ರಿಪೋರ್ಟುಗಳು; ಪೋಸ್ಟ್ಯಾಫೀಸ ನೋಟೀಸಗಳು.

3ನೆ ಭಾಗ—ಲೆಜಿಸಲೇಟಿವ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 12ನೆ ಸೆಪ್ಟಂಬರ್ 1907.

ನಂ. 2464—ಸ್ಯಾನಿಟರಿ 73–07—2, ಸಮಸ್ತ ಜನರ ತಿಳುವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ:—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನು ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರುವರಿ 10ನೆಯ ತಾರೀಖಿನ ನಂಬರ 9383—ಮಿಸಲೇನಿಯಸ ಫೈಲ್ 21—96 ಮತ್ತು ನಂಬರ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂಬು ಎಣಿಸಲ್ಪಡುವವು.

ಸ್ಥಳ.	ತಾಲ್ಲೂಕು.
ಅಗರಹಳ್ಳಿ	ಮೈಸೂರು
ಇಲ್ವಾಲ	ಡಿಟೋ
ನರಸಿಪುರ	ನಂಜನಗೂಡು
ಕುಂಬಳ್ಳಿ	ಡಿಟೋ
ಹಿರಿಮರಳಿ	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು
ಬಿಜಗನಹಳ್ಳಿ	ಹುಣಸೂರು

ತಾರೀಖು 18ನೆ ಸೆಪಟಂಬರ 1907.

ನಂ. 2641—ಸ್ಯಾನಿಟರಿ 77-07—2, ಕಡೂರು ಡಿಸ್ಟ್ರಿಕ್ಟು ಶೃಂಗೇರಿ ಸಬ್ ತಾಲ್ಲೂಕಿನ ಶೃಂಗೇರಿಗೆ ... ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊ... ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿ... ಗಳು ಕಂಡುಬಂದಿರುವುದರಿಂದ —

1897ನೆಯ ವರ್ಷದ 2ನೆಯ ನಂಬರ ಎಪಿಡೆಮಿಕ್ ಡಿಸೀಸೆಸ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯ... ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜ... ರು 1907ನೆಯ ವರ್ಷದ ಅಕ್ಟೋಬರು 7ನೆ ತಾರೀಖಿನಿಂದ 1907ನೆ ಇಸವಿ ಅಕ್ಟೋಬರು 21ನೆ ತಾರೀಖಿನ... ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸ...

ತಾರೀಖು 13ನೆ ಸೆಪಟಂಬರ 1907.

ನಂ. 2460—ಮೆಡಿಕಲ್ 48-07-4, ಸೀನಿಯರ್ ಆಸ್ಪತ್ರೆ ಅಸಿಸ್ಟಂಟ್ ಜಾಬ್ ಬಸಪ್ಪಶೆಟ್ಟಿಯವರು ... ಪ್ಪ ಎಂದು ತಮ್ಮ ಹೆಸರನ್ನು ಬದಲಾಯಿಸಿಕೊಂಡಿರುವುದರಿಂದ, ಸರ್ಕಾರಿ ಕಾಗದ ಪತ್ರಗಳಲ್ಲಿ ಧರ್ಮಾರ್ಥ ... ನ್ನೇ ಇನ್ನು ಮುಂದೆ ಉಪಯೋಗಿಸತಕ್ಕದ್ದು.

ತಾರೀಖು 18ನೆ ಸೆಪಟಂಬರ 1907.

ನಂ. 2466 - ಎಗ್ಜ್. 4-07-2, ಮೈಸೂರು ದೇಶೀಯ ಪರೀಕ್ಷೆಗಳ, ಕಾರ್ಯನಿರ್ವಾಹ ಸಭೆಯನ್ನು ... ಮೇರೆ, ಹೊಸದಾಗಿ ಏರ್ಪಡಿಸಲಾಗುವುದು ; ಅದರ ಸಭಿಕರು 5 ವರ್ಷ ಪರ್ಯಂತ ಸಭಿಕರಾಗಿರತಕ್ಕದ್ದು :—

1. ವಿದ್ಯಾಭ್ಯಾಸದ ಇಲಾಖೆಯ ಇನ್ಸ್ಪೆಕ್ಟರ ಜನರಲ್‌ರವರು (ಉದ್ಯೋಗ ಪ್ರಯುಕ್ತರಾದ ಅಧ್ಯ...
2. ರೆವರೆಂಡ್ ಡಿ. ಎ. ರೀಸ್.
3. ರೆವರೆಂಡ್ ಎಚ್. ಸ್ಪೆನ್ಸರ್.
4. ಮಿ|| ವಿ. ಎನ್. ನರಸಿಂಹೈಯ್ಯಂಗಾರ್.
5. „ ಟಿ. ಆರ್. ವೆಂಕಟಸಾಮಿನಾಯುಡು, ಬಿ. ಎ.
6. „ ಸಿ. ಕೃಷ್ಣರಾವ್, ಬಿ. ಎ.
7. „ ಆರ್. ನರಸಿಂಹಾಚಾರ್, ಎಂ. ಎ.
8. „ ಎನ್. ವೆಂಕಟೇಶೈಯ್ಯಂಗಾರ್, ಬಿ. ಎ.
9. „ ಮೀರಹಮ್ಜಾ ಹುಸೇನ್, ಬಿ. ಎ., ಬಿ. ಎಲ್.
10. „ ರಾಜಕಾರ್ಯ ಪ್ರಸಕ್ತ ರಾಯಬಹದ್ದೂರ ಎ. ನರಸಿಂಹೈಯ್ಯಂಗಾರ್.
11. „ ಎಸ್. ರಂಗಾಚಾರ್ಲು.
12 „ ಮಹಮದ್ ಬೇಗ್, ಬಿ. ಎ.

ತಾರೀಖು 14ನೆ ಸೆಪಟಂಬರ 1907.

ನಂ. ಜೆ. 881—ಕೋ. 53-07-4, ಶ್ರೀರಂಗಪಟ್ಟಣದ ಮುನ್ಸೀಫ್ ಮಿ|| ಜಿ. ಸತ್ಯಾಚಾರಾಯರು ... ಆಗಸ್ಟು 16ನೆ ತಾರೀಖಿನ ಜೆ. 545—ಕೋ. 53-07—2ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ... ಗಳ ಪ್ರಿವಿಲೇಜ್ ರಜಾವಿನಲ್ಲಿ 10 ದಿನಗಳ ರಜಾವನ್ನು ಮಾತ್ರ ಉಪಯೋಗಿಸಿಕೊಂಡಿರುವುದರಿಂದ, ಉ... ಕೊಳ್ಳದೆ ನಿಂತಿರುವ 5 ದಿನಗಳ ರಜಾವನ್ನು ಈ ಮೂಲಕ ರದ್ದು ಮಾಡಿ ಇದೆ.

ತಾರೀಖು 16ನೆ ಸೆಪಟಂಬರ 1907.

ನಂ. 2557—ಮೆಡಿಕಲ್ 5-07—11, ಸರ್ಕಾರಿ ಕೆಲಸದ ಅನುಕೂಲತೆಗಾಗಿ ಇದರಡಿ ಕಂಡ ... ವರ್ಗಾವರ್ಗಿಯನ್ನು ಸ್ಥಳ ನಿರ್ಣಯವನ್ನು ಮಂಜೂರ್ಮಾಡಿ ಇದೆ :—

ನಂಬರು	ದರ್ಜೆ	ಹೆಸರು	ಇಂದ	ಗೆ
1	ಮೊದಲನೆತರಗತಿಯ ಅಸಿಸ್ಟಂಟ್ ಸರ್ಜನ್	ಮಿ|| ಸಿ. ಜಿ. ಹನುಮಂತಸಿಂಗ್	ರಜಾದ ಮೇಲೆ ...	ಕೋಲಾರ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್
2	4ನೆ ತರಗತಿಯ ಅಸಿಸ್ಟಂಟ್ ಸರ್ಜನ್.	ಮಿ|| ಸಿ. ಅಪ್ಪಾದೊರೆ ಮೊದಲಿಯಾರ್	ಕೋಲಾರ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್	ತುಮಕೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್
3	ಡಿಟೋ ...	ಮಿ|| ಎ. ಮುತ್ತುಸಾಮಿದಾಸ್	ತುಮಕೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್	ಗ್ರಾಜುಯೇಟಾದ ತರು... ವಾಯ ಮಾಡಬೇಕಾ... ದ ವ್ಯಾಸಂಗಕ್ಕಾಗಿ... ಬೆಂಗಳೂರು ವಿಕ್ಟೋ... ರಿಯಾ ಆಸ್ಪತ್ರೆಯಲ್ಲಿ...

2/2

ತಾರೀಖು 5ನೆ ಸೆಪ್ಟಂಬರ 1907.

96—ಲ್ಯಾ. ರೆ. 123-07—3, ಸ್ 1894ನೆಯ ವರ್ಷದ 7ನೆಯ ನಂಬರ ಲ್ಯಾಂಡ್ ಆಕ್ವಿಸಿಷನ್ ರೆಗ್ಯುಲೇ ಶರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರ ಹೆಸರುಘಟ್ಟದ ಕೆರೆಗೆ ನೀರು ಉರುಳಿಬರುವ ಪ್ರದೇಶಕ್ಕಾಗಿ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇ 3 (c) ಪ್ರಕರಣಗಳನ್ನನುಸರಿಸಿ ಬೆಂಗಳೂರು ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಖಾತೆದಾರರ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ, ಬಾಗಾಯತು.	ಈಗ ತೆಗೆದುಕೊಳ್ಳುವ ವಿಸ್ತೀರ್ಣ.	ಚತುರ್ಸೀಮೆ.			
				ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು.				
ಕೋಡಿ ಬಸವರ ಬಂಡಪುರ ಗ್ರಾಮದ ವೃತ್ತಿದಾರರೆಲ್ಲರೂ	ಟಿಣಿ.	ಖುಷ್ಕಿ	1 34	ಸರ್ವೆ ನಂ. 40 ಕೋಟೆ ಇನಾಮತಿ	ಸರ್ವೆ 24ನೆ ನಂಬರಿನ ಭಾಗ— (1) ಪುಲಿವಂಡಲಂ ಕೇಷಪ್ಪ (2) ದಂಡಿನ ಅಜ್ಜಪ್ಪ ಸರ್ವೆ 27ನೆ ನಂಬರಿನ ಭಾಗ— (1) ಹೊಸ ಮರಕಾಲು ವೃತ್ತಿ (2) ಕೋಟೆಪಲ್ಲಿ ವೃತ್ತಿ (3) ನಗರಕೋತಿಪುರ ವೃತ್ತಿ (4) ಅಕ್ಕದಾಸ ವೃತ್ತಿ ಸರ್ವೆ 28ನೆ ನಂಬರಿನ ಭಾಗ (1) ವಿರೇಶ್ವರ ಕಡೆ ಹೊಲ (2) ಸೋಮೇಶ್ವರ ಹೊಲ (3) ಧರ್ಮಘಟ್ಟರ ಹೊಲ (4) ಬನೆ ಹೊಲ (5) ಅನಾಮಲ ಹೊಲ (6) ಕುಪ್ಪಾಘಟ್ಟರ ಹೊಲ ಸರ್ವೆ 29ನೆ ನಂಬರಿನ ಭಾಗ— (1) ಸಕ್ರೆಯವರ ಕಡೆ ಹೊಲ (2) ಪುಲಿವಿಂಡಲದೇವರ ಕಡೆ ಹೊಲ	ಟಿಣಿ	ಟಿಣಿ
ಮುಖಿಯ ಬಿರ್ ಬಸಯ್ಯ, ಪಾಪರೆಡ್ಡಿ ಅ ಮಘವದಾರ	99-1	ಡಿಟೋ	7 14	ಸರ್ವೆ ನಂ. 98 1. ವೆಂಕಟಪ್ಪನ ಹೊಲ. ಸರ್ವೆ 99ನೆ ನಂಬರಿನ ಭಾಗ. ಕೇಷಪ್ಪನ ಜಮೀನು	ಹೆಸರುಘಟ್ಟಾ ಕೆರೆಯ ಎಲ್ಲೆ	ಸರ್ವೆ 99ನೆ ನಂಬರಿನ ಭಾಗ— ಶಿವಣ ಮುನಿಗನ ಹೊಲ	ಸರ್ವೆ 99ನೆ ನಂಬರಿನ ಭಾಗ—ಪಟೇಲನಂಜಪ್ಪನಹೊಲ. ಸರ್ವೆ 91ನೆ ನಂಬರಿನ ಭಾಗ—ಕೇಶಪ್ಪನ ಜಮೀನು

-213-

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಜಮೀನಿನ ಬಾಬತ್ತು.	ಈಗ ಸರ್ಕಾರಕ್ಕೆ ತೆಗೆದುಕೊಳ್ಳಬೇಕಾದ ವಿಸ್ತೀರ್ಣ.	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು				
ಬೆಂಗಳೂರು	ಬೆಂಗಳೂರು	ಹೆಸರುಘಟ್ಟ	[illegible]	ಕಿವಡ ಮೈಲಾರಿ ಗ ಬಿನ್ ಪೂಜಾರಿ ಲಿಂಗ	99-2	ಖುಷ್ಕಿ	1 14	ಸರ್ವೆ 100ನೆ ನಂಬರಿನ ಭಾಗ-ವೀರಕಪ್ಪನ ಜಮೀನು	ಹೆಸರಘಟ್ಟದ ಕೆರೆಯ ಎಲ್ಲೆ	ಸರ್ವೆ 100ನೆ ನಂಬರಿನ ಭಾಗ-ಸೀತಾರಾಮಯ್ಯನ ಜಮೀನು	ಸರ್ವೆ 99ನೆ ನಂಬರಿನಭಾಗ-ಪಾಪರೆಡ್ಡಿಯ ಜಮೀನು
				ಕೇಷಪ್ಪ ಬಿನ್ ಪುಟ್ಟಣ್ಣ	99-3	ತೋಟ	2 18	ಸರ್ವೆ 96ನೆ ನಂಬರು-ತಳವಾರ ಈನಾಮತಿ	ಸರ್ವೆ 99ನೆ ನಂಬರಿನ ಭಾಗ-ಪಾಪರೆಡ್ಡಿಯ ಜಮೀನು	ಸರ್ವೆ 98ನೆ ನಂಬರಿನ ಭಾಗ-ವೆಂಕಟಪ್ಪನ ಜಮೀನು	ಸರ್ವೆ 95ನೆ ನಂಬರು-ಶಾನಭೋಗರ ಇನಾಮತಿ ಪುಟ್ಟಣ್ಣನ ಜಮೀನು

ತಾರೀಖು 6ನೆ ಸೆಪ್ಟಂಬರ 1907.

ನಂ. ರೆ. 1808—ಲ್ಯಾ. ರೆ. 135-07—3, ಸ 1894ನೆಯು ವರ್ಷದ 7ನೆಯ ನಂಬರ ಲ್ಯಾಂಡ ಅಕ್ವಿಜೇಷನ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ, ಎಂದರೆ, ಶಿವಮೊಗ್ಗ ತಾಲ್ಲೂಕಿನ ಅರಬಿಳಿಚಿ ಗ್ರಾಮದ ನಿವೇಶನಕ್ಕಾಗಿ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (ಸಿ) ಪ್ರಕರಣಗಳನ್ನನುಸರಿಸಿ ಶಿವಮೊಗ್ಗ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂಪಡಿಸಲು ಅಧಿಕಾರ ಕೊಟ್ಟಿದೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಜಮೀನಿನ ಬಾಬತ್ತು.	ಈಗ ಸರ್ಕಾರಕ್ಕೆ ತೆಗೆದುಕೊಳ್ಳಬೇಕಾದ ವಿಸ್ತೀರ್ಣ.	ಚೆಕ್ಕುಬಂದಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಶಿವಮೊಗ್ಗ	ಶಿವಮೊಗ್ಗ	ಹೊಳೆಹೊನ್ನೂರು	ಅರಬಿಳಚಿ	[illegible]	182	ಖುಷ್ಕಿ	ಎ. 2 ಗು. 10	ಸರ್ವೆ ನಂಬರುಗಳು 183, 189	[illegible]	[illegible] ಗ್ರಾಮ	ಸರ್ವೆ ನಂಬರು 181

ತಾರೀಖು [illegible]ನೆ ಸೆಪಟಂಬರ 1907.

ನಂ. ರೆ. 1849—ಲ್ಯಾ. ರೆ. 141-07—2, ಹೆಗ್ಗಡದೇವನಕೋಟೆ ತಾಲ್ಲೂಕಿನ ಅಮಲ್ದಾರ ಮಿ॥ ಪಿ. ರಂಗರಾಯರು, 1907ನೆ ಇಸವಿಯ ಆಗಸ್ಟ 31ನೆ ತಾರೀಖಿನ 3018ನೆ ನಂಬರಿನ ರೆವಿನ್ಯೂ ಕಮಿಷನರ ಇಸ್ತಿಹಾರ್ನಾಮೆಯಲ್ಲಿ ಮಂಜೂರಾದ ಒಂದು ತಿಂಗಳ ಪ್ರಿವಿಲೇಜ್ ರಜಾವಿನ ಮೇಲೆ ಇರುವಾಗ ಅಥವಾ ಮತ್ತೊಂದು ಹುಕುಂ ಕೊಡುವವರೆಗೆ, ತಾಲ್ಲೂಕು ಶಿರಸ್ತೆದಾರ ಎಂ. ಎ. ನರಸಿಂಹಾಚಾರ್ರನ್ನು ಸದರಿ ತಾಲ್ಲೂಕಿನ ಅಮಲ್ದಾರ ಮತ್ತು ಮೂರನೆ ತರಗತಿಯ ಮೆಜಿಸ್ಟ್ರೇಟಾಗಿ ಬದಲಿ ಕೆಲಸ ನೋಡುವಂತೆ ಮೊಕರರ್ಮಾಡಿ ಇದೆ.

ತಾರೀಖು 13ನೆ ಸೆಪಟಂಬರ 1907.

ನಂ. ರೆ. 1953—ಲ್ಯಾ. ರೆ. 11-07—5, 1907ನೆ ಇಸವಿಯ ಜುಲೈ 10ನೆ ತಾರೀಖಿನ ರೆ. 321—ಲ್ಯಾ. ರೆ. 11-07-3ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ಅರಸೀಕೆರೆ ತಾಲ್ಲೂಕಿನ ಅಮಲ್ದಾರ ಮಿ॥ ಕೆ. ಶ್ರೀನಿವಾಸರಾಯರಿಗೆ ಕೊಟ್ಟಿದ್ದ 2 ತಿಂಗಳ ಪ್ರಿವಿಲೇಜ್ ರಜಾವನ್ನು ಅವರು ಉಪಯೋಗಿಸಿಕೊಳ್ಳದ ಪ್ರಯುಕ್ತ ಈ ಮೂಲಕ ರದ್ದುಮಾಡಿ ಇದೆ.

ತಾರೀಖು 12ನೆ ಸೆಪ್ಟಂಬರ್ 1907.

ನಂ. ರೆ. 1934—ಲ್ಯಾ. ರೆ. 132-07—3, ಸ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ ಹೊಸ ಗ್ರಾಮವನ್ನು ಏರ್ಪಡಿಸುವುದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಮಾಲೂರು ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಹೆಸರು.	ಸರ್ವೆ ನಂಬರು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗುವ ವಿಸ್ತೀರ್ಣ.	ಚತುರ್ಸೀಮೆ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಚಿಂತಾಮಣಿ	ನಾಗನಹಳ್ಳಿ	ಯಂಡಹಳ್ಳಿ	ಚಿನ್ನಗ ಬಿನ್ ಪಾಪಣ್ಣ (ಬಾಲರೆಡ್ಡಿಗಾರಿ)	35	ಎ. 4 ಗು. 32	ರೂ. 7 ಆ. 8	ಎ. 2 ಗು. 5	ಸರ್ವೆ ನಂ. 34	ಸರ್ವೆ ನಂ. 15	ಸರ್ವೆ ನಂ. 16	ಸರ್ವೆ 33ನೆ ನಂಬರಿನ ಭಾಗ

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ಬೆಂಗಳೂರು, 16ನೆ ಸೆಪಟಂಬರ್ 1907.

ನಂ. 885—6584, ಇದೇ ಇಲಾಖಾ 1907ನೆ ಇಸವಿ ಆಗಸ್ಟು 29ನೆ ತಾರೀಖಿನ 821-6196ನೆ ನಂಬರು ಇಸ್ತಿಹಾರ್ನಾಮೆ ಅನುಸರಿಸಿ ಛಾನಲ್ಸ್ ಡಿವಿಜರ್ನಗೆ ಸೇರಿದ ಆನರೆರಿ ಅಸಿಸ್ಟೆಂಟು ಇಂಜನೀಯರ್ ಮಿ॥ ಎ. ನಲ್ಲನಾಯಗಂ ಮೊದಲಿಯಾರ್ ರವರಿಗೆ ಆಗಸ್ಟು 8ನೆ ತಾರೀಖಿನಾರಭ್ಯ 1 ತಿಂಗಳು 3 ದಿವಸಗಳ ಪ್ರಿವಿಲೇಜು ರಜಾ ಜೊತೆಗೆ 1 ವರುಷ 10 ತಿಂಗಳು 27 ದಿವಸಗಳ ಫರ್ಲೊ ರಜಾವನ್ನು ಮೈಸೂರು ಸರ್ವಿಸು ರೆಗ್ಯುಲೇಷರ್ 155, 288ನೆ ಆರಟಿಕಲ್ ಅನುಸರಿಸಿ ಮಂಜೂರು ಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಡಬ್ಲ್ಯು. ಮೆಕ್‌ಹರ್ಚಿ,
ಮೈಸೂರು ಗವರ್ನಮೆಂಟ್ ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರೆಟರಿ.

[illegible]

[illegible]

[illegible]				[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

760

ಸಪ್ಲಿಮೆಂಟ್.

ಮೈಸೂರ ಗೆಜೆಟ್.

ಸರ್ಕಾರದಿಂದ ಛಾಯಿಸ್ ಆದ್ದು.

ಬೆಂಗಳೂರು, ಗುರುವಾರ, ಸೆಪಟಂಬರ ತಾ॥ 26, ಸ॥ 1907.

ಮೈಸೂರು ನ್ಯಾಯ ವಿಧಾಯಕ ಸಭೆಯು ನಡವಳಿಕೆಗಳ್ಳ ಸಂಗ್ರಹ.

1907ನೆಯ ಆಗಸ್ಟು 28ನೆಯ ತಾರೀಖು ಬುಧವಾರದ ದಿನ ಅಪರಾಹ್ನ 3 ಘಂಟೆಗೆ ಪಬ್ಲಿಕ ಆಫಿಸ ಕಟ್ಟಡಗಳಲ್ಲಿರುವ ಸಭಾಮಂಟಪದಲ್ಲಿ (ಕೌನ್ಸಿಲ್ ಚೇಂಬರ್) ಸಭೆಯು ಸೇರಿತ್ತು.

ಬಂದಿದ್ದವರು.

ಶ್ರೀ ವಿ. ಪಿ. ಮಾಧವರಾವ್, ಸಿ. ಐ. ಇ., ದೀವಾನ್ (ಅಧ್ಯಕ್ಷರು).

ಉದ್ಯೋಗಪ್ರಯುಕ್ತವಾದ ಸಭಿಕರು.

,, ಟಿ. ಆನಂದರಾವ್, ಬಿ. ಎ., (ಮೊದಲನೆಯ ಕೌನ್ಸಿಲರ್).
,, ಕೆ. ಪಿ. ಪುಟ್ಟಣ್ಣಶೆಟ್ಟಿ, (ಎರಡನೆಯ ಕೌನ್ಸಿಲರ್).

ಹೆಚ್ಚು ಸಭಿಕರು ಸರ್ಕಾರಿ.

,, ಎ. ರಂಗಸಾಮ್ಯೆಯಂಗಾರ್, ಬಿ. ಎ., ಬಿ. ಎಲ್.
,, ಎಚ್. ಜೆ. ಭಾಭಾ, ಎಂ. ಎ.
,, ರಾವ್ ಬಹದ್ದೂರ್, ಎಂ. ಮುತ್ತಣ್ಣ.
,, ಎಂ. ಕಾಂತರಾಜ ಅರಸು, ಬಿ. ಎ.
,, ಎಸ್. ನಾರಾಯಣರಾವ್.

ಸರ್ಕಾರಿ ಉದ್ಯೋಗಸ್ಥರಲ್ಲದವರು.

,, ವಿ. ಎನ್. ನರಸಿಂಹೈಯಂಗಾರ್.
,, ಎಂ. ಸಿ. ರಂಗೈಯಂಗಾರ್, ಬಿ. ಎ.
,, ಬಿ. ನಾಗಪ್ಪ, ಬ್ಯಾರಿಸ್ಟರ್ ಅಟ್ ಲಾ.
,, ಸೈಯದ್ ಅಮೀರ್ ಹುಸೇನ್.

ಬರದೆ ಇದ್ದವರು.

ಸರ್ಕಾರಿ ಉದ್ಯೋಗಸ್ಥರಲ್ಲದವರು.

,, ರಾಜಮಂತ್ರಪ್ರವೀಣ ಸಿ. ಶ್ರೀನಿವಾಸ್ಯೆಯಂಗಾರ್.

,, ಕೆ. ಮೈಲಾರರಾವ್, ಬಿ. ಎ., ಬಿ. ಎಲ್. (ಸೆಕ್ರೆಟರಿ).

ದೀವಾನರವರು :-

ಈ ಸಭೆಗೆ ಬರಲು ಅನುಕೂಲಿಸಲಿಲ್ಲವೆಂದು ಹೇಳಿ ಮಿ॥ ಟಿ. ಶ್ರೀನಿವಾಸೈಯ್ಯಂಗಾರ್ರು ಒಂದು ಕಾಗದವನ್ನು ಕಳುಹಿಸಿದಾರೆ, ಅದರಲ್ಲಿ ಇಲ್ಲಿ ಪ್ರಸ್ತಾಪಿಸುವ ಬಿಲ್ಲುಗಳ ಮೂಲತತ್ವಗಳನ್ನು ತಾವು ಸಾಮಾನ್ಯವಾಗಿ ಒಪ್ಪಿದರೂ ಕೆಲವು ತಿದ್ದುಪಾಟುಗಳನ್ನು ಮಾಡಬೇಕಾಗಿದೆಯೆಂದು ತಾವು ಅಭಿಪ್ರಾಯಪಡುವುದಾಗಿಯೂ ಅಂಥಾ ತಿದ್ದುಪಾಟುಗಳನ್ನು ತಾವು ಕ್ರಮೇಣ ಸೂಚಿಸುವುದಾಗಿಯೂ ಹೇಳುತ್ತಾರೆ.

ಮಿ॥ ಹೇಮಾ ಹನುಮಂತಯ್ಯ, ಕೆಲಸದಿಂದ ನಿವೃತ್ತರಾದ ಅಸಿಸ್ಟೆಂಟ್ ಕಮಿಷನರ್, ಮಿ॥ ಎಸ್. ಆರ್. ಬಾಲಕೃಷ್ಣರಾವ್, ಅಡ್ವೊಕೇಟ್, ಪಟೇಲ ಸುಬ್ಬರಾಯಪ್ಪ ಮತ್ತು ಲಕ್ಷ್ಮೀನರಸಿಂಹಾಚಾರ್, ಇವರುಗಳಿಂದ ಬಂದ ಅರಿಕೆಗಳನ್ನು ಸಭೆಯ ಅಪ್ಪಣೆಯ ಬಗ್ಗೆ ಸೆಕ್ರೆಟರಿಯವರು ತಿಳಿಸಿದರು. ಮೊದಲ ಇಬ್ಬರ ಅರಿಕೆಗಳನ್ನು ಆಲೋಚನೆಯ ಬಗ್ಗೆ ನಿಲ್ಲಿಸಿಟ್ಟುಕೊಂಡು, ಮಿಕ್ಕ ಇಬ್ಬರ ಅರಿಕೆಗಳು ನಿಜವಾಗಿ ಸಭೆಯ ಪರ್ಯಾಲೋಚನೆಯಲ್ಲಿರುವ ಯಾವ ವಿಷಯಕ್ಕೂ ಸಂಬಂಧಪಡದೆ ಇದ್ದುದರಿಂದ ಅವುಗಳನ್ನು ಕಟ್ಟಿ ಇಡಲಾಯಿತು.

ಮಿ॥ ನರಸಿಂಹೈಯ್ಯಂಗಾರ್ರು ದೇವನಹಳ್ಳಿ ತಾಲ್ಲೂಕಿನ ರೈತರಿಂದ ತನಗೆ ತಲುಪಿದ ಒಂದು ಅರ್ಜಿಯನ್ನು ತಂದುಕೊಟ್ಟು ಅದು ಗ್ರಾಮ ಉದ್ಯೋಗಗಳ ಬಿಲ್ಲಿಗೆ ವಿರುದ್ಧವಾಗಿತ್ತೆಂದು ಹೇಳಿದರು.

1900ನೆ ಇಸವಿಯ 2ನೆದಾದ ಸ್ಟಾಂಪು ರೆಗ್ಯುಲೇಷನನ್ನು ತಿದ್ದುಪಾಟುಮಾಡುವ ಬಿಲ್ಲು.

ಮಿ॥ ಎ. ರಂಗಸ್ವಾಮೈಯ್ಯಂಗಾರ್ :-

ಅಯ್ಯಾ,

ಸ್ಟಾಂಪುಗಳಿಗೆ ಸಂಬಂಧಪಟ್ಟ 1900ರ 2ನೆಯ ರೆಗ್ಯುಲೇಷನನ್ನು ಇನ್ನೂ ತಿದ್ದುಪಾಟು ಮಾಡುವ ಒಂದು ಬಿಲ್ಲನ್ನು ಪ್ರಸ್ತಾಪಿಸುವುದಕ್ಕೆ ನಾವು ಅಪ್ಪಣೆಯನ್ನು ಕೇಳುತ್ತೇವೆ. ಆ ರೆಗ್ಯುಲೇಷನನ್ನು ಮೈಸೂರು ಸೀಮೆಯಲ್ಲಿ ಉಪಯೋಗದಲ್ಲಿದ್ದ ಹಿಂದಿನ 1879ರ 1ನೆ ಆಕ್ಟನ್ನು ತಿದ್ದುಪಾಟುಮಾಡಲು ಹುಟ್ಟಿದ 1899ನೆಯ ಇಂಡಿಯನ್ ಸ್ಟಾಂಪು ಆಕ್ಟಿನ ಮೇರೆ ಏರ್ಪಡಿಸಿತು. ಅಲ್ಲಿಂದೀಚೆಗೆ 1899ನೆ ಇಂಡಿಯನ್ ಸ್ಟಾಂಪು ಆಕ್ಟು 1900ರ 6ನೆ ಆಕ್ಟು 1904ರ 11ನೆ ಆಕ್ಟು ಮತ್ತು 1906ರ 5ನೆ ಆಕ್ಟು ಇವುಗಳಿಂದ ಬಹಳವಾಗಿ ತಿದ್ದುಪಾಟಾಗಿದೆ. ಈಗ ನಾವು ಹೇಳುವ ತಿದ್ದುಪಾಟಿನ ರೆಗ್ಯುಲೇಷನಿನಲ್ಲಿ ಮೇಲ್ಕಂಡ ಮೂರು ತಿದ್ದುಪಾಟಿನ ಆಕ್ಟುಗಳ ಮೂಲಕ ಉಪಯೋಗಕ್ಕೆ ತಂದ ಎಲ್ಲಾ ಬದಲಾವಣೆಗಳನ್ನೂ ಸೇರಿಸಿ ಇದೆ.

ಈ ಬದಲಾವಣೆಗಳನ್ನು ಹತ್ತು ವಾಕ್ಯಗಳಲ್ಲಿ ಏರ್ಪಡಿಸಿ ಇದೆ. ಇವುಗಳ ಪೈಕಿ 1902ನೆ ರೆಗ್ಯುಲೇಷನಿನ 40ನೆ ಪ್ರಕರಣದ (1) (*b*) ವಾಕ್ಯದ ಬದಲಾವಣೆಗೆ ಸಂಬಂಧಿಸುವ 7ನೆ ವಾಕ್ಯವು ಮೊದಲು ಪ್ರಸ್ತಾಪಿಸಲು ಅರ್ಹವಾಗಿದೆ. ಈ 40ನೆ ಪ್ರಕರಣದ (1) (*b*) ವಾಕ್ಯವು ಸಂಪೂರ್ಣವಾದ ದಂಡನೆಯನ್ನು ವಿಧಿಸುವುದರಿಂದ ಕಷ್ಟವು ಉಂಟಾಗುವುದೆಂದು ಡೆಪ್ಯುಟಿ ಕಮಿಷನರಿಗೆ ತಿಳಿದಿರುವಾಗಲೂ ಕೂಡ ಸರಿಯಾದ ಸ್ಟಾಂಪು ರುಸುಮಿನ ಅಥವಾ ಸರಿಯಾದ ಸ್ಟಾಂಪು ರುಸುಮಿಗೂ ದಸ್ತಾವೇಜಿಗೆ ಲಗತ್ತಾಗಿರುವ ಸ್ಟಾಂಪಿಗೂ ಇರುವ ವ್ಯತ್ಯಾಸದ ಹತ್ತರಷ್ಟು 5 ರೂಪಾಯಿಗೆ ಮೀರಿ ಇದ್ದರೂ ಅದಕ್ಕೆ ಕಡಮೆಯಾದ ದಂಡವನ್ನು ವಸೂಲ್ಮಾಡಲು ಡೆಪ್ಯುಟಿ ಕಮಿಷನರಿಗೆ ಯಾವ ಸ್ವಾತಂತ್ರ್ಯವನ್ನೂ ಕೊಡುವುದಿಲ್ಲ. ಇದರಿಂದ ಉಂಟಾದ ಕಷ್ಟವು ಪ್ರಜಾ ಪ್ರತಿನಿಧಿಗಳ ಸಭೆಯು ಹೋದಸಲ ಸೇರಿದಾಗ ತಿಳುವಳಿಕೆಗೆ ಬಂತು. ಈ ಕಷ್ಟವನ್ನು ಪರಿಹರಿಸುವುದಕ್ಕಾಗಿ ಮೇಲ್ಕಂಡ ಉಪ ಪ್ರಕರಣದಲ್ಲಿ "ಸರಿಯಾದ ಹಾಸಲಿಗೆ ಕಮ್ಮಿ ಬಿದ್ದ ಭಾಗದ ಹತ್ತರಷ್ಟು" ಎಂಬ ಮಾತುಗಳಿಗೆ ಬದಲಾಗಿ "ಸರಿಯಾದ ಹಾಸಲಿಗೆ ಕಮ್ಮಿ ಬಿದ್ದ ಭಾಗದ ಹತ್ತರಷ್ಟಕ್ಕೆ ಮೀರದ ಒಂದು" ಎಂಬ ಮಾತುಗಳನ್ನು ಸೇರಿಸಬೇಕೆಂದು ಯೋಚಿಸಿ ಇದೆ. 1904ರ 4ನೆ ಆಕ್ಟಿನ ಮೂಲಕ 1899ರ ಇಂಡಿಯನ್ ಸ್ಟಾಂಪು ಆಕ್ಟಿನಲ್ಲಿ ಈ ಮೇಲ್ಕಂಡ ತಿದ್ದುಪಾಟನ್ನು ಆಗಲೇ ಮಾಡಿ ಇದೆ.

1900ರ 2ನೆ ರೆಗ್ಯುಲೇಷನಿನ 26ನೆ ಪ್ರಕರಣದ ಮೊದಲನೆ ನಿಯಮವನ್ನು ಬದಲಾಯಿಸುವ 4ನೆ ವಾಕ್ಯವು ಮತ್ತೊಂದು ವಿಶೇಷ ವಿಷಯವಾಗಿದೆ. ಈಗಿರುವ ನಿಯಮದ ಮೇರೆ ಸರ್ಕಾರದವರು ಕೊಡುವ ಗಣಿಯ ಗುತ್ತಿಗೆಗಳ ಮೇಲೆ ಭಾಗದ ಅಥವಾ ರಾಜಾದಾಯದ ಬೆಲೆಯು ಗೊತ್ತಿಲ್ಲದೆ ಇರುವಾಗ ವರ್ಷಕ್ಕೆ 20,000 ರೂಪಾಯಿಯೆಂದು ಊಹೆ ಕಟ್ಟಿದ ಬೆಲೆಯ ಮೇಲೆ ಸ್ಟಾಂಪು ರುಸುಮನ್ನು ವಸೂಲ್ಮಾಡುವ ವಾಡಿಕೆಯು ಇದೆ. ಇದು ಚಿಕ್ಕ ಚಿಕ್ಕ ಅಲಾಭಕರವಾದ ಗಣಿಗಳಿಗೆ ತಕ್ಕದ್ದಾಗಿಲ್ಲ ಮತ್ತು ಕಷ್ಟವಾಗಿದೆ. ಈ ಕಷ್ಟವನ್ನು ಪರಿಹರಿಸಲು ಸರಕಾರಕ್ಕೆ ಕೊಡತಕ್ಕ ರಾಜಾಯದ ಮೊತ್ತದ ವಿಷಯದಲ್ಲಿ ಡೆಪ್ಯುಟಿ ಕಮಿಷನರು ಮಾಡುವ ಮದಿಪಿಗೆ ಅನುಸಾರವಾಗಿ ಸರ್ಕಾರದವರು ಕೊಡುವ ಗಣಿ ಗುತ್ತಿಗೆಯ ಮೇಲೆ ಸ್ಟಾಂಪು ರುಸುಮನ್ನು ವಸೂಲ್ಮಾಡಬೇಕೆಂದು ನಿಯಮ ಮಾಡಬೇಕೆಂದು ಯೋಚಿಸಿ ಇದೆ. ಅಂಥಾ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರು ಕೊಡುವ ತೀರ್ಪುಗಳನ್ನು ಚೀಫ್ ಕಂಟ್ರೋಲಿಂಗ್ ರೆವಿನ್ಯು ಅಥಾರಿಟಿ (ರೆವಿನ್ಯೂ ಮೇಲ್ವಿಚಾರಣೆಯ ಮುಖ್ಯ ಅಧಿಕಾರಿಯು) ಪುನರ್ವಿಮರ್ಶೆ ಮಾಡುವುದಕ್ಕೆ 9ನೆಯ ವಾಕ್ಯದಲ್ಲಿ ನಿಯಮಮಾಡಿದೆ.

ಮತ್ತೊಂದು ಸ್ವಲ್ಪ ವಿಶೇಷವಾದ ಬದಲಾವಣೆಯನ್ನು 1 (*a*) ಮತ್ತು 3 ವಾಕ್ಯಗಳ ಮೂಲಕ ಮಾಡಿ ಇದೆ. ಈ ಪೈಕಿ 1 (*a*) ವಾಕ್ಯವು "ವಿಕ್ರಯಕ್ಕೆ ಯೋಗ್ಯವಾದ ಸೆಕ್ಯೂರಿಟಿ ಪತ್ರ" ಎಂಬ ಉಕ್ತಿಯ ಅರ್ಥವನ್ನು ವಿವರಿಸುತ್ತದೆ. ತೋರಣಮಾನವಾಗಿ ಠೇವಣಿ ಇಟ್ಟ ಸೆಕ್ಯೂರಿಟಿ ಪತ್ರವು ವಿಕ್ರಯಕ್ಕೆ ಯೋಗ್ಯವಾದಾಗ 1ನೆ ಷೆಡ್ಯೂಲಿನ 6ನೆ ಆರ್ಟಿಕಲಿನಲ್ಲಿ ವಿಧಿಸಿರುವ ರುಸುಮಿಗೆ ಬದಲಾಗಿ ಗೊತ್ತಾದ 8 ಆಣೆಯ ಒಂದು ರುಸುಮನ್ನು ಏರ್ಪಡಿಸುವುದಾಗಿ 3ನೆ ವಾಕ್ಯದಲ್ಲಿ ಸಲಹೆ ಮಾಡಿರುವ ಹೊಸ 23 A ಪ್ರಕರಣದ ವಿಚಾರದಲ್ಲಿ ಈ ಅರ್ಥವಿವರಣೆಯು ಅವಶ್ಯಕವಾಗಿದೆ.

217

[ಮಿ॥ ಪಿ. ರಂಗಸಾಮ್ಯೈಯ್ಯಂಗಾರ್, ಮಿ॥ ಟಿ. ಆನಂದರಾವ್.]

10 (1)ನೆ ವಾಕ್ಯವು ಸಹ ಸ್ವಲ್ಪ ಮುಖ್ಯವಾದುದು. ಅಡವುಗಳೂ ಬತ್ತೆಗಳೂ 1ನೆ ಷೆಡ್ಯೂಲಿನ 6ನೆ ಆರ್ಟಿಕಲಿಗೆ ಬಳಪಡುತ್ತವೆಯೊ ಇಲ್ಲವೊ ಎಂಬ ವಿಷಯದಲ್ಲಿ ಸ್ವಲ್ಪ ಸಂದೇಹವಿರುವುದಾಗಿ ತೋರುತ್ತದೆ. ಇದೇ ವಿಷಯದಲ್ಲಿ ತಿಳಿಯಬಂದ ಇತರ ನ್ಯೂನತೆಗಳೂ ಅಕ್ರಮಗಳೂ ಯಾವುವೆಂದರೆ—

(a) ಕೊಟ್ಟ ಸಾಲವು ಒಂದು ವರ್ಷಕ್ಕಿಂತ ಹೆಚ್ಚು ಕಾಲದನಂತರ ಪಾವತಿಯಾಗುವಂತೆ ಬಂದೋಬಸ್ತು ಮಾಡುವ ಬಗ್ಗೆ ತೋರಡವಾನ ಹಾಕಿದ ಸಂದರ್ಭಕ್ಕೆ ಸದರಿ ಆರ್ಟಿಕಲಿನಲ್ಲಿ ನಿಯಮವೇರ್ಪಟ್ಟಿಲ್ಲ;

ಅಥವಾ (b) ಪಡೆದ ಅಡ್ವಾನ್ಸು ಯಾವಾಗ ಮುಂಗಡವು ಕೇಳಿದಾಗ ವಾಪಸಾಗುವಂತೆ ಏರ್ಪಟ್ಟ ಸಂದರ್ಭಕ್ಕೂ ಅದರಲ್ಲಿ ನಿಯಮವು ಏರ್ಪಟ್ಟಿಲ್ಲ.

ಆದುದರಿಂದ 10 (1)ನೆ ವಾಕ್ಯದಲ್ಲಿ, "ತೋರಡವಾನದಿಂದ" ಎಂಬ ಮಾತನ್ನು ಬಿಟ್ಟುಬಿಟ್ಟು ಮೇಲ್ಕಂಡ ಆರ್ಟಿಕಲು ಯಾವ ಕಾರ್ಯಕ್ಕೆ ವ್ಯಾಪಿಸಬೇಕೋ ಆ ಕಾರ್ಯದ ಸ್ವಭಾವವನ್ನು ಇನ್ನೂ ಸ್ಪಷ್ಟವಾಗಿ ವಿವರಿಸುವಂತೆ ಸದರಿ ಆರ್ಟಿಕಲನ್ನು ವಿಸ್ತಾರವಾಗಿ ಬರೆಯಬೇಕೆಂದು ಸಲಹೆ ಮಾಡಿದೆ. ಅಡವು ಬತ್ತೆಗಳನ್ನು ನಮೂದುಮಾಡಿ ಹೇಳಿ ದೃಶ್ಯಾಧಾರದ ಮಾತನ್ನು ಬಿಟ್ಟುಬಿಟ್ಟಿದೆ; ಆದುದರಿಂದ ದೃಶ್ಯಾಧಾರಕ್ಕೆ ಸಂಬಂಧಿಸುವ ಕಾರ್ಯಗಳೆಲ್ಲಾ ಎಂದರೆ ಒಂದು ಸಾಲದ ಅಥವಾ ಒಪ್ಪಂದದ ಸಲಿಕೆಯ ಬಗ್ಗೆ ಚರಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಡದೆ ಅದನ್ನು ಆಧಾರವಾಗಿ ಮಾತ್ರ ಒಪ್ಪಿಸಿಕೊಡುವ ಸಂದರ್ಭಗಳು ಈ ಆರ್ಟಿಕಲಿಗೆ ಒಳಪಡುವುದಿಲ್ಲ. ಒಂದು ವರ್ಷಕ್ಕಿಂತ ಹೆಚ್ಚು ಕಾಲವು ಕಳೆದ ನಂತರ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಒಂದು ವರ್ಷದೊಳಗೆ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಒಂದೇ ಸಮವಾದ ಹಾಸಲನ್ನು ಹಾಕಬೇಕೆಂದೂ; ಮತ್ತು ಕೇಳಿದಾಗ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಮೂರು ತಿಂಗಳಿಗಿಂತ ಹೆಚ್ಚು ಕಾಲದ ಅನಂತರ ವಾಪಸು ಪಾವತಿಯಾಗುವಂತೆ ಏರ್ಪಟ್ಟ ದಸ್ತಾವೇಜುಗಳ ಮೇಲೂ ಒಂದೇ ಸಮವಾದ ಹಾಸಲನ್ನು ಹಾಕಬೇಕೆಂದೂ ಸಲಹೆ ಮಾಡಿದೆ.

ಕಡೆಯಲ್ಲಿ, ಎಲ್ಲಾ ದಸ್ತಾವೇಜುಗಳಿಗೂ, ಅವುಗಳಿಂದ ಮುಂಗಡಗಳನ್ನು ಪಡೆದುದೂ ಅವುಗಳನ್ನು ಬರೆದುದೂ ಒಂದೇ ಕಾಲದಲ್ಲಿ ಆಗಿರಲಿ ಅಥವಾ ಇಲ್ಲದೆ ಇರಲಿ, ಏಕರೀತಿಯಾದ ಹಾಸಲನ್ನು ಹಾಕಬೇಕೆಂದು ಸಲಹೆಮಾಡಿದೆ.

5 (b), 6 ಮತ್ತು 10 (7)ನೆ ವಾಕ್ಯಗಳು ಬೆಂಕಿಯ ಮತ್ತು ಸಮುದ್ರದ ಇನ್ಷೂರೆನ್ಸು ಪಾಲಿಸಿಗಳಿಗೆ ಸಂಬಂಧಿಸುತ್ತವೆ, ಮತ್ತು ಇವುಗಳನ್ನು ಮೈಸೂರು ಸಂಸ್ಥಾನದಲ್ಲಿ ಉಪಯೋಗಿಸುವ ಸಂಭವವಿಲ್ಲದಿದ್ದರೂ, ನಮ್ಮ ಸ್ಟಾಂಪು ಕಾನೂನಿನ ನಿಯಮಗಳನ್ನು ಬ್ರಿಟಿಷ್ ಇಂಡಿಯಾ ಆಕ್ಟಿನ ನಿಯಮಗಳಿಗೆ ಸರಿಯಾಗಿ ಮಾಡುವುದಕ್ಕೋಸ್ಕರ ಇವುಗಳನ್ನು ಸೇರಿಸಿದೆ.

ಸ್ವಲ್ಪಮಟ್ಟಿಗೆ ಕಾರ್ಯತಃ ಉಪಯುಕ್ತವಾದ ಕೆಲವು ಚಿಲ್ಲರೆ ಬದಲಾವಣೆಗಳನ್ನು ಮಾಡಬೇಕೆಂದು ಈ ಕೆಳಗಿನ ವಾಕ್ಯಗಳಲ್ಲಿ ಸಲಹೆ ಕೊಟ್ಟಿದೆ:—

1 (c) ವಾಕ್ಯ.—ವ್ಯವಸ್ಥೆ ಮಾಡಬೇಕೆಂದಿರುವ ಸ್ವತ್ತನ್ನು ಬಾಯಿಮಾತಿನಿಂದ ಮೊದಲು ವಿಲೆವಾರಿ ಅನಂತರ ಸ್ವತ್ತನ್ನು ವ್ಯವಸ್ಥೆ ಮಾಡುವಂಥವನೂ ಟ್ರಸ್ಟಿಗಳೂ ಸೇರುವಂಥ ಒಂದು ಟ್ರಸ್ಟಿನ ಡಿಕ್ಲರೇಷನ್ ಯಾನೆ ಪ್ರಕಟನೆಯಲ್ಲಿ ಸದರಿ ವಿಲೆಯ ಷರತ್ತುಗಳನ್ನು ಬರೆದಿಡುವುದೆಂಬ ಸುಲಭೋಪಾಯದಿಂದ ಸೆಟ್ಲಮೆಂಟ್ಸ್ ಯಾನೆ ವ್ಯವಸ್ಥಾ ಪತ್ರಗಳ ಮೇಲೆ ಹಾಕಿರುವ ಹಾಸಲನ್ನು ಈಗ ಸುಲಭವಾಗಿ ತಪ್ಪಿಸಿಕೊಳ್ಳಬಹುದಾದ ಕಾರಣ ಇದಕ್ಕೆ ಅಡ್ಡಿಮಾಡುವ ಉದ್ದೇಶದಿಂದ ಸೆಟ್ಲಮೆಂಟ್ ಎಂಬುದರ ಅರ್ಥವಿವರಣೆಗೆ ಇನ್ನು ಸ್ವಲ್ಪ ಹೆಚ್ಚಾಗಿ ಸೇರಿಸುವಂತೆ ಈ ವಾಕ್ಯದಲ್ಲಿ ಸಲಹೆಮಾಡಿದೆ. ಟ್ರಸ್ಟಿನ ಡಿಕ್ಲರೇಷನಿಗೆ 5ನೆ ಆರ್ಟಿಕಲಿನಿಂದ ವಿಧಿಸಲ್ಪಟ್ಟ ಹೆಚ್ಚು ಹಾಸಲಿಗೆ ಬದಲಾಗಿ 62ನೆ ಆರ್ಟಿಕಲಿನ ಮೇರೆ ಹದಿನೈದೇ ರೂಪಾಯಿನ ಹಾಸಲನ್ನು ವಿಧಿಸಬೇಕಾಗುತ್ತದೆ. ಈಗ ಸಲಹೆ ಮಾಡಿರುವಂತೆ ಸದರಿ ಅರ್ಥವಿವರಣೆಗೆ ಹೆಚ್ಚು ಸೇರಿಸುವುದರಿಂದ ಅಂಥಾ ದಸ್ತಾವೇಜುಗಳಿಗೆ ಮುಂದೆ ಸೆಟ್ಲಮೆಂಟುಗಳಂತೆ ಸ್ಟಾಂಪು ಹಚ್ಚಬೇಕಾಗುತ್ತದೆ.

10 (5)ನೆ ವಾಕ್ಯ—ಕೆಲವು ಪೈರಿನ ಅಡಮಾನಗಳ ಮೇಲಿನ ಸ್ಟಾಂಪು ಹಾಸಲನ್ನು ನಾಲ್ಕು ಆಣೆಯಿಂದ ಎರಡು ಆಣೆಗೆ ಇಳಿಸಿ ಇದೆ.

8ನೆ ವಾಕ್ಯ—ಉಪಯೋಗಿಸದೆ ಇರುವ ಛಾಪಾ ಕಾಗದಗಳ ಬೆಲೆಯನ್ನು ವಾಪಸುಕೊಡುವ ವಿಷಯದಲ್ಲಿ ರೆಗ್ಯುಲೇಷನಿನ 51ನೆ ಪ್ರಕರಣದಿಂದ ಕೊಟ್ಟಿರುವ ರಿಯಾಯಿತಿಯನ್ನು ಖಾಸಗಿ ಬ್ಯಾಂಕಿಂಗ್ ಸಂಘಗಳಿಗೂ ವಿಸ್ತರಿಸುತ್ತದೆ.

ಉಳಿದ ವಾಕ್ಯಗಳು ಅಷ್ಟು ಮುಖ್ಯವಲ್ಲ ಅಥವಾ ಮೇಲಿನ ಪ್ಯಾರಾಗಳಲ್ಲಿ ಸೂಚಿಸಿದ ಬದಲಾವಣೆಗಳನ್ನು ಮಾಡುವುದರಿಂದ ಆಕ್ಟಿನಲ್ಲಿಯೂ ಮೊದಲನೆ ಷೆಡ್ಯೂಲಿನಲ್ಲಿಯೂ ಮಾಡಬೇಕಾಗುವ ಇತರ ತಿದ್ದುಪಾಟುಗಳನ್ನೂ ಬದಲಾವಣೆಗಳನ್ನೂ ಮಾಡುವುದಕ್ಕೋಸ್ಕರ ಏರ್ಪಟ್ಟಿವೆ.

ಮಿ॥ ಎಸ್. ನಾರಾಯಣರಾಯರು ಸದರಿ ಬಿನ್ನಹವನ್ನು ಅನುಮೋದಿಸಿದರು. ತರುವಾಯ ಅದನ್ನು ಸಭೆಗೆ ಹಾಕಿ ನಿರ್ವಹಿಸಲಾಯಿತು.

ಗ್ರಾಮ ಉದ್ಯೋಗಗಳ ಬಿಲ್ಲು.

ಮಿ॥ ಟಿ. ಆನಂದರಾವ್.

ಅಯ್ಯಾ,

ಸಭೆಯಲ್ಲಿ ಕೆಲಸ ನಡೆಯುವ ಬಗ್ಗೆ ಏರ್ಪಟ್ಟ ನಿಬಂಧನೆಗಳ ಪೈಕಿ 33ನೆ ನಿಬಂಧನೆಯ ಮೇರೆ ಮೈಸೂರು ಸೀಮೆಯ ಗ್ರಾಮ ಉದ್ಯೋಗಗಳಿಗೆ ಸಂಬಂಧಪಟ್ಟ ಕಾನೂನನ್ನು ಒಟ್ಟು ಸೇರಿಸಿ ತಿದ್ದುಪಾಟು ಮಾಡುವುದಕ್ಕೆ ಹುಟ್ಟಿದ ಬಿಲ್ಲನ್ನು ಸಭೆಯಲ್ಲಿ ಓದಬೇಕೆಂದು ಬಿನ್ನವಿಸಲು ಅಪ್ಪಣೆ ಬೇಡುತ್ತೇನೆ. ಈ ಬಿಲ್ಲನ್ನು ಮೈಸೂರು ಗೆಜೆಟ್ಟಿನಲ್ಲಿ ಅಚ್ಚುಹಾಕಿ ಪ್ರಕಟಿಸಿದೆ ಮತ್ತು

[ಮಿ|| ಟಿ. ಆನಂದರಾವ್; ಮಿ|| ರಂಗೈಯ್ಯಂಗಾರ್; ಮಿ|| ಎ. ರಂಗಸ್ವಾಮ್ಯೆಯ

ಇದರ ಪ್ರತಿಗಳನ್ನು ಈ ಸಭೆಯ ಸಭಿಕರಿಗೂ ಕೊಟ್ಟಿದೆ. ಈ ಬಿಲ್ಲಿನ ಜತೆಯಲ್ಲಿ ಅದರ ಉದ್ದೇಶಗಳ
ರಣೆ ಇದೆ. ಅವುಗಳನ್ನು ಸಭಿಕರು ಚೆನ್ನಾಗಿ ಓದಿ ಸದರಿ ಉದ್ದೇಶಿಸಲ್ಪಟ್ಟ ನ್ಯಾಯದ ಮೂಲತತ್ವಗ
ವಿಷಯವಾಗಿ ಹೋದದಿವಸ ನಾನು ಹೇಳಿದುದನ್ನು ತಾವೇ ಕಂಡುಕೊಂಡಿದಾರೆನ್ನುವುದಕ್ಕೆ ಏನೂ ಸಂ
ತಿದ್ದುಪಾಟು ಮಾಡಬೇಕೆಂದು ಯಾವ ನೋಟೀಸುಗಳು ಬಂದಹಾಗೆ ಕಾಣುವುದಿಲ್ಲ. ಇದರಿಂದ ಬಿಲ್ಲು ದೋ
ದುದೆಂದಾಗಲಿ ಅಥವಾ ಅದನ್ನು ಈಗಿರುವುದಕ್ಕಿಂತ ಚೆನ್ನಾಗಿ ಮಾಡುವುದು ಅಸಾಧ್ಯವೆಂದಾಗಲಿ ಊಹ
ಈ ಸಂಬಂಧವಾದ ಸಲಹೆಗಳನ್ನು ಬಿಲ್ಲು ಕಮಿಟಿಗೆ ಹಾಕಲ್ಪಡುವ ಸ್ಥಿತಿಗೆ ಬಂದಾಗ ಮಾಡುವ ಬಗ್ಗೆ ನಿಲ್ಲಿಸ
ಮಟ್ಟಿಗೆ ಹೀಗೆಯೇ ಸರಿ. ಇದಕ್ಕೆ ನಿದರ್ಶನವೇನೆಂದರೆ, ಈ ಬಿಲ್ಲಿನ 5, 6 ಮತ್ತು 7ನೆ ವಾಕ್ಯಗಳನ
ಧೀನ ಮಾಡಲ್ಪಟ್ಟ ಗ್ರಾಮಗಳಲ್ಲಿರುವ ಮುಖ್ಯ ಗ್ರಾಮೋದ್ಯೋಗಿಗಳಾದ ಪಟೇಲ, ಶಾನುಭೋಗ, ನೀರ
ತಳಾರಿ, ಇವರಿಗೂ ಸರ್ಕಾರಿ ಗ್ರಾಮಗಳಲ್ಲಿರುವ ಇವರ ಜತೆಯ ಅಧಿಕಾರಿಗಳಿಗೂ ಉದ್ಯೋಗಕ್ಕೆ ಅರ್ಹ
ಉದ್ಯೋಗ ಸಂಬಂಧವಾದ ಸುಶಿಕ್ಷಣವನ್ನು ಕುರಿತು ವ್ಯತ್ಯಾಸವಿರುವುದಾಗಿ ತಿಳಿಯಬರುವುದು. ಈ ವ
ಮಾಡಲ್ಪಟ್ಟ ಗ್ರಾಮಗಳ ಸ್ವತ್ತುಕರ್ತರಿಗೆ ನಷ್ಟ ಅಥವಾ ಕುಂದಕವಾಗುತ್ತದೆಂದು ನಮಗೆ ಅಭಿಪ್ರಾಯ
ಲ್ಪಟ್ಟ ಗ್ರಾಮದಲ್ಲಿ, ಗ್ರಾಮದ ಲೆಕ್ಕಗಳು ಎಷ್ಟು ಕೆಟ್ಟ ಸ್ಥಿತಿಯಲ್ಲಿ ಇಡಲ್ಪಟ್ಟಿವೆ ಎಂಬುವುದನ್ನೂ, ರವಿನ
ಯವನ್ನು ವಸೂಲ್ಮಾಡುವುದೂ ಅದರ ಲೆಕ್ಕವನ್ನು ರೈತನಿಗೂ ಸ್ವತ್ತು ಕರ್ತನಿಗೂ ಒಪ್ಪಿಸುವುದೂ ಎ
ಎಂಬುವುದನ್ನೂ ನೋಡುವಲ್ಲಿ ಈ ಸ್ವತ್ತು ಕರ್ತರಿಗೆ ಗ್ರಾಮಾಧಿಕಾರಿಗಳ ಮೇಲೆ ಬಿಲ್ಲಿನಲ್ಲಿ ಈಗ ಕೊಟ್ಟಿರುವ
ಚಾರಣೆಯನ್ನು ನಡೆಸಲು ಅನುಕೂಲಪಡಿಸಿಕೊಡಬೇಕೆಂಬುದಾಗಿ ನಾವು ಯೋಚಿಸುತ್ತೇವೆ. ಈ ಸಂಬ
ಬಿಲ್ಲು ಕಮಿಟಿಗೆ ಹಾಕಲ್ಪಡುವ ಸ್ಥಿತಿಗೆ ಬಂದಾಗ ಮಾಡಬೇಕೆಂದು ನಾವು ನಿಲ್ಲಿಸಿಕೊಂಡಿರುವೆವು. ಇನ್ನೂ
ದರೆ, ಕೆಲಸದಿಂದ ನಿವೃತ್ತರಾದ ಅಸಿಸ್ಟೆಂಟ್ ಕಮಿಷನರ್ ಮಿ|| ಹೇಮಾ ಹನುಮಂತ್ಯೆಯನವರಿಂದ ಬಂದ
ಸಲ್ಪಟ್ಟ ಅರ್ಜಿಯಲ್ಲಿ ಈ ಬಿಲ್ಲನ್ನು ಚರ್ಚಿಸುವ ನಿಯುಕ್ತ ಸಮಾಜದವರು ಪರೀಕ್ಷಿಸುವುದಕ್ಕೆ ಯೋಗ್ಯ
ಸಲಹೆಗಳಿವೆ. ಕೆಲವು ಸಂದರ್ಭಗಳಲ್ಲಿ ಗಂಡು ಮಗುವಿಲ್ಲದ ವಿಧವೆಯನ್ನು ಒಂದು ಉದ್ಯೋಗದ ಹಕ್ಕು
ಲ್ಮಾಡಿಕೊಂಡು ಆಕೆಯು ತನಗೆ ಬದಲಾಗಿ ಇನ್ನೊಬ್ಬರನ್ನು ಕೆಲಸಕ್ಕೆ ನೇಮಿಸಿ ಸದರಿ ಉದ್ಯೋಗದ ಸಂ
ಒಂದು ಭಾಗವನ್ನು ತಾನು ಇಟ್ಟುಕೊಳ್ಳುವಂತೆ ಅವಕಾಶಕೊಡುವುದು ಅವಶ್ಯಕವೆಂಬ ವಿಷಯದಲ್ಲಿ ಸದ
ರು ಹೇಳಿರುವ ಮಾತುಗಳನ್ನು ಇಲ್ಲಿ ನಾವು ಸೂಚಿಸಬಹುದು. ಕುಟುಂಬದ ಸ್ವತ್ತು ವಿಭಾಗವಾಗುವಾಗ
ಜೆಂದಿಗೆಯಲ್ಲಿ ಸೇರಿದುದೆಂದು ಭಾವಿಸಲ್ಪಟ್ಟು ಮೃತಪಟ್ಟ ಗಂಡನಾದವನ ಭಾಗಕ್ಕೆ ಸದರಿ ಉದ್ಯೋಗವು
ಸಂದರ್ಭದಲ್ಲಿ ಸದರೀ ವಿಧವೆಗೆ, ಗಂಡನು ಸತ್ತಾಗ ಅವನ ಸ್ಥಾನಕ್ಕೆ ಬರಲು ಮಗನಿಲ್ಲದಿದ್ದರೆ, ಸದರಿ ಉದ್
ಶುದ್ಧಾಂಗವಾಗಿ ತಪ್ಪಿ ಆದರಿಂದ ಪ್ರಾಯಶಃ ಅವಳ ಜೀವನಕ್ಕೆ ಮಾರ್ಗವಿಲ್ಲದೆ ಹೋಗಬಹುದಾದುದರಿಂದ
ಬಹುಕಷ್ಟವಾಗುತ್ತದೆ. ಅವಳ ಅವಶ್ಯಕತೆಗಳಿಗೂ ಸರ್ಕಾರಿ ಉದ್ಯೋಗದ ಅವಶ್ಯಕತೆಗಳಿಗೂ ಹ
ಡುವುದು ಹೇಗೆ ಎಂದು ಯೋಚಿಸುವುದು ಮೊದಲು ನಿಯುಕ್ತ ಸಮಾಜದವರ ಕೆಲಸವಾಗಿಯೂ ಅನುಕ
ಗಿಯೂ ಇರುವುದು. ಸಂದರ್ಭಗಳು ಹೀಗಿರುವುದರಿಂದ ಸದರಿ ಬಿಲ್ಲನ್ನು ಸಭೆಯಲ್ಲಿ ಓದಬೇಕೆಂದೂ ಕ
ಸಿ ರಿಪೋರ್ಟು ಮಾಡುವುದಕ್ಕೆ 33ನೆ ನಿಬಂಧನೆಯ 2ನೆ ವಾಕ್ಯದ ಮೇರೆ ಸಭೆಯವರು ಒಂದು ನಿಯುಕ್ತ
ಸುವಂತೆ ಅಪ್ಪಣೆ ಕೊಡಬೇಕೆಂದೂ ಬಿನ್ನವಿಸುತ್ತೇವೆ.

ಮಿ|| ರಂಗೈಯ್ಯಂಗಾರ್:—

ಮೊದಲನೆಯ ಕೌನ್ಸಿಲರು ಈಗತಾನೆ ಮಾಡಿದ ಬಿನ್ನಹವನ್ನು ನಾವು ಮನಃಪೂರ್ವಕವಾಗಿ ಅನು
ಬಿಲ್ಲಿನ ಮೂಲ ತತ್ವಗಳನ್ನು ದೊಡ್ಡದೊಡ್ಡ ಸರ್ಕಾರಿ ಆಫೀಸರುಗಳು ಬಹಳವಾಗಿ ಚರ್ಚಿಸಿರುತ್ತಾರೆ.
ಟು ಮಾಡುವ ಪರವಾಗಿ ಈಗ ಆಗಲೆ ಹೇಳಿರುವುದಕ್ಕೆ ಮೇಲೆ ಇನ್ನೂ ಹೆಚ್ಚಾಗಿ ಹೇಳುವುದಕ್ಕೆ ಏನೂ ಇ
ನ ಪ್ರಸ್ತಾಪಕರೇ ಹೇಳಿದ ಹಾಗೆ ನಾನಾ ಕಾರಣಗಳಿಗಾಗಿ ಈ ಬಿಲ್ಲನ್ನು ಒಂದು ನಿಯುಕ್ತ ಸಮಾಜದ ಮು
ರಣವಾಗಿ ತಪಶೀಲಾಗಿ ಚರ್ಚಿಸಬೇಕು. ಈ ಬಿಲ್ಲನ್ನು ಒಂದು ನಿಯುಕ್ತ ಸಮಾಜಕ್ಕೆ ಹಾಕಬೇಕೆಂದು

ಮಿ|| ಎ. ರಂಗಸ್ವಾಮ್ಯೆಯ್ಯಂಗಾರ್:—

ತಮ್ಮಗಳ ಅಪ್ಪಣೆಯಾದರೆ ಈಗ ಒಂದೆರಡು ಮಾತನಾಡಬೇಕೆಂದಿದ್ದೇವೆ. ನಾವು ಮಾಡಬೇಕೆಂ
ಗಳನ್ನೂ ಬಿಲ್ಲು ನಿಯುಕ್ತಸಮಾಜದ ಮುಂದೆ ಬಂದಾಗ ಮಾಡಬೇಕೆಂದು ನಿಲ್ಲಿಸಿಕೊಂಡಿರುವೆವು. ಅದ
ಸಮಾಜಕ್ಕೆ ಹಾಕುವುದಕ್ಕೆ ಮೊದಲು ಒಂದು ಮೂಲತತ್ವವನ್ನು ಕುರಿತು ಮಾತನಾಡಲಪೇಕ್ಷಿಸುತ್ತೇವೆ.
ಳು ಗ್ರಾಮ ಉದ್ಯೋಗಗಳ ವಂಶಪಾರಂಪರ್ಯವಾದ ಸ್ವಭಾವವನ್ನು ಕೆಡಿಸುವುದಾಗಿ ಎಣಿಸಿ ಇದೆ. ಬಿ
ಆದನ್ನು ನಿಯುಕ್ತಸಮಾಜಕ್ಕೆ ಕಳುಹಿಸುವುದಕ್ಕೆ ಮುಂಚೆ ಈ ಸಭೆಯವರು ಮೇಲ್ಕಂಡ ಅಂಶವನ್ನು
ಒಳ್ಳೆಯದಾಗಿ ತೋರುತ್ತದೆ, ಅಥವಾ ಈ ಸಭೆಯವರು ಆ ಅಂಶವನ್ನು ಕುರಿತು ತಮ್ಮ ಅಭಿಪ್ರಾಯವ
ಸಮಾಜದವರು ತಮ್ಮ ಚರ್ಚೆಗಳಲ್ಲಿ ಮೇಲ್ಕಂಡ ಅಭಿಪ್ರಾಯಕ್ಕೆ ಅನುಸಾರವಾಗಿ ಬಿಲ್ಲಿನ ನಿಯಮ

219
7/17

ಸಾಮೈಯ್ಯಂಗಾರು) ; ಮಿ|| ಟಿ. ಆನಂದರಾವ್ ; ದೀವಾನರು ; ಮಿ|| ಕೆ. ಪಿ. ಪುಟ್ಟಣ್ಣ ಶೆಟ್ಟಿ.]

ಜಿದರೆ ಇಷ್ಟು ದೀರ್ಘಕಾಲ ಪರ್ಯಂತ ಗ್ರಾಮ ಉದ್ಯೋಗಸ್ಥರಿಂದ ಕೆಲಸ ತೆಗೆದುಕೊಳ್ಳುವುದು ಸರ್ಕಾರದವ ಇರುತ್ತಿತ್ತು. ಮತ್ತೊಂದು ಕಾರಣದಿಂದಲೂ ಈ ಸಂಗತಿಯು ಮುಖ್ಯವಾದುದಾಗಿದೆ. ಗ್ರಾಮಸ್ಥರ ಸಂಸ್ಥೆ ಯವನ್ನು ಅಭಿವೃದ್ಧಿಪಡಿಸಿ ಅವರಿಗೆ ಮೇಲ್ವಿಚಾರಣೆಯ ಕೆಲವು ಅಧಿಕಾರಗಳನ್ನು ನಾವು ಕೊಡಲಪೇಕ್ಷಿಸಿದರೆ ಗ್ರಾ ರು ಅಂಥಾ ಸಂಸ್ಥೆಪಟ್ಟವಾದ ಜನಸಮೂಹದ ಒಂದು ಮುಖ್ಯವಾದ ಅಂಗವಾಗಿ ಇರುವರು. ಒಂದೇ ಕುಟುಂ ದ್ಯೋಗಗಳು ನಿಲ್ಲುವಂತೆ ಪ್ರಯತ್ನ ಮಾಡಿದ ಹೊರತು ಈ ಉದ್ಯೋಗಗಳಲ್ಲಿರುವ ಜನರು ಅವಶ್ಯವಾದಷ್ಟು ಪಡೆವಲಾರರು. ವಿದ್ಯಾಸಂಬಂಧವಾದ ಮತ್ತು ಇತರ ಯೋಗ್ಯತೆಗಳನ್ನು ಹೊಂದಿರುವುದು ಒಳ್ಳೆಯದೆ ಸರಿ, ಗ್ರಾಮ ಉದ್ಯೋಗದ ವಂಶಪರಂಪರಾಗತವಾದ ಸ್ವಭಾವದಿಂದಲೂ ಒಂದು ಗ್ರಾಮದಲ್ಲಿ ಬಹುಕಾಲದಿಂದ ವಾಸ ಟಿ ಉಂಟಾಗುವ ಮುಕ್ತು ಗ್ರಾಮ ಉದ್ಯೋಗಸ್ಥರಿಗೆ ಅತ್ಯವಶ್ಯಕವಾದ ಗೌರವವು ಬರಲಾರದು. ಆದುದರಿಂದ ಅಂಶವನ್ನು ಈ ಸಭೆಯ ಪರ್ಯಾಲೋಚನೆಗೆ ನಾವು ತರುವುದು ನ್ಯಾಯವಾಗಿ ತೋರುತ್ತದೆ. ಈಗ ವಿರ್ ಷನಗಳು ಈ ಉದ್ಯೋಗಗಳ ವಂಶ ಪರಂಪರಾಗತವಾದ ಸ್ವಭಾವವನ್ನು ತೊಂದರೆಪಡಿಸಬಹುದೆಂದು ನಮಗೆ ಗ್ರಾಮ ಉದ್ಯೋಗಸ್ಥರ ಕುಟುಂಬದಿಂದ ಉದ್ಯೋಗಕ್ಕೆ ಬೇಕಾದ ಮನುಷ್ಯನನ್ನು ಆರಿಸುವ ಸ್ವಾತಂತ್ರ್ಯವ ಮಿಷನರುಗಳಿಗೆ ಕೊಟ್ಟಿರುವುದು ನಿಜವೆ, ಆದರೆ ಒಂದಾವರ್ತಿ ಆ ಕುಟುಂಬದಲ್ಲಿ ಯೋಗ್ಯತೆ ಹೊಂದಿದವನು ಆ ಉದ್ಯೋಗವು ಶುದ್ಧಾಂಗವಾಗಿ ಕುಟುಂಬದ ಹೊರಗೆ ಹೊರಟುಹೋಗಬಹುದು.

ಮಿ|| ಟಿ. ಆನಂದರಾವ್ :—

ಗೊತ್ತಿಗೆ ಬರದೆ ಹೋಗಲಿಲ್ಲ. ಗ್ರಾಮ ಉದ್ಯೋಗಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಯಾವುದು ಅವಶ್ಯವೋ ಗ್ರಾಮ ಉದ್ಯೋಗಗಳ ಎಲ್ಲಾ ಸಂಪ್ರದಾಯಗಳಿಗೂ ಗೌರವ ಕೊಡುವೆವೆಂದು ನಾವು ಹೇಳಿದೆವು.

ದೀವಾನರು :—

ದ್ಯೋಗಗಳಿಗೆ ನೇಮಕಗಳನ್ನು ಮಾಡುವುದರಲ್ಲಿ ನಾವು ಬಹುಕಾಲದಿಂದ ಅನುಸರಿಸುತ್ತಿದ್ದ ನಿಯಮವನ್ನು ಬಿಟ್ಟುಹೋಗುವ ಅಭಿಪ್ರಾಯವು ಇರುವಂತೆ ನಮಗೆ ತೋರುವುದಿಲ್ಲ. ವಂಶ ಪರಂಪರಾಗತದ ನಿಯಮವು ಸಂ ಗೀಕರಿಸಲ್ಪಟ್ಟಿರುವುದು, ಅದು ಒಬ್ಬ ಮನುಷ್ಯನ ಯೋಗ್ಯತೆಗೆ ವಿರುದ್ಧವಾಗಿರುವ ಸಂದರ್ಭದಲ್ಲಿ ಮಾತ್ರ ಅದ ಗಬೇಕಾಗುವುದು, ಆಗಲೂ ಕೂಡ ಉದ್ಯೋಗವನ್ನು ಕುಟುಂಬದಿಂದ ಶುದ್ಧಾಂಗವಾಗಿ ತೆಗೆದುಕೊಂಡುಬಿಡು.

ತವನ್ನು ಸಭೆಯ ಸಮ್ಮತಿಗೆ ಹಾಕಿ ನಿರ್ವಹಿಸಲಾಯಿತು ; ಮತ್ತು ಬಿಲ್ಲನ್ನು ಮಿ|| ಟಿ. ಆನಂದರಾವ್, ಮಿ|| ಎ. ಗಾರ್, ಮಿ|| ವಿ. ಪಿ. ನರಸಿಂಹಯ್ಯಂಗಾರ್, ಮಿ|| ಎಂ. ಕಾಂತರಾಜ ಅರಸು, ಮತ್ತು ಮಿ|| ಎಂ. ಸಿ. ರಂಗೈ ನು ಸೇರಿರುವ ಒಂದು ನಿಯುಕ್ತಸಮಾಜಕ್ಕೆ 1907ರ ನವೆಂಬರ 28ನೆ ತಾರೀಖಿಗೆ ಮುಂಚೆ ರಿಪೋರ್ಟು ಮಾಡಬ ಯಿತು.

ಪೊಲೀಸು ಬಿಲ್ಲು.

ಮಿ|| ಕೆ. ಪಿ. ಪುಟ್ಟಣ್ಣಶೆಟ್ಟಿ :—

ಮುಖ್ಯವಾದ ಮೂಲತತ್ವಗಳನ್ನು ನಮ್ಮ ಮೊದಲಿನ ಉಪನ್ಯಾಸದಲ್ಲಿ ಮೊದಲೇ ವಿವರಿಸಿದೇವೆ. ಇದಕ್ಕೆ ನಿಸ್ ನ ಪತ್ರಿಕೆಗಳಲ್ಲಿ ಬಂದ ಕೆಲವು ಆಕ್ಷೇಪಣೆಗಳನ್ನು ಮಾತ್ರ ಕುರಿತು ಇಲ್ಲಿ ಹೇಳುವೆವು.

ಬಂಧಪಟ್ಟು ಎರಡು ತರದ ಆಕ್ಷೇಪಣೆಗಳು ಹುಟ್ಟಿವೆ. ಮೊದಲಿನ ಆಕ್ಷೇಪಣೆಯು ಅಮಲ್ದಾರರಿಗೂ ಡೆಪ್ಯುಟಿ ಪೊಲೀಸು ಅಧಿಕಾರಗಳನ್ನು ನಿಲ್ಲಿಸಿರುವುದನ್ನು ಕುರಿತುದಾಗಿದೆ ; ಎರಡನೆಯ ಆಕ್ಷೇಪಣೆಯು ಮೇಲ್ಕಂಡ ವಿರ್ವಾಹ ಗಳೂ ಕಾರ್ಯನಿರ್ವಾಹಾಧಿಕಾರಗಳನ್ನೂ ಜುಡಿಷಲ್ ಯಾ ದಂಡನಾ ಅಧಿಕಾರಗಳನ್ನೂ ಪ್ರತ್ಯೇಕಿಸಬೇಕೆಂಬ ಮೂ ಬಿಲ್ಲು ಗಣನೆಗೆ ತೆಗೆದುಕೊಳ್ಳಲಿಲ್ಲವೆಂದು ಯೋಚಿಸಿ ಅದರಲ್ಲಿ ತಪ್ಪು ಕಂಡು ಹಿಡಿಯುತ್ತದೆ. ಮೊದಲನೆಯ ಷಯದಲ್ಲಿ—ಅಮಲ್ದಾರರೂ ಡೆಪ್ಯುಟಿ ಕಮಿಷನರೂ ಪೊಲೀಸು ಅಧಿಕಾರಿಗಳ ಮೇಲೆ ಮೇಲ್ವಿಚಾರಣೆಯ ಅಧಿಕಾ ದರಿಂದ ಉಂಟಾಗುವ ಪ್ರಯೋಜನಗಳನ್ನು ಕುರಿತು ಹಿಂದಿನ ಸಂಗದಲ್ಲಿ ನಾವ್ ಸಾಕಾದಷ್ಟು ಹೇಳಿರುವುದರಿಂದ ರಿತು ಇನ್ನೂ ಹೇಳುವುದು ಅನವಶ್ಯವಾಗಿ ತೋರುತ್ತದೆ. ಆದರೂ ಮೇಲ್ಕಂಡ ಬಿಲ್ಲು ಈಗಿನ ವಿದ್ಯಮಾನಗಳ ಸುತ್ತದೆಯೆಂದೂ ಅದು ಈಗಿನ ಕ್ರಮವನ್ನು ಎಲ್ಲಿ ಬಿಟ್ಟುಹೋಗುತ್ತದೆಯೋ ಆ ಸಂದರ್ಭದಲ್ಲಿ ಪೊಲೀಸು ಅಧಿ ಸ್ತುವಕ್ಕಿಂತ ಹೆಚ್ಚು ಸ್ವಾತಂತ್ರ್ಯವನ್ನು ಕೊಡುತ್ತದೆಯೆಂದೂ ಹೇಳಬಹುದು. ಈ ಬಿಲ್ಲು ಬಹುಕಾಲದಿಂದ ಡೆಪ್ಯುಟಿ ಕಮಿಷನರಿಗೂ ಪೊಲೀಸು ಅಧಿಕಾರಗಳನ್ನು ಮುಂದೆಯೂ ನಡೆಸುತ್ತದೆಯೇ ಹೊರತು ಮತ್ತೇನೂ ನವು ಯಾವ ಅನಾನುಕೂಲವನ್ನಾಗಲಿ ಅನ್ಯಾಯವನ್ನಾಗಲಿ ಉಂಟುಮಾಡುವಂತೆ ಕಾಣಬರುವುದಿಲ್ಲ. ಆದುದ ನಿರ್ವಾಹಾಧಿಕಾರಿಗಳಿಗೆ ಅವರ ಪೊಲೀಸು ಅಧಿಕಾರಗಳನ್ನು ತಪ್ಪಿಸುವುದಕ್ಕೆ ಸರಿಯಾದ ಕಾರಣಗಳನ್ನು ತೋ ಈಗಿನ ಕ್ರಮವನ್ನು ಆಕ್ಷೇಪಿಸುವವರ ಮೇಲೆ ಬಿದ್ದಿರುತ್ತದೆ. ಪೊಲೀಸು ಕಾರ್ಯನಿರ್ವಾಹಾಧಿಕಾರಗಳನ್ನು ತಾಲ್ಲೂಕಿನ ಮುಖ್ಯವಾದ ಕಾರ್ಯನಿರ್ವಾಹಕಾರಿಗಳಿಗೆ ಕೊಡುವುದಕ್ಕೆ ನ್ಯಾಯವಾಗಿ ಯಾವ ಆಕ್ಷೇಪಣೆ

[ಮಿ॥ ಕೆ. ಪಿ. ಪುಟ್ಟಣ್ಣ ಶೆಟ್ಟಿ; ಮಿ॥ ಟಿ. ಆನಂದರಾವ್; ಮಿ॥ ನಾಗಪ್ಪ.]

ಈ ಬಿಲ್ಲು ಕಾರ್ಯನಿರ್ವಾಹಾಧಿಕಾರಗಳ ಜುಡಿಷಲ್ ಯಾ ದಂಡನಾಧಿಕಾರಗಳ ಸೇರಿಕೆಯನ್ನು ಸ್ಥಿರಪಡಿಸುತ್ತದೆ, ಎಂಬ ಆಕ್ಷೇಪಣೆಯು ಬಿಲ್ಲಿನ ಅಭಿಪ್ರಾಯದ ಮತ್ತು ಉದ್ದೇಶಗಳ ತಪ್ಪು ತಿಳಿವಳಿಕೆಯ ಮೇಲೆ ಹುಟ್ಟಿದೆ. ಕಾರ್ಯನಿರ್ವಾಹಾಧಿಕಾರಗಳ ಮತ್ತು ಜುಡಿಷಲ್ ಯಾ ದಂಡನಾಧಿಕಾರಗಳ ಸೇರಿಕೆಯನ್ನು ಕೊಂಡಾಡಿ ಇದೆ ಅಥವಾ ಲಘೂಕರಿಸಿ ಇದೆ ಎಂಬ ಊಹೆಯು ನ್ಯಾಯವಾದುದೆಂದು ತೋರಿಸುವುದಕ್ಕೆ ಬಿಲ್ಲಿನಲ್ಲಿಯಾಗಲಿ ಬಿಲ್ಲನ್ನು ಪ್ರಸ್ತಾಪಿಸುವುದರಲ್ಲಿ ನಾವು ಮಾಡಿದ ಉಪನ್ಯಾಸದಲ್ಲಿಯಾಗಲಿ ಏನೂ ಇರುವುದಿಲ್ಲ. ಈ ವಿಷಯವು ಬಹಳ ದೊಡ್ಡದಾಗಿಯೂ ಕಷ್ಟವಾದುದಾಗಿಯೂ ಇದೆ. ಇದನ್ನು ನಾನಾ ಮುಖವಾಗಿ ಆಲೋಚಿಸಬೇಕಾಗಿದೆ. ಪೊಲೀಸು ಸೈನ್ಯದ ಸಂಸ್ಥಾಪನೆ ಸುಶಿಕ್ಷಣಗಳನ್ನೆ ಮುಖ್ಯ ವಿಷಯವಾಗಿ ಉಳ್ಳ ಒಂದು ಬಿಲ್ಲಿನಲ್ಲಿ ಈ ವಿಷಯವನ್ನು ಚೆನ್ನಾಗಿ ಹೇಳುವುದಕ್ಕೆ ಆಗುವುದಿಲ್ಲ. ಈ ಬಿಲ್ಲಿನಲ್ಲಿ ಮೇಲ್ಕಂಡ ಕಾರ್ಯನಿರ್ವಾಹಾಧಿಕಾರಿಗಳ ಪೊಲೀಸು ಅಧಿಕಾರಗಳನ್ನು ಮುಂದೆಯೂ ನಡೆಸುವುದು ಒಳ್ಳೆಯದಲ್ಲವೆ, ಎಂಬುವುದನ್ನು ಮಾತ್ರ ನಾವು ಇಲ್ಲಿ ಯೋಚಿಸಬೇಕಾಗಿದೆ. ಈ ಸಂಬಂಧದಲ್ಲಿ ಕಾರ್ಯನಿರ್ವಾಹಾಧಿಕಾರಗಳನ್ನೂ ಜುಡಿಷಲ್ ಯಾ ದಂಡನಾಧಿಕಾರಗಳನ್ನೂ ಪ್ರತ್ಯೇಕಿಸುವ ಶುದ್ಧಾಂಗವಾಗಿ ಬೇರೆ ವಿಷಯವನ್ನು ಚರ್ಚಿಸುವುದರಿಂದ ಯಾವ ಪ್ರಯೋಜನವೂ ನಮಗೆ ತೋರಲಿಲ್ಲ. ಆದರೂ ಈ ವಿಷಯವನ್ನು ಸರ್ಕಾರದವರು ಆಲೋಚಿಸುತ್ತಿದಾರೆಂದು ನಾವು ಹೇಳಬಹುದು.

ಇಷ್ಟುಮಟ್ಟಿಗೆ ಹೇಳಿ ಸಭೆಯಲ್ಲಿ ಈ ಬಿಲ್ಲನ್ನು ಓದಬೇಕೆಂದು ನಾವು ಬಿನ್ನವಿಸುವೆವು.

ಮಿ॥ ಬಿ. ನಾಗಪ್ಪನವರು ಈ ಬಿನ್ನಹವನ್ನು ಅನುಮೋದಿಸಿ ಈ ಬಿಲ್ಲಿನ ಸಾಮಾನ್ಯವಾದ ಮೂಲತತ್ವಗಳನ್ನು ತಾವು ಒಪ್ಪಿರುವರದಾಗಿ ಹೇಳಿದರು.

ಈ ಬಿನ್ನಹವನ್ನು ಸಭೆಯ ಸಮ್ಮತಿಗೆ ಹಾಕಿ ನಿರ್ವಹಿಸಲಾಯಿತು ಮತ್ತು ಬಿಲ್ಲನ್ನು ಮಿ॥ ಕೆ. ಪಿ. ಪುಟ್ಟಣ್ಣಶೆಟ್ಟಿ, ಮಿ॥ ವಿ. ಎನ್. ನರಸಿಂಹೈಯ್ಯಂಗಾರ್, ಮಿ॥ ಎಂ. ಸಿ. ರಂಗೈಯ್ಯಂಗಾರ್ ಮತ್ತು ಮಿ॥ ಬಿ. ನಾಗಪ್ಪ, ಇವರು ಸೇರಿರುವ ನಿಯುಕ್ತ ಸಮಾಜಕ್ಕೆ 1907ರ ನವೆಂಬರು 28ಕ್ಕೆ ಮೊದಲು ರಿಪೋರ್ಟು ಮಾಡುವ ಬಗ್ಗೆ ಕಳುಹಿಸಲಾಯಿತು.

1900ರ 3ನೆಯದಾದ ಕೋರ್ಟು ರುಸುಮುಗಳ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವ ಬಿಲ್ಲು.

ಮಿ॥ ಟಿ. ಆನಂದರಾವ್ :—

ಅಯ್ಯಾ,

ಈ ವಿಷಯದಲ್ಲಿ ವಿಧಿಸಲ್ಪಟ್ಟ ಕ್ರಮಗಳು ನೆರವೇರಿರುವುದರಿಂದ 1900ರ 3ನೆಯದಾದ ಮೈಸೂರು ಕೋರ್ಟು ಫೀಜು ರೆಗ್ಯುಲೇಷನಿನ 4ನೆಯ ಪ್ರಕರಣವನ್ನು ತಿದ್ದುಪಾಟು ಮಾಡುವ ಬಿಲ್ಲನ್ನು 33ನೆ ನಿಬಂಧನೆಯ ಮೇರೆ ಈ ಸಭೆಯಲ್ಲಿ ಓದಬೇಕೆಂದು ನಾವು ಬಿನ್ನವಿಸುವೆವು.

2. ಈ ತಿದ್ದುಪಾಟಿಗೆ ಇರುವ ನ್ಯಾಯವಾದ ಕಾರಣವನ್ನು ಹಿಂದಿನ ದಿವಸದ ಸಭೆಯಲ್ಲಿ ನಾವು ಹೇಳಿರುವುದಲ್ಲದೆ ಉದ್ದೇಶಗಳ ಮತ್ತು ಕಾರಣಗಳ ವಿವರಣೆಯಲ್ಲಿಯೂ ಕೂಡ ಹೇಳಿ ಇದೆ. ಇದಲ್ಲದೆ ಜಮೀನಿನ ಒಡೆಯನಿಗೂ ಒಕ್ಕಲಿಗೂ ಇರುವ ವ್ಯಾಜ್ಯಗಳಲ್ಲಿ ಈಗಿನ ನ್ಯಾಯರೀತ್ಯಾ, ಯಾವ ಜಮೀನಿನಿಂದ ಒಬ್ಬ ಒಕ್ಕಲು ಅನ್ಯಾಯವಾಗಿ ಹೊರಡಿಸಲ್ಪಟ್ಟಿರುತ್ತಾನೆಯೋ ಅಂಥಾ ಜಮೀನಿನ ಸ್ವಾಧೀನತೆಯನ್ನು ಪಡೆಯುವುದಕ್ಕಾಗಿ ಒಕ್ಕಲು ಜಮೀನಿನ ಒಡೆಯನ ಮೇಲೆ ವ್ಯಾಜ್ಯ ಮಾಡುವಾಗ ಕೋರ್ಟು ರುಸುಮಿನ ರೆಗ್ಯುಲೇಷನಿನ 4ನೆ ಪ್ರಕರಣದ (Xi) (ಇ) ವಾಕ್ಯದಲ್ಲಿ ಹೇಳಿರುವ ಮೇರೆ ವರ್ಷಗಟ್ಲೆಯ ಗುತ್ತಿಗೆ ಅಥವಾ ಬಾಡಿಗೆಗೆ ಅನುಗುಣವಾಗಿ ಕೊಡತಕ್ಕ ಕೋರ್ಟು ರುಸುಮನ್ನು ಲೆಕ್ಕ ಮಾಡಲಾಗುವುದು. ಆದರೆ ಒಕ್ಕಲು ಅನ್ಯಾಯವಾಗಿ ಸ್ವಾಧೀನದಲ್ಲಿಟ್ಟುಕೊಂಡಿರುವ ಜಮೀನಿನ ಸ್ವಾಧೀನತೆಯನ್ನು ಪಡೆಯಲು ಜಮೀನಿನ ಒಡೆಯನು ಒಕ್ಕಲಿನ ಮೇಲೆ ವ್ಯಾಜ್ಯ ಮಾಡುವಾಗ ಬೇರೆ ಆಧಾರದ ಮೇಲೆ ಎಂದರೆ, ಬಾಡಿಗೆ ಯಾ ಗುತ್ತಿಗೆಯನ್ನು ಬಿಟ್ಟು ಜಮೀನಿನ ಬೆಲೆಯ ಮೇಲೆ ಕೋರ್ಟು ರುಸುಮು ಲೆಕ್ಕ ಮಾಡಲ್ಪಡುತ್ತದೆ. ಪ್ರತಿ ಸಂದರ್ಭದಲ್ಲಿಯೂ ವರ್ಷಗಟ್ಲೆಯ ಗುತ್ತಿಗೆಯ ಮೇರೆ ಕೋರ್ಟು ರುಸುಮನ್ನು ಲೆಕ್ಕ ಮಾಡುವ ಹಾಗೆ ಈಗಿನ ನಿಯಮವನ್ನು ಬದಲಾಯಿಸಲು ಬಿಲ್ಲಿನಲ್ಲಿ ಯೋಚಿಸಿ ಇದೆ. ಒಕ್ಕಲುತನದ ಷರತ್ತುಗಳನ್ನು ನ್ಯಾಯಕ್ಕೆ ಮೀರಿ ಈಗ ಆಡಿಗಡಿಗೆ ನಡೆಯುವ ಹಾಗೆ ಎಳೆದಾಡುವ ವಿಲೋಭನೆಯನ್ನು ತಪ್ಪಿಸುವುದಕ್ಕೋಸ್ಕರ ಒಂದು ಕನಿಷ್ಠ ಮೊತ್ತವನ್ನು ಕೋರ್ಟು ರುಸುಮಾಗಿ ಗೊತ್ತು ಮಾಡುವುದಾಗಿ ಯೋಚಿಸಿ ಇದೆ. ಇದು ಹೇಗೆಂದರೆ, ಕೊಡತಕ್ಕ ಕೋರ್ಟು ರುಸುಮು ಒಂದು ಗೊತ್ತಾದ ರುಸುಮಾದ 10 ರೂಪಾಯಾಗಿ ಆಗಲಿ ಅಥವಾ ಕಡೇಸಲದ ವರ್ಷಗಟ್ಲೆಯ ಬಾಡಿಗೆ ಯಾ ಗುತ್ತಿಗೆಗೆ ಅನುಗುಣವಾಗಿಯಾಗಲಿ, ಇವೆರಡರಲ್ಲಿ ಯಾವುದು ಹೆಚ್ಚಾಗಿದೆಯೋ ಅದಾಗಿರಬೇಕು. ಈಗ ಉದ್ದೇಶಿಸಿರುವ ಬಿಲ್ಲು ಚಿಕ್ಕದಾಗಿಯೂ ಸುಲಭವಾಗಿಯೂ ಇದೆ. ನಿಯುಕ್ತ ಸಮಾಜದ ತಂಟೆಗೆ ಹೋಗದೆ ಬಿಲ್ಲನ್ನು ಕುರಿತು ಪ್ರವರ್ತಿಸಲು ಈ ಸಭೆಯು ಸಿದ್ಧವಾಗಿಲ್ಲ ಎಂಬುದನ್ನು ನಾವು ಅರಿಯೆವು.

ಮಿ॥ ಬಿ. ನಾಗಪ್ಪ :—

ಈ ಬಿನ್ನಹವನ್ನು ನಾವು ಅನುಮೋದಿಸುವೆವು. ನಿಯುಕ್ತ ಸಮಾಜದ ಆಲೋಚನೆಯ ಬಗ್ಗೆ ಈ ಬಿಲ್ಲನ್ನು ಕಳುಹಿಸಲ ವಶ್ಯವಿಲ್ಲ.

ಈ ಪ್ರಕರಣದಲ್ಲಿ ಸ್ಪಷ್ಟವಾಗಿ ಒಂದು ತಪ್ಪಿದೆ. ಅದೇನೆಂದರೆ, ಅದರಲ್ಲಿ ಒಬ್ಬ ಒಕ್ಕಲು ಜಮೀನಿನ ಒಡೆಯನಿಗೆ ಹಕ್ಕಿಲ್ಲವೆಂದು ಹೇಳುವ ಸಂದರ್ಭಗಳಿಗೆ ನಿಯಮ ಮಾಡದೆ ಇರುವುದರಿಂದ ವಾದಿಯು ತನ್ನ ದಾವಾ ಅರ್ಜಿಯನ್ನು ತಿದ್ದುಪಾಟು ಮಾಡಿ ತನ್ನ ಹಕ್ಕನ್ನು ರುಜುವಾತ್ತು ಮಾಡಲು ಕೋರ್ಟಿನವರು ಅಪ್ಪಣೆ ಕೊಡುತ್ತಾರೆ. ಅಂಥಾ ಸಂದರ್ಭಗಳಲ್ಲಿ ಹೆಚ್ಚು ಕೋರ್ಟು ರುಸುಮುಗಳನ್ನು ವಸೂಲ್ಮಾಡಲು ಕೋರ್ಟಿನವರಿಗೆ ಅಧಿಕಾರ ಕೊಡುವುದಕ್ಕೆ ಯಾವ ನಿಯಮವೂ ಇಲ್ಲ. ಅಧಿಕಾರ ಸರಹದ್ದಿನ ವಿಷಯವನ್ನು ಕುರಿತು ಕೂಡ ಕಷ್ಟವು ಬರುವುದು.

[ಮಿ|| ಬಿ. ನಾಗಪ್ಪ ; ಮಿ|| ರಂಗೈಯ್ಯಂಗಾರು.]

ಈ ಕೊರತೆಗಳನ್ನು ಪರಿಹರಿಸುವುದಕ್ಕೋಸ್ಕರ ಸಭೆಯು ಮುಂದಿನ ಸಂಗದಲ್ಲಿ ಈ ಬಿಲ್ಲನ್ನು ಕ್ರಮವಾಗಿ ಪರ್ಯಾಲೋಚಿಸುವಾಗ ಒಂದು ತಿದ್ದುಪಾಟನ್ನು ಹೇಳಬಹುದು.

ಮಿ|| ರಂಗೈಯ್ಯಂಗಾರು, 1905ರ 6ನೆ ಆಕ್ಟಿನಿಂದ ತಿದ್ದುಪಾಟಾಗಿರುವ ಬ್ರಿಟಿಷ್ ಇಂಡಿಯನ್ ಕೋರ್ಟ್ ಫೀಜು ಆಕ್ಟಿನ 7ನೆ ಪ್ರಕರಣದ (Xi)ನೆ ಪರಿಚ್ಛೇದದ (c. c.) ವಾಕ್ಯವನ್ನು ಓದಿ ಹೇಳಿದುದೇನಂದರೆ :—ಬ್ರಿಟಿಷ್ ಇಂಡಿಯನ್ ಆಕ್ಟಿನಲ್ಲಿ ಮಾಡಿರುವ ತಿದ್ದುಪಾಟು ಬಹಳ ಸುಲಭವಾಗಿ ಈಗ ನಾವು ಮಾಡಬೇಕೆಂದಿರುವ ತಿದ್ದುಪಾಟನಲ್ಲಿ ಯೋಚಿಸಿರುವ ಎಲ್ಲಾ ಸಂದರ್ಭಗಳಿಗೂ ಲಗಾವಾಗುತ್ತದೆ. ಒಂದು ಕನಿಷ್ಠ ರುಸುಮಾದ 10 ರೂಪಾಯನ್ನು ಗೊತ್ತುಮಾಡುವುದಕ್ಕೆ ಯಾವ ಕಾರಣವೂ ಇಲ್ಲ. ಬ್ರಿಟಿಷ್ ಇಂಡಿಯಾವಿನಲ್ಲಿ ಇರುವ ಹಾಗೆ ವರ್ಷಗಟ್ಟಳೆಯ ಗುತ್ತಿಗೆ ಯಾ ಬಾಡಿಗೆಯ ಬೆಲೆಗೆ ಅನುಗುಣವಾಗಿ ಕೋರ್ಟ್ ರುಸುಮನ್ನು ಕೊಡತಕ್ಕದ್ದೆಂದು ನಾವು ಸುಲಭವಾಗಿ ನಿಯಮ ಮಾಡಬಹುದು. ಈ ಬಿಲ್ಲಿನ ಕಾರ್ಯವನ್ನು ವಹಿಸಿರುವ ಪ್ರಾಜ್ಞರಾದ ಸಭಿಕರು ವರ್ಷಗಟ್ಲೆಯ ಗುತ್ತಿಗೆ ಯಾ ಬಾಡಿಗೆಯ ಮೇಲೆ ಕೋರ್ಟ್ ರುಸುಮನ್ನು ಕೊಟ್ಟು ಗುತ್ತಿಗೆಗೆ ಕೊಟ್ಟದ್ದ ಸ್ವತ್ತಿನ ಸ್ವಾಧೀನತೆಗಾಗಿ ಜಮೀನಿನ ಒಡೆಯನ ಮೇಲೆ ಒಕ್ಕಲು ವ್ಯಾಜ್ಯ ಮಾಡಬಹುದೆಂದು ಹೇಳಿ ಅಂಥಾ ರಿಯಾಯತಿಯನ್ನೇ ಜಮೀನಿನ ಒಡೆಯನಿಗೂ ತೋರಿಸಬೇಕೆಂದು ಕೇಳಿದರು. ಈ ವಿಷಯದಲ್ಲಿ ಅವರ ಅಭಿಪ್ರಾಯವೂ ನಮ್ಮ ಅಭಿಪ್ರಾಯವೂ ಒಂದೇಯಾಗಿದೆ. ಒಕ್ಕಲು ತರುವ ವ್ಯಾಜ್ಯಕ್ಕೆ ಸಂಬಂಧಪಡುವ ನಿಯಮವನ್ನು ತಿದ್ದುಪಾಟು ಮಾಡಬಹುದಾಗಿ ನನಗೆ ತೋರುತ್ತದೆ. ಈಗಿರುವ ನಿಯಮದ ಮೇರೆ ತನಗೆ ಗುತ್ತಿಗೆಗೆ ಸಿಕ್ಕಿದ್ದ ಅನ್ಯಾಯವಾಗಿ ತಪ್ಪಿಹೋಗಿರುವ ಸ್ವತ್ತಿನ ಸ್ವಾಧೀನತೆಯನ್ನು ಪುನಃ ಪಡೆಯುವುದಕ್ಕೋಸ್ಕರ ಸ್ವಲ್ಪ ಬೆಲೆಯ ಸ್ಟಾಂಪಿನ ಮೇಲೆ ಒಕ್ಕಲು ವ್ಯಾಜ್ಯ ಮಾಡಲು ಅನುಕೂಲವಾಗಿದೆ. ಜಮೀನಿನ ಒಡೆಯನು ಅದರ ಸ್ವಾಧೀನತೆಯನ್ನು ಕೊಡುವುದೇ ಇಲ್ಲವೆಂದು ಹೇಳಿದರೆ ಗುತ್ತಿಗೆಗೆ ಬರೆದುಕೊಟ್ಟದ್ದ ಸ್ವತ್ತಿನ ಸ್ವಾಧೀನತೆಯನ್ನು ಪಡೆಯುವುದಕ್ಕೋಸ್ಕರ ಸ್ವಲ್ಪ ಬೆಲೆಯ ಸ್ಟಾಂಪಿನಮೇಲೆ ಒಕ್ಕಲು ಜಮೀನಿನ ಒಡೆಯನ ಮೇಲೆ ವ್ಯಾಜ್ಯ ತರುವುದಕ್ಕೆ ಈಗಿರುವ ನಿಯಮದಲ್ಲಿ ಅವಕಾಶವೇ ಇಲ್ಲ. ಈಗ ಮಾಡಬೇಕೆಂದಿರುವ ತಿದ್ದುಪಾಟಿನ ಸಂಬಂಧದಲ್ಲಿ ಇರುವ ಮತ್ತೊಂದು ಕಷ್ಟವೇನೆಂದರೆ ಪ್ರತಿವಾದಿಯು ಶುದ್ಧಾಂಗವಾಗಿ ಗುತ್ತಿಗೆಯ ಕರಾರು ನಡೆಯಲೇ ಇಲ್ಲವೆಂದು ಹೇಳಿದರೆ ಏನಮಾಡಬೇಕು? ವಾದಿ ಪ್ರತಿವಾದಿಗಳಿಗೆ ಜಮೀನಿನ ಒಡೆಯನಾಗಿ ಮತ್ತು ಒಕ್ಕಲಾಗಿ ಸಂಬಂಧವಿರುವುದನ್ನು ಕುರಿತ ಒಂದು ನಿರ್ಧಾರಣಾಂಶದ ವಿಚಾರಣೆಗೆ ವ್ಯಾಜ್ಯವನ್ನು ನಿಬಂಧಿಸಬೇಕೇ, ಮತ್ತು ಅಂಥಾ ನಿರ್ಧಾರಣಾಂಶವು ವಾದಿಗೆ ವಿರೋಧವಾಗಿ ಕಂಡು ಬಂದರೆ ಸ್ಪೆಸಿಫಿಕ್ ರಿಲೀಫ್ ಆಕ್ಟಿನ 9ನೆ ಪ್ರಕರಣಕ್ಕೆ ಒಳಪಡುವ ಒಂದು ಪೂಟು ವ್ಯಾಜ್ಯದ ಸಾದೃಶ್ಯದ ಮೇಲೆ ವ್ಯಾಜ್ಯವನ್ನು ತಳ್ಳುಪಡಿ ಮಾಡಬೇಕೆ ಅಥವಾ ಹೆಚ್ಚು ಕೋರ್ಟ್ ರುಸುಮನ್ನು ಕೊಟ್ಟರೆ ಹಕ್ಕಿನ ವಿಷಯವಾಗಿ ವ್ಯಾಜ್ಯವು ವಿಚಾರಣೆಯಾಗುವುದಕೆ ಈ ಸಭೆಯವರು ನಿಯಮ ಮಾಡುವರೋ? ಇವೇ ಮೊದಲಾದ ವಿಷಯಗಳನ್ನು ಆಲೋಚಿಸಬೇಕಾಗಿದೆ.

